# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ 2026



" ಧುರಂಧರ್ ಕಟ್ ಮಾಡ್ಬಿಡಣ್ಣಾ, ಸೋಕಾಗಿರ್ತೈತೆ"

©Ashok Hemmige

ಬಿಡಿ ಪ್ರತಿ: ರೂ. 10/–

NANKI
CONVENTION HALL

# *Premium*
# WEDDING VENUE

Elevate your events at
Nanki Convention Hall.

A stylish and comfortable
venue perfect for Weddings,
Receptions, Conferences.










## Accessibility

- ☑ 1 km from Bus Stand
- ☑ 5 km from Airport
- ☑ 4 km from Railway Station

Airport Road
Hubli - Karnataka

+91 94482 83709

www.nankiconventionhall.com

# M P BIRLA INSTITUTE OF MANAGEMENT

*Associate Bharatiya Vidya Bhavan*

**APPROVED BY AICTE & AFFILIATED TO
DR. MANMOHAN SINGH BENGALURU CITY UNIVERSITY**

**DUAL SPECIALISATIONS OF YOUR CHOICE**
Marketing/Finance/HRM/
Business Analytics

## TWO YEAR FULL TIME MBA DEGREE AT BENGALURU

# ADMISSION OPEN

**2026-2028**

A distinguished standalone B-School in Bengaluru situated in the heart of the city.





## WHY MBA at MPBIM ?

- Achieved a 98% pass rate over the past 25 years.
- Excellent placement opportunities and paid internships.
- Faculty with strong industry credentials and academic qualifications.
- Value-added courses designed for industry needs.
- Industry connect events through Business Leadership Forum.
- Industrial visits for practical experience insights.
- Collaboration with North Dakota State University, USA and Bhavan's Management Institution.
- State-of-the-art Computer laboratory.
- Power BI, Tableau, and R programming.

**AN INNOVATIVE MBA PROGRAM OFFERING INTENSIVE BUSINESS MANAGEMENT EDUCATION.**

**SHAPE YOUR FUTURE WITH AN MBA PROGRAM AT A LEADING MANAGEMENT INSTITUTION IN BANGALORE.**

**ADMISSION PROCESS**

Eligibility: Any Graduate with 50% aggregate or above.
Admission through MAT/CAT/CMAT or any other recognised Aptitude Test.





**For Admission Contact:**
+91 99022 52842 / 99022 52981

www.mpbim.com
contact@mpbim.com

**M P Birla Institute of Management**
Associate Bharatiya Vidya Bhavan
43, Race Course Road, Bengaluru-560 001
Phone: 080-4277 2000

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457




Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 43
ಸಂಚಿಕೆ – 09
ಜೂನ್–2026

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ...

| | | |
|---|---|---|
| ಕಿಡಿ | ಪ್ರಕಾಶ್ | 2 |
| ಅವಿಸ್ಮರಣೀಯ ನಗೆಗಾರರು – 11 | ಶಿವಕುಮಾರ್ | 3 |
| ಅವರ ಶೂ ನಲ್ಲಿ...... | ಎಚ್. ಗೋಪಾಲಕೃಷ್ಣ | 7 |
| ಸಣ್ಣಮ್ಮನ ಸೊಸೆ | ಪುಷ್ಪಲತ ಟಿ.ಜಿ | 11 |
| ಕಲ್ಲಿಗಾಲವಯ್ಯ ಕಲ್ಲಿಗಾಲ | ನಳಿನಿ ಟಿ. ಭೀಮಪ್ಪ | 13 |
| ರವಷ್ಟು ಜಗಳ–ಕುಪ್ಪಿಲೇಹ ಸೌಖ್ಯ | ರಘುರಾಂ. ಎನ್.ವಿ. | 16 |
| ತುಂತುರು | ದಂನಆ | 19 |
| ಇಲಿಗಳು ಸಾರ್ ಇಲಿಗಳು | ಕೆ.ಎಸ್.ಸೋಮೇಶ್ವರ | 22 |
| ನಿಂಗಿಯ ಮ್ಯಾನೇಜಮೆಂಟ್ ಗಿರಿ | ಸುಮಾ ರಮೇಶ್ | 25 |
| ಕೊಶ್ಚನ್ ಕೋಮಲಮ್ಮ.. | ಸುಮನಾ | 27 |
| ವಸಂತಾಯಣ | ಸಿ.ಎ. ವಿಲಾಸ ನಾ ಹುದ್ದಾರ | 28 |
| ಒಂದು ಕಪ್ ಚಹಾದ ಕತೆ | ಗುಂಡುರಾವ್ ದೇಸಾಯಿ | 31 |
| ಬಾಲ್ಕಿಯ 'ಗೊಟಕ್' ಅನುಭವ ! | ಚಿತ್ರಾ ರಾಮಚಂದ್ರನ್ | 37 |
| ಒಳ್ಳೆ ತಮಾಷೆ.... | ರಾಂಕಿ ಬೆಳ್ಳೂರು | 40 |

ವ್ಯಂಗ್ಯ ಚಿತ್ರಗಳು : ಹೊರಪುಟ : ಅಶೋಕ್ ಹೆಮ್ಮಿಗೆ
ಒಳಪುಟಗಳು : ರಾಂಕಿ ಬೆಳ್ಳೂರ್

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010*



# ಅಪರಂಜಿ ಕಿಡಿ

● ಪ್ರಕಾಶ್

ಡಾಲರ್ ಎದುರು ರೂಪಾಯಿ ಮತ್ತಷ್ಟು ದುರ್ಬಲ

–ಪತ್ರಿಕೆ

ಅದಕ್ಕೇ ಯಾರನ್ನೂ ಎದುರಿಸಬಾರದು ಅಂತ ಹಿರಿಯರು ಹೇಳೋದು!!

* * *

ಐ.ಪಿ.ಎಲ್ ಮುಗಿದ ಮೇಲೆ ಉಂಟಾಗುವ ಖಿನ್ನತೆಗೆ ಪಥ್ಯವೇನು??

ಅದೇನು ಬಹು ಸುಲಭ! ಅಪರಂಜಿಗೆ ಚಂದಾದಾರರಾಗಿ !!

* * *

ಎಐ ತಂತ್ರಜ್ಞಾನ ಭಸ್ಮಾಸುರನಂತಾಗಬಾರದು

–ಹೇಳಿಕೆ

ನನಗೂ ಹಾಗೇ ಅನ್ನಿಸುತ್ತೆ ಅಂತ ಅಪರಂಜಿ ನಸು ನಕ್ಕಳಂತೆ !!

* * *

"ಮಾವು ನಷ್ಟ, ಅಧ್ಯಯನಕ್ಕೆ ತಂಡ."

–ದಿನಪತ್ರಿಕೆ

ತಂಡದ ಮಾಹಿತಿ ವಿವರಗಳು ಕಹಿಯಾಗಿರದಿದ್ದರೆ ಸಾಕು !!

* * *

"ಇ.ಡಿ. ಕಡಿಮೆಯಾದ ಬಂಧನ ಪ್ರಮಾಣ"

–ಸುದ್ದಿ

ಪರವಾಗಿಲ್ಲ, ಸತ್ಯಸಂಧರು ಹೆಚ್ಚುತ್ತಿದ್ದಾರೆ.!!

* * *

ಜಾರಿಯಾಗದ ಯೋಜನೆಗಳು : ಕಾರ್ಯದರ್ಶಿಗಳೇ ಹೊಣೆ.

– ಮಾನ್ಯ ಸಿ.ಎಂ

ಪಾಪ, ಯಾರೂ ಅವರಿಗೆ "ಕಾಯಕವೇ ಕೈಲಾಸ"


ಅಂತ ಉಪದೇಶಿಸಿಲ್ಲವೇನೋ ?!

* * *

ಅವಿಸ್ಮರಣೀಯ ನಗೆಗಾರರು–11

# ಎ.ಕೆ.ರಾಮಾನುಜನ್ (ಅಕ್ರೂರ)

ಶಿವಕುಮಾರ್



ಎಪ್ಪತ್ತರ ದಶಕದಲ್ಲಿ ಒಮ್ಮೆ ನನ್ನ ಅಕ್ಕನ ಮಗ ಷಿಕಾಗೋವಿನಿಂದ ಬೆಂಗಳೂರಿಗೆ ಬಂದಿದ್ದ. ನಮ್ಮ ಮಾತುಕತೆ ಎ.ಕೆ.ರಾಮಾನುಜನ್ ವಿಷಯಕ್ಕೆ ಹೊರಳಿತು. ಆ ಕಾಲಕ್ಕೆ ಅವರು ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರ ಪ್ರಾಧ್ಯಾಪಕ–ರಾಗಿದ್ದರು. ಅವರ ಆಂಗ್ಲ ಕವಿತೆಗಳು ಆ ದಿನಗಳಲ್ಲಿ ಬಹು ಖ್ಯಾತಿಯನ್ನು ಪಡೆದಿದ್ದವು. "ನಮ್ಮೂರಿನಲ್ಲಿ ರಾಮಾನುಜನ್ ಒಬ್ಬ ಸೆಲೆಬ್ರಿಟಿ. ಅವರನ್ನ ನಮ್ಮೂರಿನವರು ಎಷ್ಟು ಇಷ್ಟಪಡ್ತಾರೆ ಅಂದ್ರೆ, ನಮ್ಮ ಪಬ್ಲಿಕ್ ಬಸ್ಸುಗಳ ಒಳಗೆ ಫಲಕಗಳಲ್ಲಿ ಅವರ ಪದ್ಯಗಳ ಸಾಲುಗಳನ್ನು ಬರೆದು, ಎಲ್ಲರೂ ನೋಡಿ ಸಂಭ್ರಮಿಸುತ್ತಿದ್ದಾರೆ" ಅಂತ ಅವ ನನಗೆ ಹೇಳಿದ್ದ. ನನಗೇನೂ ಆಶ್ಚರ್ಯವಾಗಲಿಲ್ಲ ಬಿಡಿ. ಆಗಾಗಲೇ ನಾನು ಅವರ ಬರಹಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದೆ. ಅವರ "ಹೊಕ್ಕುಳೊಳು ಹೂವಿಲ್ಲ" ಎಂಬ ಕನ್ನಡ ಕವನ ಸಂಕಲನದ ಕವನಗಳನ್ನ ಲಂಕೇಶ್ ಪತ್ರಿಕೆಯಲ್ಲಿ ಓದಿದ ದಿನ, ನೇರವಾಗಿ ಸಪ್ನಾ ಪುಸ್ತಕ ಮಳಿಗೆಗೆ ಓಡಿ ಆ ಪುಸ್ತಕ ಖರೀದಿಸಿದ ನೆನಪು ಇಂದಿಗೂ ಹಸಿರಾಗಿದೆ. 1993 ರಲ್ಲಿ ಷಿಕಾಗೋದಲ್ಲಿ ಅವರು ಅಕಾಲ ಮೃತ್ಯುವನ್ನಪ್ಪಿದಾಗ ನಾನು ಕೆಲಸದ ನಿಮಿತ್ತ ಮುಂಬೈನಲ್ಲಿದ್ದೆ. ಅಲ್ಲಿಂದ ಹಿಂತಿರುಗುವಾಗ ಅವರ ಪುಸ್ತಕ "ಸ್ಪೀಕಿಂಗ್ ಆಫ್ ಶಿವ" ಆಂಗ್ಲ ಪುಸ್ತಕವನ್ನು ಅವರ ಸ್ಮರಣಾರ್ಥವಾಗಿ ಖರೀದಿಸಿದ್ದೆ.

(ಈಗ ಈ ಲೇಖನದ ಪ್ರಯುಕ್ತ, ಆ ಪುಸ್ತಕವನ್ನು ತಿರುವಿಹಾಕಲು ಕೈಗೆತ್ತಿಕೊಂಡಾಗ, ಆ ಪೇಪರ್‌ಬ್ಯಾಕಿನ ಬೆಲೆ ಕೇವಲ 85 ರೂ ಗಳಿರುವುದುನ್ನು ಗಮನಿಸಿದೆ. ಕಾಲ ನಿಜಕ್ಕೂ ಬದಲಾಗಿದೆ!) ಈ ಪುಸ್ತಕದಲ್ಲಿ ರಾಮಾನುಜನ್ ಬಸವಣ್ಣ, ಅಲ್ಲಮ ಪ್ರಭು ಮತ್ತು ಮಹದೇವಿಯಕ್ಕ ಇವರುಗಳ ಆಯ್ದ ವಚನಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿರುವುದೇ ಅಲ್ಲದೆ, ಈ ವಚನಕಾರರ ಬಗ್ಗೆ ಮೌಲ್ಯಯುತ ಮಾಹಿತಿಯನ್ನು ಬಹು ಸ್ವಾರಸ್ಯಮಯವಾಗಿ ತಿಳಿಸಿದ್ದಾರೆ.

ಅತ್ತಿಪಟ್ಟು ಕೃಷ್ಣಸ್ವಾಮಿ ರಾಮಾನುಜನ್ ಹುಟ್ಟಿದ್ದು ಮೈಸೂರಿನಲ್ಲಿ. ಪ್ರಾರಂಭಿಕ ವಿದ್ಯಾಭ್ಯಾಸವೆಲ್ಲ ಮೈಸೂರಿನಲ್ಲೇ ನಡೆಯಿತು. ಅನಂತರ ಇವರ ಉನ್ನತವ್ಯಾಸಂಗ ಅಮೆರಿಕೆಯಲ್ಲಿ ಆಯಿತು. ಇವರಿಗೆ ಇಂಡಿಯಾನಾ ಯೂನಿವರ್ಸಿಟಿ ಬ್ಲೂಮಿಂಗ್‌ಟನ್ ನಿಂದ ಭಾಷಾ ಶಾಸ್ತ್ರದಲ್ಲಿ ಡಾಕ್ಟರೇಟ್ ದೊರಕಿತು. ಅನಂತರ ಈ ಮೊದಲು ತಿಳಿಸಿದಂತೆ ಇವರು ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. 1999 ರಲ್ಲಿ ಇವರ ಕವನ ಸಂಗ್ರಹಕ್ಕೆ ಭಾರತದ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಯಿತು.

ಇವರು ಕೊರವಂಜಿಯ ಪ್ರಾರಂಭದ ದಿನಗಳಲ್ಲಿ ಮೈಸೂರಿನಲ್ಲಿ ವಿದ್ಯಾರ್ಥಿಯಾಗಿದ್ದು ಪತ್ರಿಕೆಗೆ ಬರಹಗಳನ್ನು ನೀಡಿದ್ದು ನಿಜಕ್ಕೂ ಹೆಮ್ಮೆಯ ವಿಷಯ. "ಅಕ್ರೂರ" ಎಂಬ

ಕಾವ್ಯನಾಮದಡಿಯಲ್ಲಿ ರಾಮಾನುಜನ್, ಕೊರವಂಜಿಗಾಗಿ ಅನೇಕ, ಹರಟೆ, ಕವನ ಗಳನ್ನು ರಚಿಸಿದರು. ಜೂನ್ 1945 ರಿಂದ ಫೆಬ್ರುವರಿ 1949 ರ ವರೆಗೆ ಇವರ ಲೇಖನ ವ್ಯವಸಾಯದ ಫಲ ಕೊರವಂಜಿಗೆ ದೊರಕಿತು. "ನಾರಾಯಣ ರಾಯರ ಉದ್ಯೋಗ" ಎಂಬ ಹರಟೆ, ಅಕ್ರೂರ ರವರು ಕೊರವಂಜಿಗೆ ಬರೆದ ಮೊದಲ ಲೇಖನ. ಕಥೆಯ ಸಂದರ್ಭ ಹೀಗಿದೆ.

ನಾರಾಯಣರಾಯರು ಆಫೀಸಿಗೆ ಹೋಗಿದ್ದಾಗ ಅವರ ಮನೆಯಲ್ಲಿ ಅವರ ಮಗ ಕಿಟ್ಟು ಮತ್ತು ಅವನ ಗೆಳೆಯ ಸುಬ್ಬು ಇಬ್ಬರೂ ಮನೆಯ ಡ್ರಾಯಿಂಗ್ ರೂಮಿನಲ್ಲಿ ಬೋಲಿಂಗ್ ಪ್ರಾಕ್ಟೀಸ್ ಮಾಡುತ್ತಿರುತ್ತಾರೆ. ಚಕ್ಕೋತನೆ ಕಾಯೊಂದು ಇವರಿಗೆ ಕ್ರಿಕೆಟ್ ಬಾಲ್. ಕಿಟ್ಟು ಎಸೆದ ಮೊದಲ ಬೋಲಿಂಗೇ ಮನೆಯ ಕಿಟಕಿಯ ಗಾಜಿನ ಮೇಲೆ ಅಪ್ಪಳಿಸುತ್ತದೆ. ಮುಂದಿನ ಘಟನಾವಳಿಯನ್ನು ಲೇಖಕರಿಂದಲೇ ಕೇಳಿ.

"ಇದೇನೋ ಮನೆಯಲ್ಲಿ ಗಲಾಟೆ?" ಎಂದು ಘರ್ಜಿಸುತ್ತಲೇ ಲಾಯರು ನಾರಾಯಣ ರಾಯರು ಮನೆಯೊಳಗೆ ನುಗ್ಗಿದರು. ಅವರ ಕಣ್ಣ ಮುಂದಿನ ನೋಟವು ಅವರ ಕೋಪವನ್ನು ಇಮ್ಮಡಿಸಿತು. ಎದುರಿಗೆ ಕಿಟ್ಟು ಬೆಪ್ಪಗೆ ನಿಂತಿದ್ದಾನೆ. ಸುಬ್ಬು ಕೆಳಗೆ 'ಕುಂತಿ' ದ್ದಾನೆ. ಅವನ ಮುಂದೆ ಲಕ್ಷಗಟ್ಟಲೆ ಗಾಜಿನ ಪರಮಾಣುಗಳು....ಆ ಚಿಕ್ಕ ಅಣುಗಳ ನಡುವೆ... ಹೊಟ್ಟೆಗಿಲ್ಲದವರ ಮಧ್ಯದ ರೇಷನ್ ಆಫೀಸರಂತೆ, ಚಿಕ್ಕ ಉಂಡೆಗಳ ಮಧ್ಯದ ದೊಡ್ಡ ಲಡ್ಡುವಿನಂತೆ ... ಒಂದು ದೊಡ್ಡ ಗ್ರಹವು ಶೋಭಿಸುತ್ತಿತ್ತು. ಆ ದೊಡ್ಡ ಗ್ರಹವೇ ಎದುರು ಮನೆಯಿಂದ 'ತರಲ್ಪಟ್ಟಿದ್ದ" ಚಕ್ಕೋತ.

"ಏನೋ ಕಿಟ್ಟು, ಆ ಪೋಲಿ ಸುಬ್ಬನ ಜೊತೆ ಸೇರಿಕೊಂಡು ಚೇಷ್ಟೆ ಮಾಡೋದಕ್ಕೆ ಶುರು ಮಾಡಿದೆಯಾ? ಲೋ ಸುಬ್ಬಾ ! ಇರು, ನಿನ್ನುಂಟ್ತನಾನೆಲ್ಲಾ ರಾಮಾಚಾರ್ರಿಗೆ ತಿಳಿಸ್ತೀನಿ ! ಇರಲಿ....ನಿಮ್ಮಿಬ್ಬರಲ್ಲಿ ಯಾರು ಒಡೆದದ್ದು ಗಾಜ್ನ ? ನಿಜ ಹೇಳಿ. ಇಲ್ದಿದ್ರೆ...."

ಇಷ್ಟು ಹೊತ್ತಿಗೆ ಸುಬ್ಬನ ಕಣ್ಣಿನಲ್ಲಿ "ಇಮಿಟೇಷನ್ ಕನ್ನಂಬಾಡಿ ಕಟ್ಟೆ' ಯು ಆರಂಭವಾಗಿತ್ತು. ಕಿಟ್ಟುವಿನ ಕಣ್ಣಿನಲ್ಲಿ 'ಇಮಿಟೇಷನ್ ಗೇರುಸೊಪ್ಪೆ ಜಲಪಾತ' ವೇ ಶುರುವಾಗಿತ್ತು..... ಮತ್ತು...."ಸತ್ಯಮೇವ ಜಯತೇ", "ಇಹದಲ್ಲಿ ಸುಳ್ಳ ಹೇಳಿದವರು ಪರದಲ್ಲಿ ಕಳ್ಳ ಕುಡಿಯುತ್ತಾರೆ", "ಸುಳ್ಳು ಹೇಳಿದವರಿಗೆ ರೌರವ ನರಕ ಪ್ರಾಪ್ತವಾಗುತ್ತದೆ" ಮುಂತಾದ ಗಾದೆಗಳೂ, ಸುಳ್ಳು ಹೇಳಿದುದರ ಪರಿಣಾಮವಾಗಿ ಶಾಲೆಯಲ್ಲಿ ತಾನು ತಿಂದಿದ್ದ ಒಂದೆರಡು (ಡಜನ್) 'ಕಜ್ಜಾಯ" ಗಳೂ ಅವನ ನೆನಪಿಗೆ ಬಂದವು. ಈ ಎಲ್ಲ ನೆನಪುಗಳು ಆವನನ್ನು "ಇಂದಾದರೂ ನಾನು ಸುಳ್ಳ ಹೇಳದಿರಬೇಕು, ನಿಜವನ್ನೇ ಉಸುರಬೇಕು" ಎಂಬ ತೀರ್ಮಾನಕ್ಕೆ ಬರುವಂತೆ ಮಾಡಿದವು.

"ಅಪ್ಪಾ... ಹುಂ...ಹುಂ...ನಾನು..ಸುಳ್ಳು ...ಹೇಳಲಾರೆ....ಸುಬ್ಬು ಗಾಜ್ನ ಒಡೀಲಿಲ್ಲ........ ಇನ್ಮೇಲೆ...ಒಳ್ಳೇವನಾಗಿರ್ತೀನಿ....ಹೊಡೀಬೇಡ,,,," ಅಂತ ಬಿಕ್ಕಿದ.

ಅವನು ನಿರೀಕ್ಷಿಸಿದಂತೆ ಬೈಗಳ ಸುರಿಮಳೆಯಾಗಲೀ ಏಟುಗಳ ಸಿಡಿಲುಗಳಾಗಲೀ ಮುಂಬರಲಿಲ್ಲ. ನಾರಾಯಣರಾಯರ ಮುಖದಲ್ಲಿ ರೌದ್ರತೆಗೆ ಬದಲು ಸಂಕಟ ನಿರಾಶೆಗಳು ತುಂಬಿದವು. ಅವರು ಅಲ್ಲೇ ಇದ್ದ ಕುರ್ಚಿಯೊಂದಕ್ಕೆ ತಮ್ಮ ವಿಶಾಲ ದೇಹವನ್ನು ತುರುಕಿದರು. ಅಷ್ಟರಲ್ಲಿ ಅವರ ಸಹಧರ್ಮಿಣಿ ಅಲ್ಲಿಗೆ ದಯಮಾಡಿಸಿದರು.

"ಏನೂಂದ್ರೆ, ಯಾಕೆ ಹೀಗೆ ತಲೇಮೇಲೆ ಕೈಯಿಟ್ಟುಕೊಂಡು ಕುಳಿತುಬಿಟ್ರಲ್ಲ. ಒಂದು ಗಾಜು ಹೋದ್ರೆ ಬೇರೆ ಗಾಜು ಹಾಕ್ಸಿದರಾಯಿತು. ಅದಕ್ಯಾಕೆ ಹೀಗೆ ಸಂಕಟಪಡ್ತೀರಿ?"

"ಗಾಜು ಹಾಳಾಗ್ಹೋಗ್ಲಿ ! ಕಿಟ್ಟು ನಿಜ ಹೇಳ್ಬಿಟ್ಟ ಕಣೇ.... ನಿಜ ಹೇಳ್ಬಿಟ್ಟ. ಏನೋ ಇರೋ ಒಬ್ಬ ಮಗನ್ನಾದ್ರೂ ನನ್ನ ಕಸಬ್ನಲ್ಲೇ ತಯಾರ್ಮಾಡ್ಬೇಕೂಂತಿದ್ದೆ. ...ತಂದೆ ಕೆಲಸಾನೆ ಮಗಾನೂ ಮುಂದುವರಿಸ್ಲಿ ಅಂತ. ..ಹುಂ.. ಅವ್ನು ಸುಳ್ಳು ಹೇಳೋಕ್ಕಾಗೋದಿ–ಲ್ಲಂತಂದ್ಮೇಲೆ,

ಅವನು ನನ್ನ ಉದ್ಯೋಗಾನ ಕೈಗೊಳ್ಳೋ ಹಾಗೇ ಇಲ್ವಲ್ಲೇ !...ನನ್ನಾಸೇನೆಲ್ಲಾ ಒಂದೇ ನಿಮಿಷ್ದಲ್ಲಿ ಸೊನ್ನೆ ಮಾಡ್ಬಿಟ್ವಲ್ಲೇ....."

* * * *

ರಾಮಾನುಜನ್ ಅವರ ಕವಿತೆಗಳು ಓದಲು ನಿಜಕ್ಕೂ ಚೇತೋಹಾರಿ. "ಹೊಕ್ಕುಳೊಳು ಹೂವಿಲ್ಲ", "ಮತ್ತು ಇತರ ಪದ್ಯಗಳು" ಇವೇ ಮುಂತಾಗಿ ಹತ್ತು ಹಲವಾರು ಕವನ ಸಂಕಲನಗಳು ಹೊರಬಂದಿವೆ. ಇವರ "ಕುಂಟೋ ಬಿಲ್ಲೆ" ಸಂಕಲನದಿಂದ ಆಯ್ದ "ಅಂಗೈನಲ್ಲಿ ಆಕಾಶ" ಎಂಬ ಕವನ, ರಾಮಾನುಜನ್ ಅವರ ಪ್ರತಿಭಾ ಪೂರ್ಣ ಶೈಲಿಯನ್ನು ಪ್ರತಿಬಿಂಬಿಸುತ್ತದೆಯೆಂದು ನನ್ನ ನಂಬಿಕೆ. ಇಗೋ ಇಲ್ಲಿ ಅದರ ಪೂರ್ಣ ಪಾಠ.

**ಅಂಗೈಯಲ್ಲಿ ಆಕಾಶ**

(ಕುಂಟೋ ಬಿಲ್ಲೆ ಕವನ ಸಂಗ್ರಹದಿಂದ)

ಆಗಸ್ಟಿನ ಗಾಳಿ ರೂಮಿನ ಬಾಗಿಲು ತೆರೆದರೆ ನುಗ್ಗಿ ಬಂದು
ಟೇಬಲ್ ಮೇಲಿನ ಮಗನ ಕಾಗದ, ಆಫೀಸ್ ಲೆಕ್ಕನೆಲ್ಲ
ಚೆಲ್ಲಾಪಿಲ್ಲಿ ಚದುರಿಸದ ಹಾಗೆ ಅದರ ಮೇಲೊಂದು
ಭಾರವಾದ ಗಾಜಿನ ಪೇಪರ್ ವೇಯ್ಟ್ ಇಡುತ್ತಾರೆ
ಇಲ್ಲಿ ಎಲ್ಲರ ಮನೆಯಲ್ಲಿ
ಆ ಗಾಜಿನ ಗೋಲದಲ್ಲಿ ನೀರು, ಅದರೊಳಗೆ ಸಣ್ಣ ಮನೆ,
ಬಾಗಿಲು, ಕಿಟಕಿ, ಮುಕ್ಕೋಣದ ಛಾವಣಿ, ಅದರ
ಸುತ್ತಮುತ್ತ ನೆಲ. ನೆಲದ ಮೇಲೆ ಗಾಜಿನ ನೀಲಿ ಮರ.
ಬೆಳ್ಳಗೆ ಹರಡಿದ ಮಂಜಿನ ಕಣ.
ಗೋಲ ಎತ್ತಿ ಕುಲುಕಿಟ್ಟರೆ, ನೀರಿನ ತುಂಬಾ ಆಕಾಶ
ಆಕಾಶದಿಂದ ಇಳಿದಿಳಿದು ಮಂಜಿನ ಕಣಗಳ ಮಳೆ.
ಮನೆಯ ಮೇಲೆ ಮರದ ಮೇಲೆ.
ಎರಡೇ ನಿಮಿಷ. ಮಂಜು ನಿಂತು ಎಲ್ಲಾ ಶಾಂತ.
ಆಗಸ್ಟಿನ ಕೈಯ್ಯಲ್ಲಿ ಡಿಸೆಂಬರ್ ಮಂಜು
ಡಿಸೆಂಬರ್ ಬಂದರಂತೂ ಹೊರಗೆ ಮನೆಮೇಲೆ ಮಂಜು
ಮೆತ್ತಗೆ, ಬೆಳ್ಳಗೆ ಕಣ ಕಣ ಕಣ ಬಿಳುಪಿರುವಾಗ
ಮನೆಯೊಳಗೆ ಮಕ್ಕಳ ಕೈಯ್ಯಲ್ಲಿ ಈ ಗಾಜಿನ ಗೋಳ.

ಮತ್ತೊಂದು ಮಂಜು ಕೈಯ್ಯೊಳಗಿನ ಆಕಾಶದಿಂದ
ಮನೆ ಮರದ ಮೇಲೆ ಎರಡು ನಿಮಿಷ ಬಿದ್ದು ನಿಲ್ಲುವ ಮಂಜು
ಕಣ್ಣ ಹೊರಗೆ ಬಿಸಿಲು ಮಳೆ ಗಾಳಿಯ ಪ್ರಪಂಚ
ಓಡಿ ನಿಂತು ಸತ್ತು ಬದುಕಿದ ಹಾಗೆ
ಕಣ್ಣ ಗೋಲಿಯೊಳಗೆ ಒಂದು ಪ್ರಪಂಚ
ಎದ್ದು ಬಿದ್ದಾಗ ಅನ್ನಿಸುತ್ತದೆ,
ಈ ಹೊರ ಪ್ರಪಂಚದ ಸುತ್ತ ಕೂಡಾ
ಮತ್ತೊಂದು ಗಾಜಿನ ಗೋಲ, ಅದರಾಚೆ ಒಂದು ಕಣ್ಣು
ಆಗಸ್ಟಿನ ಕೈಯ್ಯಲ್ಲಿ ಡಿಸೆಂಬರ್ ಮಂಜು
ಗೋಲಿಯೊಳಗೆ ಗೋಲಿ ಕಣ್ಣಿಟ್ಟು ನೋಡಿದಾಗೆಲ್ಲಾ ಹಲವು ಆಕಾಶ

■



**ಒಂದು ವಿನಮ್ರ ವಿನಂತಿ**

ಅನೇಕ ಚಂದಾದಾರರು ಅಪರಂಜಿಯ ಚಂದಾ ಹಣವನ್ನು ನೇರವಾಗಿ ನಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿರುವುದಕ್ಕೆ ಅಪರಂಜಿ ಅವರೆಲ್ಲರಿಗೂ ಆಭಾರಿ. ಈ ನಿಟ್ಟಿನಲ್ಲಿ ನಿಮ್ಮಿಂದ ಒಂದು ಸಹಾಯ ಆಗಬೇಕಾಗಿದೆ. ತಾವು ಬ್ಯಾಂಕ್ ಖಾತೆಯ ಮೂಲಕ ಚಂದಾ ನವೀಕರಿಸುವಾಗ, ಬ್ಯಾಂಕ್ ವಹಿವಾಟಿನ ವಿವರ, ನಿಮ್ಮ ಚಂದಾ ಸಂಖ್ಯೆ, ಹೆಸರು ಮತ್ತು ಈಗಿನ ವಿಳಾಸ ಇವುಗಳನ್ನು ನಮಗೆ ಜಿಮೇಲ್ ಅಥವಾ ವಾಟ್ಸಪ್ ಮೂಲಕ ತಕ್ಷಣವೇ ಕಳಿಸಿ. ಇದರಿಂದ ರಸೀತಿ ಕಳಿಸುವ ಕಾರ್ಯ ಸುಗಮವಾಗುತ್ತದೆ. ನಿಮ್ಮ ಸಹಕಾರಕ್ಕೆ ಅಪರಂಜಿ ಆಭಾರಿ.

# ಅವರ ಶೂ ನಲ್ಲಿ......

ಎಚ್. ಗೋಪಾಲಕೃಷ್ಣ

ಸ್ವಾಮಿ ನಾನೆಷ್ಟು ಸುಖಿ ಅಂತ ಮೊನ್ನೆ ತಾನೇ ನನಗೆ ಗೊತ್ತಾಯಿತು. ಅಬ್ಬಾ ಇದುವರೆಗೂ ಈ ಸತ್ಯ ನನಗೆ ಹೊಳೆಯದೆ ಹೋಯಿತಲ್ಲ ಅಂತ ಬಹಳ ಬೇಸರವೂ ಸಹ ಆಯಿತು. ಅದಕ್ಕೆ ಮೊದಲು ನನಗೆ ಈ ಭಾವನೆ ತುಂಬಾ ತಡವಾಗಿ ಬಂದದ್ದು ಯಾಕೆ ಅಂತ ನಿಮಗೆ ಮನದಟ್ಟು ಮಾಡಲೇ ಬೇಕಾದ ಅನಿವಾರ್ಯತೆ ನನಗೆ ಉಂಟಾಗದೇ.. (ಅಂದಹಾಗೆ ಅನಿವಾರ್ಯತೆ ಎನ್ನುವ ಪದ ಪ್ರಯೋಗ ಸರಿಯೇ ಎನ್ನುವ ಜಿಜ್ಞಾಸೆ ಶುರುವಾಗಿದೆ. ತುಂಬಾ ಗಹನವಾದ ವಿಷಯ ಚರ್ಚಿಸ ಬೇಕಾದರೇನೆ ಈ ಜಿಜ್ಞಾಸೆಗಳು ಹುಟ್ಟೋದು.. ಒಳ್ಳೇ ಕೆಲಸ ಮಾಡಬೇಕಾದರೆ ಅದೇನೋ ತ್ರೇತಾಯುಗದಲ್ಲಿ ರಾಕ್ಷಸರು ಅಡ್ಡಿ ಪಡಿಸುತ್ತಾ ಇದ್ದರಂತೆ ನಿಮಗೆ ಗೊತ್ತಾ? ಈ ವಿಷಯ ನನ್ನ ಅಜ್ಜಿ ಆಗಾಗ ಹೇಳುತ್ತಾ ಇತ್ತು. ಅದು ಹೋಗಲಿ ಬಿಡಿ ಅರಬ್ಬಿ ಸಮುದ್ರಕ್ಕೆ ಹಾರಲು ರೆಡಿಯಾಗಲಿ. ಜಿಜ್ಞಾಸೆ ದೂರ ಸರಿಸಿ ಮತ್ತೆ ಟು ದೀ ಪಾಯಿಂಟ್ ಬರಲೇ, ತಮ್ಮ ಅನುಮತಿಯೊಂದಿಗೆ..?)

ಇದಕ್ಕೊಂದು ಹಿನ್ನೆಲೆ ಹೇಳಲೇ ಬೇಕು. ಮೊದಲು ಅದು ಮುಗಿಸಿ ಬಿಡುತ್ತೇನೆ. ನನಗೆ ಹುಟ್ಟಿದಾಗಲಿಂದ ಹಸಿವು ಅಂದರೇನು ಅಂತ ಗೊತ್ತಿಲ್ಲ. ಇದು ಬುರುಡೆ ಅಂತ ನಿಮಗೆ ಅನ್ನಿಸಬಹುದು, ಆದರೂ ಇದು ಸತ್ಯ.

ಕತೆ ಕಾದಂಬರಿಗಳಲ್ಲಿ ಅದ್ಯಾರೋ ಹಸಿವಿನಿಂದ ಒದ್ದಾಡಿದ ಅಂತ ಓದಿದಾಗ ಅದು ಬರೀ ಬುರುಡೆ ಅನಿಸುತ್ತಾ ಇತ್ತು. ಅನಿಸುತ್ತಾ ಇತ್ತು ಅಂತ ಭೂತಕಾಲದಲ್ಲಿ ಯಾಕೆ ಹೇಳಲಿ? ಈಗಲೂ ಸಹ ಯಾರಾದರೂ ಹಸಿವಿನ ಸುದ್ದಿ ತೆಗೆದರೆ ಮತ್ತೊಂದು ಬುರುಡೆಗೆ ಸಿದ್ಧ ಆಗ್ತಾ ಇದ್ದಾರೆ ಅನಿಸಿಬಿಡುತ್ತೆ. ಹೇಳಿಕೇಳಿ ನಾನು ನಲವತ್ತು ವರ್ಷ ಫ್ಯಾಕ್ಟರಿಯಲ್ಲಿ ರಕ್ತ ಬಸಿದ ಪ್ರಾಲಿಟರಿಯನ್ ಅಂತ ನಿಮಗೆ ಹೇಳಿದ ನೆನಪು ನನಗಿಲ್ಲ. ಫ್ಯಾಕ್ಟರಿ ಅಂದರೆ ಅಲ್ಲಿ ಒಂದು ಸಿಸ್ಟಮ್ ಇರ್ತದೆ. ಸೈರನ್ ಆದಕೂಡಲೇ ಒಳಗೆ ಹೋಗಬೇಕು.ಕೆಲಸ ಶುರು ಮಾಡಬೇಕು. ಬೆಲ್ ಹೊಡೆದಾಗ ಕಾಫಿ ಬ್ರೆಡ್ ಬಂದಿರುತ್ತೆ ಅದನ್ನ ತಿನ್ನಬೇಕು. ಇನ್ನೊಂದು ಸಲ ಬೆಲ್ ಆದರೆ ಕಾಪಿ ಬಂದಿರುತ್ತೆ, ಅದನ್ನ ಕುಡಿಬೇಕು. ಆಮೇಲೆ ಸೈರನ್ ಕೂಗುತ್ತೆ. ಕ್ಯಾಂಟೀನ್‌ಗೆ ಹೋಗಿ ಅಲ್ಲಿ ಊಟ ಮಾಡಬೇಕು.ಮತ್ತೆ ಸೆಕ್ಷನ್ ಗೆ ಬಾ, ಕೆಲಸ ಮಾಡು, ಟೀ ಬರುತ್ತೆ, ಅದನ್ನ ಕುಡಿ.ಸೈರನ್ ಆಗುತ್ತೆ.ಹೊರಗೆ ಬಾ....ಇಷ್ಟು ವಿವರವಾಗಿ ಕಾರ್ಖಾನೆ ಕೆಲಸಗಾರನ ಜೀವನದಲ್ಲಿ ಒಂದು ದಿನ ಯಾಕೆ ಹೇಳಿದೆ ಅಂದರೆ ಸೈರನ್ ಆದಾಗ ಊಟ ಬೆಲ್ ಆದಾಗ ಕಾಫಿ ಬ್ರೆಡ್ಡು ತಿನ್ನೋ ನಮಗೆ ಹಸಿವು ಆಗುವ ಚಾನ್ಸೇ ಇರುಲ್ಲ ಅಂತ ನಿಮಗೆ ಸ್ಪಷ್ಟ ಮಾಡೋದಿಕ್ಕೆ! ಒಂದು ದಿನ.....ಅಂತ ಹೇಳಕ್ಕೆ ಹೊರಟೆ ನೋಡಿ ಆಗ ಸೋಲ್ಜೆನಿಟ್ಸಿನ್ ನೆನಪಾದ.ಅವನು ಯಾಕೆ ನೆನಪಾದ ಅಂದರೆ ಅವನ ಒಂದು ಕಾದಂಬರಿ ಒಂದು ದಿನ..ಅಂತಲೇ ಶೀರ್ಷಿಕೆ! ಅವನ ಬಗ್ಗೆ ಒಂದು ಚೂರು ವಿವರ ಹೇಳಿ ನನ್ನ ಪುರಾಣಕ್ಕೆ ಬರಲೇ (ನಿಮ್ಮ ಅನುಮತಿಯಿಂದ...)

ಅಲೆಕ್ಸಾಂಡರ್ ಸೋಲ್ಜೆನಿಟ್ಸಿನ್ 20ನೇ ಶತಮಾನದ ಅತ್ಯಂತ ಪ್ರಭಾವಶಾಲಿ ಸಾಹಿತಿಗಳಲ್ಲಿ ಒಬ್ಬ. ಸೋವಿಯತ್ ಒಕ್ಕೂಟದ ಕಾಲದಲ್ಲಿದ್ದ ಕಠಿಣ ಜೈಲು ಶಿಬಿರಗಳ (ಗುಲಾಗ್) ಬಗ್ಗೆ ಜಗತ್ತಿಗೆ ಪರಿಚಯಿಸಿದ ಶ್ರೇಯಸ್ಸು ಈತನದು.

ಅವನ ಪ್ರಮುಖ ಕೃಷಿಗಳು..

* ಒನ್ ಡೇ ಇನ್ ದಿ ಲೈಫ್ ಆಫ್ ಇವಾನ್ ಡೆನಿಸೊವಿಚ್:

* ದಿ ಗುಲಾಗ್ ಆರ್ಚಿಪೆಲಾಗೊ:

* ಕ್ಯಾನ್ಸರ್ ವಾರ್ಡ್: ಕ್ಯಾನ್ಸರ್ ಆಸ್ಪತ್ರೆಯ ಹಿನ್ನೆಲೆಯಲ್ಲಿ ಬರೆದ ಈ ಕಾದಂಬರಿಯು ಅಂದಿನ ಸಮಾಜದ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

ಇಂತಹ ದೊಡ್ಡ ಸಾಹಿತಿ ಈತ.

ನನಗೆ ಹಸಿವು ಅಂದರೆ ಗೊತ್ತೇ ಇಲ್ಲ ಅಂತ ಹೇಳಿ ಈ ಪುರಾಣಕ್ಕೆ ಒಂದು ಸ್ಟಾರ್ಟ್ ಕೊಟ್ಟಿದ್ದೆ ತಾನೇ. ಈಗ ಅದಕ್ಕೇ ಬಂದೆ.

ಇದಕ್ಕೆ ಪೂರಕ ಅಂದರೆ ನನ್ನ ಅಮ್ಮ ಹೇಳುತ್ತಿದ್ದ ಕತೆ ನಿಮಗೆ ಹೇಳಲೇಬೇಕು.

ನಾನು ಯಾವತ್ತೂ ಅತ್ತಿದ್ದೇ ಇಲ್ಲವಂತೆ. ಹುಟ್ಟಿದಾಗ ಒಂದು ಒಂದೂವರೆ ಮಣ ಭಾರ ಇದ್ದ ಅಂತ ನನ್ನಮ್ಮ ಬುರುಡೆ ಬಿಡ್ತಾ ಇದ್ದಳು.ಮಗು ಅಲ್ಲಾಡದೇ ಒಂದೇ ಕಡೆ ಮಲಗಿರತ್ತೆ. ಹಸಿವಾಗಿರುವುದು ಸಹ ಅದಕ್ಕೆ ತಿಳಿಯೋದು ಇಲ್ಲ.. ಪಾಪ ಅದು ಪುಟ್ಟ ಮಗು ಅಳುತ್ತಿಲ್ಲ, ಪಾಪ ಹಸಿವು ಆಗಿದೆಯೇನೋ ಅಂತ ಅಮ್ಮ ಅಜ್ಜಿ ಯೋಚನೆ ಮಾಡಿ ಫೀಡಿಂಗ್ ಬಾಟಲು ಇಡ್ತಾ ಇದ್ದರಂತೆ. ಒಂದು ಸಲಕ್ಕೆ ನಾಲ್ಕೋ ಐದೋ ಸೇರು ಹಾಲು ಕುಡಿದು ಬಸ್ ಎನ್ನುತ್ತಾ ಬಾಟಲು ಪಕ್ಕಕ್ಕೆ ತಳ್ತಾ ಇದ್ದೆ ನಂತೆ. ಪ್ರತಿ ಎರಡೆರಡು ಗಂಟೆ ನಂತರ ಇದು ರಿಪೀಟ್ ಶೋ ಆಗ್ತಾ ಇತ್ತು.. ನಾನು ಮತ್ತೆ ಬಸ್ ಎನ್ನುತ್ತಾ ಇದ್ದೆ ಅಂತ ನನ್ನಮ್ಮ ಹೇಳ್ತಾ ಇದ್ದದ್ದು ನನಗೆ ಗೊತ್ತು. ಜೀವಮಾನ ಪೂರ್ತಿ ಈ ಮಗು ಬಸ್ ಅಂದುಕೊಂಡೇ ಇರುತ್ತೆ ಅಂತ ನಂಟರು ಪಂಟರ್ ಗಳು ಆಡಿ ಕೊಳ್ತಾ ಇದ್ದರಂತೆ..

ಅಮ್ಮನ ಲೆಕ್ಕದಲ್ಲಿ ದಿವಸಕ್ಕೆ ಅದೆಷ್ಟು ಸೇರು ಹಾಲು ಹೊಟ್ಟೆ ಸೇರುತ್ತಿತ್ತು ಅಂತ ಆ ಭಗವಂತನಿಗೆ ಮಾತ್ರ ಗೊತ್ತು (ಅಂದ ಹಾಗೆ ನನಗೆ ಭಗವಂತನಲ್ಲಿ ನಂಬಿಕೆ ಇಲ್ಲ. ವಿಚಾರ ವಾದಿ ನಂಜುಂಡಸ್ವಾಮಿ ಶಿಷ್ಯ ನಾನು!) ಇದು ಅಂತಿರಲಿ..

ನನ್ನ ಮದುವೆ ಆಗಿ ನನಗೆ ಮಕ್ಕಳು ಆಗಿ ಅಮ್ಮನಿಗೆ ಮೊಮ್ಮಕ್ಕಳು ಸಹ ಆಗಿ ಅಮ್ಮ ದೇವರ ಪಾದ ಸೇರುವ ಒಂದು ತಿಂಗಳು ಮೊದಲು ಸಹ ಈ ಕತೆ ನಿರಂತರವಾಗಿ ಕಿವಿ ಮೇಲೆ ಬಿದ್ದಿದೆ. ನನ್ನ ಮದುವೆ ನಂತರ ಈ ಹಾಲು ಅದೂ ನಾಲ್ಕೈದು ಸೇರು ಹಾಲು ಕುಡಿಯುತ್ತಿದ್ದ ನಾನು ಒಂದು ದಂತ ಕತೆ ಆಗಿದ್ದೆ, ನನ್ನಾಕೆಯ ಸರ್ಕಲ್ ನಲ್ಲಿ. ಸುಮಾರು ಜನ ಹೆಂಡತಿ ಕಡೆ ನೆಂಟರು (ಅಮ್ಮನ ಕಡೆ ನಂಟರು ಸಹ) ಎದುರು ಬರುತ್ತಿದ್ದರು. ಕಾರಣವೇ ಇಲ್ಲದೆ ನನ್ನನ್ನು ಬಿಟ್ಟ ಬಾಯಿ ಬಿಟ್ಟ ಕಣ್ಣುಗಳಿಂದ ನೋಡುತ್ತಾ ನಿಲ್ಲುತ್ತಿದ್ದರು, ನನ್ನ ಮದುವೆ ಆದ ಹೊಸತರಲ್ಲಿ! ಅದೇನೋ ಆತಂಕ ಮತ್ತು ಆಶ್ಚರ್ಯದ ಕಾಂಬಿನೇಷನ್ ಮಿಕ್ಸ್ ಅವರ ಮುಖದಲ್ಲಿ! ನಾನು ಏನ್ರಮ್ಮಾ ಏನಾಗಿದೆ ಅಂತ ಕೇಳುವಷ್ಟರಲ್ಲಿ ಸರ ಸರ ಸರಿಯಾಗಿಯೇ ಇದ್ದ ಸೆರಗು ಸರಿಮಾಡಿಕೊಂಡು ಓಡಿ ಬಿಡೋರು. ಬಾಗಿಲ ಹಿಂದೆ ನಿಂತು ಕುತೂಹಲ ಮತ್ತು ಕೌತುಕದಿಂದ ಪಿಳಿ ಪಿಳಿ ಕಣ್ಣು ಬಿಡೋರು.

ಗಂಡಸರಾದರೆ ಬಂದು ಪೆಕರ ಪೆಕರಾಗಿ ನಿಂತು ಕೊಳ್ತಾ ಇದ್ದರು. ಏನ್ರಪ್ಪ ಏನು ಸಮಾಚಾರ ಅಂದರೆ ಕಣ್ಣು ಕಣ್ಣು ಬಿಡೋರು. ತಲೆ ಕೆರೆದು ಕೊಳ್ಳೋರೋ...ಐದಾರು ಸಲ ಎಂಜಲು ನುಂಗಿ ನುಂಗಿ ಮತ್ತೂ ಪೆಕರ ಪೆಕರಾಗಿ ಕಾಣಿಸುತ್ತಿದ್ದರು.ಸ್ವಲ್ಪ ಒತ್ತಾಯ ಮಾಡಿ ಕೇಳಿದರೆ ಅವರ ಕಣ್ಣು ಟೇಬಲ್ ಮೇಲೆ ಇರುತ್ತಿದ್ದ ಸಿಗರೇಟ್ ಪ್ಯಾಕ್ ಕಡೆಗೋ ಅಥವಾ ತಟ್ಟೆಯಲ್ಲಿರುತ್ತಿದ್ದ ಖಾರದ ಕಾಂಗ್ರೆಸ್ ಕಡೆಗೋ ಹೋಗುತ್ತಿತ್ತು. ಅವರ ವಯಸ್ಸು

ಮುಖದಲ್ಲಿನ ದೈನ್ಯತೆ ಮೇಲೆ ಸಿಗರೇಟು ಅಥವಾ ಕಾಂಗ್ರೆಸ್ ಕೊಡುತ್ತಿದ್ದೆ. ಎರಡೂ ಕೈಗಳಿಂದ ಅದನ್ನು ಪ್ರಸಾದದ ಹಾಗೆ ಸ್ವೀಕರಿಸಿ ಅವರು ಜಾಗ ಖಾಲಿ ಮಾಡುತ್ತಿದ್ದರು. ನನ್ನ ಮದುವೆ ಆಗಿ ಅದೆಷ್ಟೋ ವರ್ಷಗಳ ನಂತರ ನಾನು ಆ ಬಂಧುಗಳಿಗೆ ಒಂದು ವಂಡರ್ ಆಫ್ ಥಿ ವರ್ಲ್ಡ್ ಅಂತ ಗೊತ್ತಾಗಿತ್ತು. ಒಂಬತ್ತನೆಯ ದೋ ಅಥವಾ ಹತ್ತೇನೆಯ ದೋ ವಂಡರ್ ಆಗಿದ್ದೇನಂತೆ ನಾನು,...!

ಈಗಲೂ ಅಂದರೆ ಮದುವೆ ಆಗಿ ದಶಕಗಳ ನಂತರ ಕೆಲವು ಬಂಧುಗಳ ಮನೆಗೆ ಹೋದರೆ ಅವರು ಹಾಲಿನ ಪಾಕೆಟ್‌ಗಳನ್ನು ಕಬೋರ್ಡ್‌ಗೆ ನೂಕಿ ಅದಕ್ಕೆ ಬೀಗ ಹಾಕಿ, ಬೀಗದ ಕೈ ಬ್ಲೌಸಿನೊಳಗೆ ಜೋಪಾನ ಮಾಡುತ್ತಾರೆ! ಮೊದಲು ಹಾಲಿನ ಬಾಟಲ್ ಬರ್ತಾ ಇತ್ತಲ್ಲ, ಅದನ್ನು ಅಕ್ಕಿ ಡಬ್ಬದಲ್ಲಿ ಹಾಕಿ ಮುಚ್ಚಿಡುತ್ತಾ ಇದ್ದರು!

ನಾನು ಇದಕ್ಕೆಲ್ಲ ಡೋಂಟ್‌ಕೇರ್ ಮಾಸ್ಟರ್ ! ಇನ್ನೂ ಒಬ್ಬ ನೆಂಟ ಅದೂ ಹೆಂಡತಿ ಕಡೆಯದೇ. ನನ್ನನ್ನು ನೋಡಿದರೆ ಸಾಕು ಸ್ಥಂಭೀಭೂತ ಆಗಿ ಶಿಲ್ಪ ಆಗಿ ಬಿಡ್ತಾ ಇದ್ದ. ನನ್ನನ್ನೇ ನೋಡುತ್ತಾ ಅವನ ಇರವನ್ನೇ ಮರೆಯುತ್ತಿದ್ದ. ಅವನ ಕಣ್ಣಿನಲ್ಲಿ ಮೆಚ್ಚುಗೆ ಮತ್ತು ಆರಾಧನಾ ನೋಟ ಕಂಡರೆ ಅವನ ಬಾಡಿ ಲಾಂಗ್ವೇಜು ಕೋಪ ದ್ವೇಷ ಮತ್ತು ಕೊಲೆಗಡುಕನ ಮುಖ ನೆನಪಿಗೆ ತರುತ್ತಿತ್ತು. ಸ್ವಲ್ಪ ದಿವಸದ ನಂತರ ಅವನ ಸಮಸ್ಯೆ ಗೊತ್ತಾಯಿತು. ಪಾಪ, ಮುಂಡೆದಕ್ಕೆ ಹುಟ್ಟಿದಾಗಲಿಂದ ಹಾಲು ಕುಡಿದರೆ ವಾಂತಿ ಭೇದಿ ಅಂತೆ. ಬೆಳೆದ ಮೇಲೆ ಹಾಲು, ಹಾಲಿನ ಉತ್ಪನ್ನ ಯಾವುದನ್ನೇ ತಿಂದರೂ ನೋಡಿದರೂ ಇವನಿಗೆ ಹೊಟ್ಟೆ ತೊಳೆಸಿ ವಾಂತಿ ಭೇದಿ ಆಗಿ ಡ್ರಿಪ್ಸ್ ಹಾಕ ಬೇಕಿತ್ತು. ಮೈಯಿಗೆ ಹಾಲು ಹಿಡಿಸದಿರುವ ಯಾವುದೋ ವಿಚಿತ್ರ ಖಾಯಿಲೆ ಅವನಿಗೆ, ಹುಟ್ಟಿದಾಗಲಿಂದಲೂ. ಅವನ ವಿಷಯ ಕಾಲಕ್ರಮೇಣ ನನ್ನ ಕಿವಿಗೂ ಬಿದ್ದಿತ್ತು. ಹಾಲು ಮೊಸರು ತುಪ್ಪ... ಇದನ್ನೆಲ್ಲ ನೋಡಲೇ ಬಾರದು ಅಂತ ವೈದ್ಯರು ಅವನಿಗೆ ಹುಟ್ಟಿದಾಗಲೇ ನಿಷೇಧ ಹೇರಿದ್ದರು. ಅದೆಷ್ಟೋ ಸಾವಿರ ವರ್ಷಗಳಿಂದ ಪ್ರತಿ ದಿವಸ ಅದೇ ಬೇಳೆ ಸಾರು, ಅದೇ ಅನ್ನ ತಿಂದು ತಿಂದು ಹಲವು ಸಾವಿರ ವರ್ಷ ಸವೆಸಿದ ಸಿಂಗಲ್ ಒಂಟಿ ಪ್ರೇತದ ಹಾಗೆ ಕಾಣಿಸುತ್ತಿದ್ದ. ಮೊಸರನ್ನ, ಮೊಸರು ತಿನ್ನುವವರನ್ನು ಕಂಡರೆ ಅವನಿಗೆ ಕೋಪ ಬರುತ್ತಿತ್ತು.ದೂಧ್ ಪೇಡಾ ನೋಡಿದರೆ ಅವನ ಕಣ್ಣು ಕೆಂಪಗಾಗುತ್ತಿತ್ತು ಮತ್ತು ಬೆಂಗಾಲಿ ಸ್ವೀಟ್ ಅಂಗಡಿ ಮುಂದೆ ಹೋದರೆ ಅವನಿಗೆ ಯಾರನ್ನಾದರೂ ಕೊಚ್ಚಿ ಕೊಚ್ಚಿ ಕೊಚ್ಚುವಷ್ಟು ಉಮೇದು ಹುಟ್ಟುತ್ತಿತ್ತು. ಹಾಲಿನ ಐಸ್ ಕ್ರೀಂ ನೋಡಿದರೆ ಅವನ ತಲೆ ಕೂದಲು ಊರ್ಧ್ವ ಮುಖಿ ಆಗುತ್ತಿತ್ತು... ಬೆಂಗಳೂರು ಡೈರಿ ರಸ್ತೆಯಲ್ಲಿ ಹೋದರೆ ಅಲ್ಲಿಗೆ ಬಾಂಬ್ ಹಾಕಬೇಕು ಅನಿಸುತ್ತಿತ್ತು.



ಗಂಟೆಗೆ ಐದು ಕಪ್ ಕಾಫಿ ಹೀರುವ ನನ್ನಂತಹರನ್ನು ಕಂಡರೆ ಎರಡೂ ಕೈಗಳಿಂದ ಎರಡು ಮೈಲಿ ಕೇಳಿಸುವ ಹಾಗೆ ನೆಟ್ಟಿಗೆ ಮುರಿಯುತ್ತಿದ್ದ. ಹಲವು ಸಲ ಬೆರಳಿನ ಮೂಳೆ ಮುರಿದು ಹೆಗಲಿಗೆ ಬ್ಯಾಂಡೇಜ್ ನೇತುಹಾಕಿ ಅದಕ್ಕೆ ಕೈ ನೇತು ಹಾಕಿಕೊಂಡು ಓಡಾಡಿದ್ದು ನನಗೆ ಇನ್ನೂ ಹಸಿರು ಹಸಿರು ನೆನಪು.

ಪಾಪ ಅಂತಹ ಮನುಷ್ಯನ ಎದುರು ನನ್ನಂತಹ ಮಿಲ್ಕ್ ಡೆಮನ್ ಹಾದರೆ ಅವನಿಗೆ ಹೇಗಾಗಬೇಕು? ಸಂಪೂರ್ಣ ನಿಷ್ಕ್ರಿಯತೆ ಆವರಿಸಿಕೊಂಡು ವಿಧಾನ ಸೌಧದ ಮುಂದಿನ ಪ್ರತಿಮೆಗಳ ಹಾಗೆ ನಿಶ್ಚಲವಾಗಿ ಎಡಗೈ ಒಂದೆಡೆ ಬಲಗೈ ಒಂದೆಡೆ ತೋರಿಸುತ್ತಾ ವಿಧಾನ ಸೌಧದ ಮುಂದೆ ಅಂಬೇಡ್ಕರ್ ಮೌನವಾಗಿ ದುಃಖದ ಮೂಡಿನಲ್ಲಿ ನಿಂತ ಹಾಗೆ ನಿಂತುಬಿಡುತ್ತಿದ್ದ!

ಮೊದಮೊದಲು ಅವನನ್ನು ನೋಡಿದರೆ ನನಗೂ ಕೋಪ ಉಕ್ಕುತ್ತಿತ್ತು. ಆದರೆ ನನಗೆ ವಯಸ್ಸಾಗುತ್ತಾ ಆಗುತ್ತಾ ಒಂದು ತರಹದ ಮೈಂಡ್ ಮ್ಯಾಚುರಿಟಿ ಅನ್ನುತ್ತಾರಲ್ಲ ಅದು ಬಂತು ನೋಡಿ. ಅದರ ಫಲ ಏನಪ್ಪಾ ಅಂದರೆ ಇನ್ನೊಬ್ಬರ ಶೂ ನಲ್ಲಿ ನಿನ್ನ ಕಾಲಿಟ್ಟು ನೋಡು ಅಂತ! ಅಂದರೆ ಥೇಟ್ ಅವರವರ ಸಮಸ್ಯೆಗಳನ್ನು ಅವರವರ ಕಣ್ಣು ಹೃದಯದಿಂದಲೇ ಕಾಣು ಅಂತ. ಹೀಗೆ ಆ ಮಿಲ್ಕ್ ವೈರಿ ಹೃದಯದಿಂದ ಅವನ ಪ್ರಾಬ್ಲಂ ಅರ್ಥ ಮಾಡಿಕೊಳ್ಳಲು ಪ್ರಯತ್ನ ಪಟ್ಟೆ ತಾನೇ?

ಆಗಲೇ ಸಾರ್ ನನಗೆ ನಾನೆಂಥ ಸುಖಿ ಅಂತ ಅನಿಸಿದ್ದು! ಈ ನಾನೆಂಥ ಸುಖಿ ಎನ್ನುವ ಯೋಚನೆ ತಲೆ ಹೊಕ್ಕಿ ಅಲ್ಲಿ ಬಲವಾಗಿ ಜಾಂಡಾ ಊರಿತಾ? ಅದರಿಂದ ಸುಮಾರು ಜನರ ಸಮಸ್ಯೆಗಳು ಗೊತ್ತಾಗುತ್ತಾ? ಆಗ ನಾನು ಸುಖಿ ಅನಿಸುತ್ತೆ ಮೇಡಂ.

ಒಂದೆರೆಡು ವುದಾಹರಣೆ ಹೇಳಲಾ?

ಕಾರ್ಖಾನೆ ಸಿ ಎಂ ಡಿ ನೋಡ್ತೀನಾ? ಪಾಪ ಇನ್ನೊಂದು ತಿಂಗಳಿಗೆ ರಿಟೈರ್ ಆಗುತ್ತೆ. ಈ ಸಮಯದಲ್ಲಿ ಸ್ಟ್ರೈಕ್ ಪೈಕು ಆದರೆ ಅವನಿಗೆ ಇನ್ನೊಂದು ಕಡೆ ಸಿಗುವ ಪ್ಲೇಸ್ ಮೆಂಟ್ ಗೋವಿಂದ ಆಗುತ್ತೆ. ಹಾಕಿರೋ ಬಂಡವಾಳ ವೇಸ್ಟ್ ಆಗ್ತದೆ. ಅವನ ಶೂನಲ್ಲಿ ನನ್ನ ಕಾಲು ಇಟ್ಟು ನೋಡಿದೆ ತಾನೇ? ಅವನ ಪ್ರಾಬ್ಲಂ ನನ್ನ ಪ್ರಾಬ್ಲಮ್ ಆಗುತ್ತೆ...! ಅಷ್ಟು ದೂರ ಯಾಕೆ ಹೋಗ್ತೀರ? ಇಲ್ಲೇ ಪಕ್ಕದಲ್ಲಿ ಇರೋ ಸಮಸ್ಯೆ ತಲೆಗೆ ತಗೊಳ್ಳಿ...

ಮುಖ್ಯ ಮಂತ್ರಿ ಆಗಬೇಕು ಅಂತ ಕಾದಿರುವ ರಾಜಕಾರಣಿ ನನ್ನ ಸಿಂಪತಿ ಪಡೆಯುತ್ತಾರೆ. ಮುಖ್ಯ ಮಂತ್ರಿ ಆಗೇ ನೂರುವರ್ಷ ಬದುಕಬೇಕು ಎನ್ನುವ ಮನಸಾ ನನ್ನ ಸಿಂಪತಿ ಪಡೆಯುತ್ತಾನೆ! ಅದೇ ರೀತಿ ಪ್ರಧಾನಿ ಆಗಬೇಕು ಎನ್ನುವ ಆಸೆ ಇರುವ ಅರವತ್ತು ವರ್ಷದ ಯುವನಾಯಕ ನನ್ನ ಸಿಂಪತಿ ಗಿಟ್ಟಿಸುತ್ತಾರೆ...... ಹೀಗೆ ಅನೇಕ ಅತೃಪ್ತ ಆತ್ಮಗಳಿಗಿಂತ ನಾನು ಮೇಲು ನಾನು ಮೇಲು ಅನಿಸಿಬಿಡುತ್ತದೆ..! ಅವರೆಲ್ಲರಿಗಿಂತ ನಾನು ಸುಖಿ ನನ್ನ ಬಿಟ್ಟರೆ ಇಲ್ಲ... ಎನ್ನ ಸಮಾನರಾರೀರ ಹೈ..... ಅಂತ ಕೈಯಲ್ಲಿ ಗದೆ ಹಿಡಿದು ಭೀಮಸೇನನ ಹಾಗೆ ಕುಣಿಯುವ ಉಮೇದು ಹುಟ್ಟುತ್ತದೆ...

ಈಗ ಹೇಳಿ ನಾನು ಪರಮ ಸುಖಿ ತಾನೇ....? ನಾನು ಮೇಲು ನಾನು ವಾಸಿ ಎನ್ನುವ ಭಾವನೆ ಎಷ್ಟು ಕೋಟಿ ಜನಕ್ಕೆ ಬರ್ತದೇ.....ನಾನು ನಂಬದ ಆ ದೈವ ನನ್ನನ್ನು ಎಷ್ಟು ಸುಖಿಯಾಗಿ ಮಾಡಿದೆ ಮಡಗಿದೆ..... ಎಂದು ಸಂತೋಷ ಆಗ್ತದೆ ಇವರೇ....

■

# ಸಣ್ಣಮ್ಮನ ಸೊಸೆ

**ಪುಷ್ಪಲತ ಟಿ.ಜಿ**

ಇನ್ನೇನು ಮಳೆಗಾಲ ಕಾಲಿಡುತ್ತಿದ್ದಂತೆ ಕಪ್ಪೆಗಳ ಕೂಗು ಕಾಡಿನಲ್ಲಿ ಮಾರ್ದನಿಸುತ್ತಿತ್ತು. ಇಂಬಳಗಳು ಇನ್ನು ತಮ್ಮ ಆಟ ಶುರು ಎಂಬಂತೆ ತಲೆ ಎತ್ತುತ್ತಿದ್ದವು. ಅವುಗಳ ನಡು ನಡುವೆಯೇ ತಪ್ಪಿಸಿಕೊಳ್ಳುವಂತೆ ಹೆಜ್ಜೆ ಹಾಕುತ್ತಾ ಬರುತ್ತಿದ್ದವ ದೂರದಿಂದ ಕಾಡು ಮನುಷ್ಯನಂತೆ ಕಾಣುತಿದ್ದ. ಮಳೆಗೆಂದು ಕೊಪ್ಪೆ ಮಾಡಿದ್ದ ಅವನ ಕಂಬಳಿಯಿಂದ ನೀರು ಜಿನುಗುತ್ತಿತ್ತು. ಕಾಡಿನ ನಡುವಿನ ಕಾಲುದಾರಿಯಲ್ಲಿ ಮೋಡದ ಮರೆಯಲ್ಲಿ ಗವ್ ಎನ್ನುವ ಕತ್ತಲೆಯಲ್ಲಿ ಎಲ್ಲವೂ ಮೊದಲೇ ಅಸ್ಪಷ್ಟ. ಕಪ್ಪು ಕಂಬಳಿಯ ಮರೆಯಲ್ಲಿ ಒಬ್ಬ ಮನುಷ್ಯ ಬರುತ್ತಿರುವುದನ್ನು ವಾಸನೆ ಗ್ರಹಿಸುವ ಜೀವಿಗಳಲ್ಲದೆ ಬೇರೆ ಯಾರೂ ಪತ್ತೆ ಮಾಡುವಂತೆ ಇರಲಿಲ್ಲ. ಅವರೊಂದಿಗೆ ಬದುಕಿದ್ದ ಯಾವುದೋ ಪ್ರಾಣಿ ಎಂದುಕೊಳ್ಳಬಹುದಿತ್ತು. ಚಪ್ಪಲಿ ಇಲ್ಲದ ಕಾಲನ್ನು ಒದ್ದೆಯಾದ ಎಲೆ ದರುಕಿನ ಮೇಲೆ ಪಟ ಪಟನೆ ನಡೆಯುತ್ತಾ ಕಾಡಿನ ಹಳು ಬಿಟ್ಟು ತೋಟದ ಬೇಲಿ ದಾಟಿ ಆಚೀಚೆ ನೋಡುತ್ತಾ ಬಣ ದಾಟಿ ದಾಟಿ ಹೊರಟವನ ಗುರುತು ಸಿಗದೆ ಡಿಂಗ ರಂಪ ಎಬ್ಬಿಸಿತ್ತು. ಮಳೆ ಜಿನುಗುವುದು ನಿಂತಿತ್ತು. ತೋಟದ ಅಂಚಿಗೆ ತಾಗಿದ್ದ ಹೊಳೆಯನ್ನೇ ದಿಟ್ಟಿಸುತ್ತಾ ಬಾಲ ಆಡಿಸುತ್ತಾ ನಿಂತಿದ್ದ ಡಿಂಗ ಇನ್ನ್ಯಾವುದೋ ಮೂಲೆಯಿಂದ ಅನಿರೀಕ್ಷಿತ ಆಗಮನಕ್ಕೆ ಬೆಚ್ಚಿ ಬಿದ್ದಿತ್ತು. ಸದಾ ಕುರ್ಕಿ ಭಯಕ್ಕೆ ಎಚ್ಚೆತ್ತು ತನ್ನ ಜೀವ ರಕ್ಷಣೆಗೆ ಮುಂದಾಗಿರುತಿದ್ದ ಡಿಂಗನಿಗೆ ಅಸ್ಪಷ್ಟ ಆಕೃತಿ ಕಾಣಿಸಿದ್ದೆ ದೊಡ್ಡದಾಗಿ ಬೊಗಳುತ್ತ ಹಿಂದೆ ಓಡಿದ್ದು ಮನೆ ಕಾಣುತ್ತಿದೆ ಎನ್ನುವಷ್ಟು ಹತ್ತಿರ ಹೋದ ಬಳಿಕ ತನ್ನ ಶೌರ್ಯ ತೋರಿಸುವಂತೆ ಆರ್ಭಟಿಸಿತು.

ಈಗಷ್ಟೇ ತನ್ನ ಒಡೆಯನೊಂದಿಗೆ ಬಲೆ ಬಿಡಲು ಹೊಳೆ ಕಡೆ ಹೋಗಿದ್ದನ್ನು ಗಮನಿಸಿದ್ದ ಗೌರಿ ನಿನ್ನ ಬಿಟ್ಟು ಹೋದ್ರ ಹೊಳೆಗೆ ...ಬಾ ಮಗ ....ಎಂದು ಸಂತೈಸುವ ದನಿಯಲ್ಲಿ ಕರೆದಳು. ದೊಡ್ಡಪ್ಪನೊಂದಿಗೆ ಹೋಗಿದ್ದ ಗುಂಡು, ಡಿಂಗನನ್ನು ಇತ್ತ ಓಡಿಸಿ ಹೋಗಿರಬಹುದು. ಅದೇ ಸಿಟ್ಟಿಗೆ ಹೀಗೆ ಕೂಗುತ್ತಿರುವುದು ಎಂದು ತಿಳಿದವಳು ಪಾತ್ರೆ ತೊಳೆಯುತ್ತಲೇ ತನ್ನತ್ತ ಕರೆಯುತ್ತಿದ್ದಳು.

ಡಿಂಗ ಮಾತ್ರ ಅದು ಮನುಷ್ಯರ ಆಕೃತಿ ಎಂದು ಸರಿಯಾಗಿ ಕಾಣುವವರೆಗೂ ಒಂದು ಕಣ್ಣು ಮನೆಯತ್ತ ಇನ್ನೊಂದು ಕಣ್ಣು ದಾರಿಯತ್ತ ತಿರುಗಿಸುತ್ತಾ ಕೂಗುತ್ತಲೇ ಇತ್ತು. ಯಾರಾದರೂ ಬಂದರೇ ಎಂದು ಬಚ್ಚಲಿನಿಂದಲೇ ಬಗ್ಗಿ ನೋಡಿದ ಗೌರಿ ಓಹ್... ಬಾವರು.... ಈ ಮಳೆಯಲ್ಲಿ ಇವರು ಎತ್ಲ ಕಡೆಯಿಂದ ಬರ್ತಿದ್ದಾರೆ ಎಂದು ಯೋಚಿಸುತ್ತಾ ಕಡಿಮಾಡಿಗೆ ಬಂದು ನಿಂತಳು. ಅಷ್ಟರಲ್ಲಿ ಇನ್ನೊಂದು ದಾರಿಯಿಂದ ಬಂದ ಸಣ್ಣಮ್ಮ ಗೌರಿ.....ಮಳೆ ಹೆಜ್ಜೆ ಇಡೋಕು ಬಿಡೋ ತರ ಇಲ್ಲೇ.... ಎನ್ನುತ್ತಲೇ ಅಂಗಳಕ್ಕೆ ಬಂದರು.

ಕಂಬಳಿ ಸುತ್ತಲೇ ನೋಡುತಿದ್ದ ಡಿಂಗನಿಗೆ ಸಣ್ಣಮ್ಮ ನ ಆಗಮನದ ಸುಳಿವೆ ಸಿಕ್ಕಿರಲಿಲ್ಲವೋ ಇಲ್ಲ ಗುರುತು ಸಿಕ್ಕಿತೋ ಕೂಗದೆ ಅಲ್ಲೇ ಬಾಲ ಅಲ್ಲಾಡಿಸಿತು. ಡಾಕಪ್ಪ ಸಣ್ಣಮ್ಮ ಇಬ್ಬರೂ ಮುಖ ಮುಖ ನೋಡಿಕೊಂಡು ಕುಶಲೋಪರಿ ಮಾತನಾಡುತ್ತಾ ಒಳ ಬಂದರು. ಇಬ್ಬರು ಕತೆಗಾರರೇ...ಎಂದುಕೊಳ್ಳುತ್ತಾ ಗೌರಿ ಚಾ ಮಾಡಲು ಒಳ ನಡೆದರೆ ಡಿಂಗ ಬೆಂಕಿ ಕಾಯಿಸಲು ಒಲೆಯತ್ತ ಕುಳಿತು ಇವರ ಅನ್ವೇಷಣೆಯ ಮಧ್ಯೆ ಮರೆತ ಟೀಪು ಎಲ್ಲಿ ಹೋಯಿತು ಎಂದು ಹುಡುಕಿತು.

ದೊಡ್ಡಪ್ಪನೊಂದಿಗೆ ಉಕ್ಕಡ (ಚಿಕ್ಕ ದೋಣಿ) ದಲ್ಲಿ ಕುಳಿತು ಸುತ್ತಲೂ ನೋಡಿ ಆನಂದಿಸುತಿದ್ದ ಗುಂಡ ಡಿಂಗನನ್ನು ಅತ್ತಿತ್ತ ಹುಡುಕುತಿದ್ದ. ಡಿಂಗನಿಗೆ ಈಜು ಬರುವುದರಿಂದ

ತಾನು ಬಿಸ್ಕೆಟ್ ಕೊಟ್ಟು ಗಳಿಸಿದ್ದ ವಿಶ್ವಾಸಕ್ಕೆ ಹಿಂದೆ ಈಜುತ್ತಾ ಬರುತ್ತಿರಬಹುದು ಎಂಬ ಅವನ ಪೆದ್ದು ಯೋಚನೆ ಫಲ ಕೊಡಲಿಲ್ಲ.ಹಿಂದಿರುಗಿ ನೋಡಿದಷ್ಟು ದೂರ ನೀರು ಹೊರತು ಡಿಂಗ ಕಾಣಲಿಲ್ಲ. ಇನ್ನು ದಡದ ಸುತ್ತಲೂ ಎಷ್ಟು ಕಣ್ಣಾಯಿಸಿದರೂ ಕಾಣದ ಡಿಂಗನನ್ನು ಮನದಲ್ಲೇ ಕಾದು ಕಾದು ಬೈದುಕೊಂಡು ನಿರಾಸೆಪಟ್ಟವ ದೊಡ್ಡಪ್ಪನನ್ನು ಕೇಳಿದ್ದ. ಡಿಂಗ ಹಿಂದೆ ಬರಲ್ಲ ದೊಡ್ಡಪ್ಪ..

ಕಾನಿಗೆ ಹೊರಟರೆ ಮೊದ್ಲು ಬರ್ತಿತ್ತು ಆಮೇಲೆ ಕುರ್ಕಿ ಭಯ ಅಂತ ನಾ ಬಿಟ್ಟು ಹೋಗೋಕೆ ಶುರು ಮಾಡಿದೆ. ನಾವು ಕರೆದ್ರೆ ಬರ್ತಾನೆ ಎಲ್ಲರ ಹಿಂದೆನು ಹೋಗಲ್ಲ. ಎಂದವರು ಬಲೆ ಬಿಡುವುದರಲ್ಲಿ ನಿರತರಾದರು.

ವಾಸ್ತವದಲ್ಲಿ ಡಿಂಗ ಅಷ್ಟೆಲ್ಲ ತೊಂದರೆ ತೆಗೆದುಕೊಳ್ಳುವ ನಾಯಿಯೇ ಅಲ್ಲವಾಗಿತ್ತು. ಕಾಡಿಗೆ ಹೋಗುವುದು ಒಡೆಯನ ಮೇಲಿನ ಪ್ರೀತಿಗೆ ವಿನಃ ಹಸಿ ಮಾಂಸ ಮೀನು ತಿನ್ನುವ ಯಾವುದೇ ಅಭ್ಯಾಸ ಅದಕ್ಕಿರಲಿಲ್ಲ. ಬೇಕಿರುವುದೆಲ್ಲ ಹೊತ್ತು ಹೊತ್ತಿಗೂ ತಟ್ಟೆಯಲ್ಲಿ ಸಿಗುತ್ತಿತ್ತು ಪ್ರೀತಿ ಸಮೇತ. ಹೀಗಿರುವಾಗ ಅದು ಗುಂಡನ ಚಿಕ್ಕ ಬಿಸ್ಕೆಟ್ ತುಣುಕಿಗೆ ಆ ಮಳೆಯಲ್ಲಿ ಹೊಳೆಗೆ ಹಾರಿ ಹಿಂದೆ ಹೋಗುವುದು ಅದರ ಕಲ್ಪನಾ ಶಕ್ತಿಗೂ ಮೀರಿದ್ದು. ಜಿನುಗುವ ಮಳೆಯಲ್ಲಿ ನೆನೆದು ಬೆಂಕಿ ಕಾಯಿಸುತ್ತ ಕುಳಿತಿದ್ದ ಡಿಂಗ ಟೀ ಲೋಟದ ಸದ್ದಿಗೆ ದಿಗ್ಗನೆ ಎದ್ದು ಬಾಗಿಲ ಬಳಿ ಓಡಿತು. ಎಷ್ಟೇ ಇಣುಕಿದರು ಒಳಗಿನ ದೀಪದ ಬೆಳಕಿಗೆ ಟೀ ಜೊತೆ ಅವರು ತಿನ್ನುತ್ತಿರುವುದು ಕಾಣಿಸಲಿಲ್ಲ. ಆದರೆ ಡಿಂಗ ಬಾಗಿಲಿಗೆ ಬಂದಿದ್ದು ಗೌರಿಗೆ ಕಾಣಿಸಿತು. ಕೈಲಿದ್ದ ಬ್ರೆಡ್ ಕವರ್ ತಂದವರು ಪುಟ್ಟಿ ಇದ್ದಿದ್ರೆ ಇದಷ್ಟು ಇವ್ನಿಗೆ ಆಗ್ತಿತ್ತು ಎನ್ನುತ್ತಾ ಎರಡು ಬ್ರೆಡ್ ಕೊಟ್ಟು ಟೀಪುವಿಗೆ ಹುಡುಕಿದರು.

ಗುಂಡ ದೊಡ್ಡಪ್ಪನೊಂದಿಗೆ ಕತೆಗೆ ಇಳಿದಿದ್ದ ಹಿಂದಿನ ಕಾಲದ ಬೇಟೆಯನ್ನು ವಿವರಿಸುತ್ತಿದ್ದರೆ ಗುಂಡನಿಗೆ ಆಯಾ ಕಾಲದಲ್ಲಿ ತಾನು ಹುಟ್ಟಬಾರದಿತ್ತೆ ಎನ್ನಿಸುತ್ತಿತ್ತು. ಬಲೆ ಬಿಟ್ಟು ಉಕ್ಕಡ ಮನೆಯತ್ತ ತಿರುಗಿಸುವ ಹೊತ್ತಿಗೆ ದಡದಲ್ಲಿ ನಿಂತಿದ್ದ ಟೀಪು ಒದ್ದೆಯಾಗಿ ಓಡುತ್ತಾ ಬರುತ್ತಿರುವುದು ನೋಡಿ ಗುಂಡನ ಕಣ್ಣು ತುಂಬಿ ಬಂತು.

ತಮ್ಮನ್ನು ಹಿಂಬಾಲಿಸಿ ಸುತ್ತುವರಿದು ದಡ ಬಳಸಿ ಬಂದಿದ್ದ ಟೀಪು ಪ್ರೀತಿ ಆ ಕ್ಷಣಕ್ಕೆ ಜಗತ್ತಿನ ಎಲ್ಲ ಕುಶಿ ಮೀರಿದ್ದು ಎನ್ನಿಸಿತು.

ಇತ್ತ ಟೀ ಕುಡಿದು ಮಾತನಾಡುತ್ತಾ ಡಾಕಪ್ಪ ಅಚಾನಕ್ ಆಗಿ ನಿನ್ನೆ ಗೀತಾ ಬಂದಿದ್ದು ಸೂಜಿ ಮೆಣಸು ಕೇಳ್ತು ಎಂತ ಮಾಡಕೆ ಅವು ಅಂದಿದ್ದು ಸಣ್ಣಮ್ಮ ನ ರೋಷವೇಶಕ್ಕೆ ಕಾರಣವಾಗಿತ್ತು. ಡಾಕಪ್ಪ ಪೇಚಾಟಕ್ಕೆ ಸಿಲುಕಿದಂತೆ ಕುಳಿತ. ಗೌರಿ ವಿಷಯ ಬದಲಿಸಲು ಅಡಿಕೆ ಹರಿವಾಣ ಕೊಟ್ಟ ಉಪಾಯ ಅರವತ್ತರ ಮುದುಕಿಯ ಅನುಭವದೆದುರು ನೀರು ಪಾಲಾಯ್ತು. ಸಣ್ಣಮ್ಮ ಜೋರಾಗಿ ಸೊಸೆಗೆ ಬಯ್ಯುತ್ತಾ ನಾನು ಮನೇಲಿ ಇಲ್ಲದಾಗೆಲ್ಲ ತಿರುಗೋದೆ ಕೆಲ್ಸ ಎಂದು ಗೌರಿಗೆ ಸೊಸೆಯ ನೂರು ದೂರು ಹೇಳುತ್ತಲೇ ಮನೆಯತ್ತ ಹೆಜ್ಜೆ ಬೀಸಿದರು. ಡಾಕಪ್ಪ ತನ್ನಿಂದ ಅನಾಹುತ ಆಯಿತೆಂಬ ಅಪರಾಧಿ ಮುಖದಲ್ಲಿ ಅಂತರ್ಧಾನರಾದರು. ಗುಂಡ ಅಲ್ಲಿಂದಲೇ ಡಿಂಗನಿಗೆ ಬಯ್ಯುತ್ತಾ ಟೀಪುವನ್ನು ಮುದ್ದಾಡುತ್ತಾ ಸ್ನಾನದ ಮನೆಗೆ ಹೋದ.

ಟೀಪು ಒದ್ದೆ ಮೈ ಕೊಡವುತ್ತಾ ಬೆಂಕಿಯತ್ತ ಓಡಿತು. ಗುಂಡನ ಕೈಗೆ ದೊಡ್ಡಪ್ಪ ಕೊಟ್ಟ ಮೀನಿನ ಚೀಲವನ್ನು ನೋಡುತ್ತಲೇ ಡಿಂಗ ಬಾಲ ಆಡಿಸಿತು. ದೊಡ್ಡಮ್ಮ ಸಣ್ಣಮ್ಮ ನ ಅವಾಂತರ ಹೇಳುತ್ತಾ ಬಚ್ಚಲಿಗೆ ಬಂದಾಗ ಮೀನಿನ ಚೀಲ ತೋರಿಸಿ ಇದರ ಸಾರು ಡಿಂಗನಿಗೆ ಮಾತ್ರ ಹಾಕಬೇಡ ಎಂದು ಕಟ್ಟಪ್ಪಣೆ ಮಾಡಿದ. ಡಿಂಗ ಗುಂಡನ ಕೈಲಿರುವ ಚೀಲವನ್ನು ದಿಟ್ಟಿಸುತ್ತಾ ನಿಂತಿತ್ತು.

■

# ಕಲ್ಲಿಗಾಲವಯ್ಯ ಕಲ್ಲಿಗಾಲ

ನಳಿನಿ ಟಿ. ಭೀಮಪ್ಪ, ಧಾರವಾಡ

ಕಾಗಕ್ಕ ಗುಬ್ಬಕ್ಕನ ಕಥೆಯನ್ನು ಕೇಳುತ್ತಾ ಬೆಳೆದವರು ನಾವು. ಅದರಲ್ಲಿ ಗುಬ್ಬಕ್ಕನ ಮಣ್ಣಿನ ಮನೆ ಮಳೆಗೆ ಕರಗಿಹೋಗಿ, ಕಾಗಕ್ಕನ ಕಲ್ಲಿನ ಮನೆ ಗಟ್ಟಿಯಾಗಿ ನಿಂತಿತ್ತು, ಎನ್ನುವ ಸಾಲು ಮನದಾಳದಲ್ಲಿ ಬಲುಗಟ್ಟಿಯಾಗಿ ನಿಂತು ಕಲ್ಲು ಎಂಬ ಘನವಸ್ತುವಿನ ಗುಣಲಕ್ಷಣವನ್ನು ಹಿರಿಯರು ಯಾವ ಪಠ್ಯಪುಸ್ತಕದ ಆಧಾರವಿಲ್ಲದೆಯೇ ಮಸ್ತಕಕ್ಕೆ ತುಂಬುವುದರಲ್ಲಿ ಯಶಸ್ವಿಯಾಗಿದ್ದರು. ಬಾಯಾರಿದ ಕಾಗೆಯೊಂದು ಹೂಜಿಯಲ್ಲಿ ತಳಕಂಡಿದ್ದ ನೀರಿಗೆ, ಕೊಕ್ಕಿನಿಂದ ಕಲ್ಲುಗಳನ್ನು ಹೆಕ್ಕಿ ತಂದು ಹಾಕಿ, ನೀರು ಮೇಲೆ ಬರುತ್ತಿದ್ದಂತೆ ಕುಡಿದು ಹಾರಿತ್ತು ಎನ್ನುವ ಕತೆಯಲ್ಲೂ ಸಹ, 'ಬಯಾನ್ಸಿ' ಎನ್ನುವ ಭಯಪಡಿಸುವ ಪದದ ಅರ್ಥವನ್ನು ಸರಳವಾಗಿ ಪ್ರಾಯೋಗಿಕವಾಗಿಯೇ ತಿಳಿಸಿತ್ತು. ಹೀಗೆ ಕಲ್ಲು ಎನ್ನುವ ವಸ್ತುವಿನ ಗುಣ, ಲಕ್ಷಣಗಳ ಬಗ್ಗೆ ಸಾಕಷ್ಟು ಅರಿವನ್ನು ಬಾಲ್ಯದಲ್ಲಿ ಪಡೆದಿದ್ದೆವು. ರೋಡ್ ರೋಲರ್‌ಗಳಂತಿದ್ದ ನಾಯಿ, ಹಂದಿ ಮುಂತಾದವುಗಳನ್ನು ಓಡಿಸಲು ಕಲ್ಲೇ 'ಪಶುಪತಾಸ್ತ್ರ'ವಾಗಿ ಕೆಲಸ ಮಾಡುತ್ತಿತ್ತು. ಕಲ್ಲುಸಂಬಂಧಿಗಳಾಗಿ ಗುರುತಿಸಿಕೊಳ್ಳುವ ಕಲ್ಲಪ್ಪ, ಕಲ್ಲವ್ವ, ಕಲ್ಲೇಶ, ಕಲ್ಲಕ್ಕ, ಕಲ್ಲಜ್ಜ, ಹರಳಯ್ಯರಂತಹ ಹೆಸರುಗಳು ಒಂದೆಡೆಯಾದರೆ, ಕಲ್ಲೆದೇವರಪುರ, ಪಟ್ಟದಕಲ್ಲು, ಕಲ್ಲಿಗನೂರು ತರಹದ ಎಷ್ಟೋ ಊರುಗಳ ಹೆಸರುಗಳೂ ಪರಿಚಿತವಿದ್ದವು.

ಕುಂಟಾಬಿಲ್ಲೆ, ಲಗೋರಿ, ಆಣೇಕಲ್ಲಾಟ ಇಂತಹ ಕಲ್ಲಾಟಗಳ ಬಗ್ಗೆಯೇ ಬಾಲ್ಯದಲ್ಲಿ ಒಲವು ಹೆಚ್ಚು. ಆಣೇಕಲ್ಲಾಟ ಮಳೆಯ ಜೊತೆ ತಳುಕು ಹಾಕಿಕೊಂಡಿರುವುದು ವಿಚಿತ್ರ. ಇಲ್ಲಿ ಆಲೀಕಲ್ಲಿನ ಮಳೆಯ ಬಗ್ಗೆ ಹೇಳುತ್ತಿಲ್ಲ. ಅಲಿಕಲ್ಲಿನ ಮಳೆ ಬಿದ್ದರೆ, ಮುಂದೆ ಮಳೆ ಕಡಿಮೆಯಾಗುವ ಲಕ್ಷಣ ಎನ್ನುವ ನಂಬಿಕೆ ಈಗಲೂ ಇದೆ. ಈಗ ಹೇಳುತ್ತಿರುವುದು ಐದು ಬೆಣಚು ಕಲ್ಲುಗಳ ಆಟವಾದ ಆಣೇಕಲ್ಲಾಟದ ಬಗ್ಗೆ. ಮಳೆ ಬರದ ಪ್ರದೇಶಗಳಲ್ಲಿ ಅವುಗಳನ್ನು ಆಡಿದರೆ ಹಿರಿಯರು 'ಆಡಬೇಡಿ, ಮಳೆ ಹೋಗಿಬಿಡುತ್ತದೆ' ಎಂದು ದೊಡ್ಡ ಕಣ್ಣು ಬಿಟ್ಟು ಹೆದರಿಸುತ್ತಿದ್ದರು. ಮಳೆಬೀಳುವ ಪ್ರದೇಶಗಳ ಊರುಗಳಲ್ಲಿ ಎಡೆಬಿಡದೆ ಮಳೆಬೀಳುವಾಗ 'ಆಣೇಕಲ್ಲಾದರೂ ಆಡ್ರೋ ಮಕ್ಕಾ, ಮಳೆ ಚೂರು ಬಿಡುವು ಕೊಡಲಿ' ಎಂದು ಉತ್ತೇಜಿಸುತ್ತಿದ್ದರು. ಹಂಪೆಯಲ್ಲಿನ ಕಲ್ಲಿನ ರಥ ಚಲಿಸಿದಾಗ ಹಾಗೂ ಅಲ್ಲಿರುವ ಕಲ್ಲಿನ ಕೋಳಿ ಕೂಗಿದಾಗ ಪ್ರಳಯ ಸಂಭವಿಸುತ್ತದೆ ಎಂದು ಭಯ ಹುಟ್ಟಿಸಿದ್ದರಿಂದ ಅಂತಹ ಅವಗಢವಾಗದಿರಲಿ ದೇವರೇ ಎಂದು ಭಕ್ತಿಯಿಂದ ಬೇಡಿಕೊಳ್ಳುವುದಿತ್ತು.

ಕಲ್ಲುಗಳಿಂದಲೂ ಸಂಗಾತಿಯನ್ನು ಒಲಿಸಿಕೊಳ್ಳುವ ಪ್ರಬೇಧಗಳಿವೆ. ಗಂಡು ಪೆಂಗ್ವಿನ್ ತನಗೆ ಸಿಗುವ ಅತ್ಯಂತ ನುಣುಪಾದ ಕಲ್ಲನ್ನು ಹೆಣ್ಣು ಪೆಂಗ್ವಿನ್‌ಗೆ ನೀಡುವ ಮೂಲಕ ಪ್ರೊಪೋಸ್ ಮಾಡುತ್ತದೆಯಂತೆ. ಒಂದು ವೇಳೆ ಹೆಣ್ಣು ಪೆಂಗ್ವಿನ್ ಅದನ್ನು ಸ್ವೀಕರಿಸಿದರೆ ಅವು ಜೋಡಿಯಾಗುತ್ತವೆಯಂತೆ. ಕಲ್ಲಿನ ಗುಣ ಸ್ವರೂಪ ಅಷ್ಟು ಸುಲಭವಾಗಿ ಬದಲಾಗದು ಎನ್ನುವ ಕಾರಣಕ್ಕಿರಬಹುದು! ಮನುಷ್ಯರು ಪುಪ್ಪುಸದಿಂದ ಬೇರೆಮಾಡಲಾಗದ ಹೃದಯವನ್ನು ಕಿತ್ತುಕೊಡುತ್ತೇನೆ ಎಂದೋ, ಎಂದೆಂದಿಗೂ ಎಟುಕಲಾರದ ಆಗಸದ ತಾರೆಗಳನ್ನು ತಂದು ಕಾಲಬಳಿ ಸುರಿಯುತ್ತೇನೆಂದೊ, ಹೀಗೆ ಆಗದ ಹೋಗದ ರೀತಿಯಲ್ಲಿ ಪ್ರೊಪೋಸ್ ಮಾಡುವ ಮೂರ್ಖತನ ಮಾಡುವುದಿದೆ. ಪ್ರೊಪೋಸ್ ದಿನದಂದು ಕೆಲಘಳಿಗೆಯಲ್ಲಿಯೇ ಮುದುಡಿ ಹೋಗುವ ಗುಲಾಬಿಯ ಮೂಲಕ ಇಂಗಿತ ವ್ಯಕ್ತಪಡಿಸುವುದಿದೆ. ಇದೆಲ್ಲದರ ಬದಲಿಗೆ ಜೀವನಪರ್ಯಂತ ಶಾಶ್ವತ ಬಾಳಿಕೆ ಬರುವ ಬಣ್ಣಬಣ್ಣದ ಹರಳುಗಳನ್ನು ಹುದುಗಿಸಿಕೊಂಡ ಸ್ವರ್ಣಾಭರಣಗಳನ್ನೋ, ವಜ್ರದ ಕಲ್ಲಿನ ಆಭರಣಗಳನ್ನೋ ಕೊಟ್ಟು ಪ್ರೊಪೋಸ್ ಮಾಡಲು ಪ್ರಯತ್ನಿಸಿದರೆ ನಿಖರ ಫಲಿತಾಂಶ ದೊರಕುವ ಸಾಧ್ಯತೆಯನ್ನು ಅಲ್ಲಗೆಳೆಯುವಂತಿಲ್ಲ. ಪತ್ತಾರನು ಬಂಗಾರದ ಶುದ್ಧತೆಯನ್ನು ಕಷ್ಷಿ ಪತ್ತರ್(ಒರೆಗಲ್ಲು)ಗೆ ಉಜ್ಜಿ ಪರೀಕ್ಷಿಸುವಂತೆ, ಪ್ರೇಮಿಗಳ ಬದ್ಧತೆಯನ್ನು ಅಳೆಯುವ

ಮಾಪನವಿದ್ದಿದ್ದರೆ ಚೆನ್ನಾಗಿರುತ್ತಿತ್ತೇನೋ!

ಕಲ್ಲು ಹೊಡೆಯುವುದೆಂದರೆ ಜನರಿಗೆ ಎಲ್ಲಿಲ್ಲದ ಉತ್ಸಾಹ. ಮರದಲ್ಲಿರುವ ಹಣ್ಣುಗಳನ್ನು ಹಕ್ಕಿಗಳನ್ನು ಹೊಡೆಯಲು ದಾರಿಹೋಕರಿಗೆ ಕಲ್ಲಿಗಿಂತ ಪ್ರಮುಖ ಸಾಧನ ಮತ್ತೊಂದಿಲ್ಲ. ಹಾದಿ ಬೀದಿಯಲ್ಲಿ ಎಲ್ಲೆಂದರಲ್ಲಿ ಧಾರಾಳವಾಗಿ ಬಿದ್ದಿರುತ್ತವಾದ್ದರಿಂದ ತಕ್ಷಣಕ್ಕೆ ಹುಡುಕಿಕೊಳ್ಳಬಹುದು. ಕ್ಯಾಟರ್‌ಪಿಲ್ಲರ್‌ನಿಂದ ಹೊಡೆಯುವುದಾದರೂ ಅದು ಚಿಕ್ಕ ಕಲ್ಲುಗಳಿಗೆ ಸೀಮಿತ. ನಿಂತಲ್ಲಿಂದ ಒಂದು ಹೆಜ್ಜೆ ಮುಂದಿಟ್ಟು, ಒಂದು ಬದಿಗ ತಿರುಗೆ ಕಾಮನಬಿಲ್ಲಿನಂತೆ ಬಾಗಿ, ಒಂದು ಕೈಯ್ಯನ್ನು ಮೇಲೆತ್ತಿ, ಮತ್ತೊಂದು ಕೈಯಿಂದ ಕಲ್ಲನ್ನು ಬೀಸಿ ಎಸೆಯುವ ಕ್ರಮದಲ್ಲಿ ಸಕಲರೂ ಪಾರಂಗತರು. ಹಾಗಾಗಿಯೇ ಏನೋ ಮಾವಿನ ತಳಿಯೊಂದು 'ಕಲ್ಲು ನಾನು'(ಕಲ್‌ಮಿ) ಎನ್ನುವ ಹೆಸರಿನಿಂದಲೇ ಗುರುತಿಸಲ್ಪಡುತ್ತದೆ.

ಸರ್ಕಾರ ಅಥವಾ ವ್ಯವಸ್ಥೆಗಳ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿದ್ದಂತೆ 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆಹಾಕಿದರಂತೆ' ಎನ್ನುವ ಹಾಗೆ ಯಾರ ಮೇಲಿನ ಆಕ್ರೋಶವೋ ಏನೋ, ಬಡಪಾಯಿ ಬಸ್ಸುಗಳು ಹಾಗೂ ರೈಲುಗಳಂತಹವುಗಳ ಮೇಲೆ ಕಲ್ಲುತೂರಾಟ ನಡೆಸುವರು. ಸೆಲೆಬ್ರೆಟಿಗಳ ಮೇಲೆ ತಮ್ಮ ಅಸಮಾಧಾನ ತೋರಿಸಿಕೊಳ್ಳಲು ಅವರುಗಳ ಮನೆಗಳ ಮೇಲೆ ಕಲ್ಲಿನ ಮಳೆ ಸುರಿಸುವುದರ ಮೂಲಕ ಅಭಿಮಾನಿಗಳು ಆಕ್ರೋಶ ಹೊರಹಾಕುವುದಿದೆ. ಕಲ್ಲು ಹೊಡೆಯುವ ಅವಕಾಶವನ್ನು ಕೆಲ ಹಬ್ಬಗಳೂ ಸಹ ಕಲ್ಪಿಸಿವೆ. ಕೆಲವು ಹಳ್ಳಿಗಳಲ್ಲಿ 'ವರ್ಷ ತೊಡಕಿನ' ದಿನ ಎಲ್ಲರೂ ಚೆನ್ನಾಗಿ ಬಾಡೂಟ ಉಂಡು ರಾತ್ರಿ ಹರಟೆ ಹೊಡೆಯುತ್ತಾರಂತೆ. ಇದ್ದಕ್ಕಿದ್ದಂತೆ ಮನೆಗಳ ಮೇಲೆ ಕಲ್ಲು ಬೀಳುವಾಗ ಎಲ್ಲರೂ ಎದ್ದು ಒಳಗೆ ಓಡುತ್ತಾರಂತೆ. ಅಂದು ಪ್ರತಿಯೊಬ್ಬರೂ ಯಾರ ಮನೆಯ ಮೇಲಾದರೂ ಕಲ್ಲು ಹೊಡೆಯಬಹುದಂತೆ, ನೆರೆಹೊರೆಯವರ ಸಿಟ್ಟನ್ನು, ಹೊಟ್ಟೆಕಿಚ್ಚನ್ನು ಹೀಗೆ ಕಲ್ಲು ಹೊಡೆಯುವ ಮೂಲಕ ಹೊರಹಾಕಿ ಮರುದಿನ ಎಲ್ಲರೂ ಎಲ್ಲರ ಜೊತೆ ಸೌಹಾರ್ದವಾಗಿಯೇ ಇರುತ್ತಾರಂತೆ ಎಂದು ಮುಖಪುಸ್ತಕದ ಸ್ನೇಹಿತೆಯರೊಬ್ಬರು ಪೋಸ್ಟ್ ಹಂಚಿಕೊಂಡಿದ್ದರು. ಕಾಶ್ಮೀರದಲ್ಲಿ ಕಲ್ಲನ್ನೇ ಆಯುಧಗಳ ರೀತಿ ಮನೆಮನೆಗಳ ಮುಂದೆ ಸಂರಕ್ಷಿಸಿಕೊಂಡು ವಿರೋಧಿಗಳ ಮೇಲೆ ಈ ಕಲ್ಲಾಸ್ತ್ರಗಳಿಂದ ಆಕ್ರಮಣ ಮಾಡುವುದಿದೆ. ಅದ್ಯಾವುದೋ ದೇಶದಲ್ಲಿ ಕಲ್ಲು ಹೊಡೆದು ಸಾಯಿಸುವ ಶಿಕ್ಷೆಯೂ ಇದೆಯಂತೆ. ಬಹುಶಃ ಕಲ್ಲು ಎತ್ತಿಹಾಕಿ ಕೊಲೆಮಾಡುವವರಿಂದ ಈ ಶಿಕ್ಷೆ ಪ್ರೇರಣೆ ಪಡೆದಿರಬಹುದು. 'ಗಾಜಿನ ಮನೆಯಲ್ಲಿ ವಾಸಿಸುವವರು ಬೇರೆಯವರ ಮನೆಗಳಿಗೆ ಕಲ್ಲು ಎಸೆಯಬಾರದು' ಎನ್ನುವ ಗಾದೆಮಾತನ್ನು ಮನದಟ್ಟು ಮಾಡಿಕೊಳ್ಳುವುದೊಳಿತು.

ದುಬಾರಿಯಾದ ವಜ್ರಗಳು ಭೂಮಿಯ ಆಳದಲ್ಲಿ ಹೆಚ್ಚಿನ ತಾಪಮಾನ ಮತ್ತು ಒತ್ತಡದಲ್ಲಿ ರೂಪುಗೊಳ್ಳುತ್ತವೆಯಂತೆ. ಅದನ್ನು ಜ್ವಾಲಾಮುಖಿ ಚಟುವಟಿಕೆಗಳ ಮೂಲಕ ಹೊರತರಲಾಗುತ್ತದೆ ಎಂದು ತಿಳಿದಿದೆ. ನಮ್ಮ ದೇಹವು ಕೆಲವೊಮ್ಮೆ ಅನವಶ್ಯಕ ಕಲ್ಲುಹರಳುಗಳನ್ನು ಉತ್ಪಾದನೆ ಮಾಡಿ, ವಿವಿಧ ಬ್ಯಾಂಕ್ ಖಾತೆಗಳಲ್ಲಿ ಹೂಡಿಕೆ ಮಾಡುವಂತೆ, ಜಠರ, ಪಿತ್ತಜನಕಾಂಗ, ಕಿಡ್ನಿ ಹೀಗೆ ವಿವಿಧ ಅಂಗಗಳಲ್ಲಿ ಶೇಖರಿಸಿಡುವುದಿದೆ. ಅವಧಿ ಮೀರಿದ ನಂತರ ಖಾತೆಗಳಲ್ಲಿನ ಹಣವನ್ನು ರಿನ್ಯೂವಲ್ ಅಥವಾ ಡಿಸಾಲ್ವ್ ಮಾಡುವಂತೆ, ಕಲ್ಲುಹರಳುಗಳ ಡೆಪಾಸಿಟ್ ಹೆಚ್ಚಾಗುತ್ತಿದ್ದಂತೆ, ಅದನ್ನು ಸರ್ಜರಿ ಅಥವಾ ಲೇಸರ್ ತಂತ್ರಜ್ಞಾನದ ಮೂಲಕ ಡಿಸಾಲ್ವ್ ಮಾಡಿಯೋ, ಡೈಲ್ಯೂಟ್ ಮಾಡಿಯೋ ಹೊರಹಾಕಬೇಕಾಗುತ್ತದೆ. ಕಲ್ಲು ತಿಂದರೂ ಅರಗಿಸಿಕೊಳ್ಳುವಂತಹ ಕಾಲದಿಂದ, ಕಲ್ಲನ್ನು ತಿನ್ನದೆಯೇ ಆಟೋಮ್ಯಾಟಿಕ್ ಆಗಿ ದೇಹದೊಳಗೆ ಉತ್ಪಾದಿಸಿಕೊಳ್ಳುವ ಕಾಲಕ್ಕೆ ಬಂದಿದ್ದೇವೆ.

ಮನುಷ್ಯ ಭೂಮಿ ಮೇಲೆ ಅವತರಿಸಿದಾಗಿನಿಂದ ಜೊತೆಯಾಗಿರುವುದೇ ಕಲ್ಲು ಹಾಗೂ ಮಣ್ಣು. ಮಣ್ಣಿನಿಂದ ಬೆಳೆ ಬೆಳೆಯಬಹುದು ಎನ್ನುವ ತರ್ಕ ಅವನಿಗೆ ನಿಲುಕಿರಲಿಲ್ಲವಾದ್ದರಿಂದ ಕಲ್ಲು ಅವನ ಮೊದಲ ಸಂಗಾತಿ ಎನ್ನಬಹುದು. ಆಗಿನಿಂದ

ಇವನ ಕೈಗೆ ಸಿಕ್ಕ ಕಲ್ಲು ನಜ್ಜುಗಜ್ಜಾಗುತ್ತಲೇ ಇದೆ. ಬಿಲ್ವಿದ್ಯೆಗಿಂತ ಕಲ್ವಿದ್ಯೆಯೇ ಮೊದಲು ಆರಂಭಿಸಿದ್ದು. ಹಾಗಾಗಿ ಶಿಲಾಯುಗ ಶುರುವಾದ ಕಾಲವನ್ನು 'ಶಿಲಾಪಾಯ' ಆರಂಭದ ಯುಗ ಎನ್ನಬಹುದು. ಕಲ್ಲುಗಳನ್ನು ಘರ್ಷಿಸಿದಾಗ ಕಿಡಿ ಹೊತ್ತಿಕೊಳ್ಳುವುದೆಂಬ ಅರಿವು ಮೂಡಿದ ನಂತರ, ಮನುಷ್ಯರ ನಡುವೆ ಮಾತಿನ ಕಿಡಿ ಹೊತ್ತಿಸುವುದನ್ನೂ ಅರಿತುಕೊಂಡ.

'ಕಲ್ಲರಳಿ ಹೂವಾಗಿ' ಎನ್ನುವಂತೆ ಸುಣ್ಣದಕಲ್ಲುಗಳು ಹೂವಾಗಿ ಅರಳಿ ಶಿಖರಗಳಿಗೆ ಬೆಳಕಾಗುವುದಿದೆ. ಶಿಲ್ಪಿಗಳ ಕೈಯ್ಯಲ್ಲೂ ಕಲ್ಲುಗಳು ಸುಂದರ ಕಲಾ(ಲ್ಲಾ)ಕೃತಿಗಳಾಗಿ ಅರಳಿ ಮನಸೆಳೆಯುತ್ತವೆ. ವಾಸ್ತುಶಿಲ್ಪಿಗಳು ಅಡಿಗಲ್ಲು, ಹಾಸುಗಲ್ಲು, ಗೋಡೆಗಲ್ಲು, ಮುಡಿಗಲ್ಲು ಹೀಗೆ ಸಂಪೂರ್ಣ ಕಟ್ಟಡಗಳಿಗೆ ವಿವಿಧ ಮಾದರಿಯ ಕಲ್ಲುಗಳನ್ನು ಕಲಾ(ಲ್ಲಾ)ತ್ಮಕವಾಗಿ ಬಳಸಿ ಆಕರ್ಷಕವಾಗಿ ರೂಪುಗೊಳಿಸುವುದಿದೆ. ಹೂವಿನಿಂದ ನಾರೂ ಸ್ವರ್ಗ ಸೇರುವಂತೆ ವಿಗ್ರಹಗಳು, ಮೂರ್ತಿಗಳ ಜೊತೆಗೆ ತ್ಯಾಗ, ಬಲಿದಾನದಂತಹವುಗಳ ಕುರುಹಾಗಿರುವ ಮಾಸ್ತಿಗಲ್ಲು, ವೀರಗಲ್ಲುಗಳು ಕಲ್ಲುಗಳನ್ನು ದೈವತ್ವಕ್ಕೇರಿಸಿವೆ. ನೀರ್ಗಲ್ಲುಗಳು ಕರಗುತ್ತ ಸಮುದ್ರಮಟ್ಟವನ್ನು ಹೆಚ್ಚಿಸಿ ಆತಂಕ ತಂದೊಡ್ಡುವುದಿದೆ. ಹೆಚ್ಚಾನುಹೆಚ್ಚು ಕಲ್ಲಿನ ಗುಹೆಗಳಲ್ಲೋ, ಬಂಡೆಗಳ ಮೇಲೋ ಕಲ್ಲಿನಂತೆ ನಿಶ್ಚಲವಾಗಿ, ಧ್ಯಾನಸ್ಥರಾಗಿ ಕುಳಿತುಕೊಳ್ಳುವ ಮುನಿಗಳು ಆಗಾಗ ಕೆಲವರ ಮೇಲೆ ಮುನಿದು ಹೆಚ್ಚಾನುಹೆಚ್ಚು ಕಲ್ಲಾಗುವಂತೆ ಶಪಿಸುವುದಿದೆ.

ಮಹಿಳೆಯರಿಗೆ ಕಲ್ಲಿನ ಒಡನಾಟ ಹೆಚ್ಚು. ಹಿಂದೆಲ್ಲಾ ಕಲ್ಲಿನ ಒಲೆಗಳ ಮೇಲೆ ಅಡುಗೆಯೊಂದಿಗೆ ತಾವೂ ಬೇಯುತ್ತಿದ್ದುದಿತ್ತು. ವಿದ್ಯುಶಕ್ತಿಯನ್ನು ಬಳಸಿಕೊಂಡು ಕೆಲಸ ಮಾಡುವ ಉಪಕರಣಗಳು ಬರುವ ಮುಂಚೆ, 'ಸ್ತ್ರೀಶಕ್ತಿ'ಯಿಂದಲೇ ಚಾಲನೆ ಪಡೆಯುತ್ತಿದ್ದ ಬೀಸೇಕಲ್ಲು, ಒಳ್ಳುಕಲ್ಲು, ರುಬ್ಬುವಕಲ್ಲು, ಅರೆಯುವಕಲ್ಲು, ಕುಟ್ಟೋಕಲ್ಲುಗಳು ಆಸರೆಯಾಗಿದ್ದವು. ಧಾನ್ಯಗಳಲ್ಲಿರುವ ಕಲ್ಲನ್ನು ತುಂಬ ಧ್ಯಾನಸ್ಥ ಸ್ಥಿತಿಯಲ್ಲಿ ಬೇರ್ಪಡಿಸುವ ಕಲೆ ಅವರಿಗೆ ಕರಗತವಾಗಿತ್ತು.

ಮನುಷ್ಯ ಏನೇನೋ 'ಬಚಾವ್' ಆಂದೋಲನ ಮಾಡುತ್ತಾನೆ. ಹಾಗೆ ನೋಡಿದರೆ 'ಕಲ್ಬಚಾವ್' ಆಂದೋಲನ ಮೊದಲು ಪ್ರಾರಂಭಿಸಬೇಕಿತ್ತು. ಎಷ್ಟೋ ಬೆಟ್ಟದ ಕಲ್ಲುಗಳೆಲ್ಲ ಕಲ್ಪ್ರಿಟ್ ವ್ಯಾಪಾರಸ್ಥರ ದೃಷ್ಟಿಗೆ ಸಿಲುಕಿ, ಡೈನಮೈಟೋ, ಮತ್ತೊಂದರ ದಾಳಿಗೋ ಪುಡಿ ಪುಡಿಯಾಗಿ, ಥೇಟ್ ಇಲಿ ಕಡಿದು ಹಾಕಿದ ಬೋಂಡದಂತೆ ಬೆಟ್ಟಗಳನ್ನು ವಿರೂಪಗೊಳಿಸುತ್ತಿವೆ. ಅದರ ಬುಡಕ್ಕೆ ನಿಂತಿರುವ ಜಲ್ಲಿಕ್ರಶರ್‌ಗಳು ಆ ಪುಡಿಯನ್ನು ಹಸು ಮೆಲುಕು ಹಾಕುವಂತೆ ಹಾಕುತ್ತ ನಿಂತಿರುತ್ತವೆ. ಕಲ್ಲಿನಕೋಟೆಯನ್ನು ಬೇಧಿಸುವುದಕ್ಕೆ ಹೊಂಚುಹಾಕುವವರನ್ನು ಹೇಗಾದರೂ ಹಣಿಯಬಹುದೇನೋ, ಆದರೆ ಕಲ್ಲಿನ ಕೋಟೆಯನ್ನೇ ಛೇಧಿಸುವವರನ್ನು ಮಟ್ಟ ಹಾಕುವುದು ಸುಲಭವಲ್ಲ. ಮದಕರಿನಾಯಕನ ಕಾಲದಲ್ಲಿ ದುರ್ಗದ ಕೋಟೆಯನ್ನು ದುರ್ಗಿಯ ಅವತಾರ ತಾಳಿ ಶತ್ರುಗಳಿಂದ ರಕ್ಷಿಸಿದ ಹಾಗೆ, ಇಂತಹ ಕಲ್ಪುರುಷರನ್ನೆಲ್ಲ ಮಟ್ಟಹಾಕಲು ಒನಕೆ ಓಬವ್ವ ಇರಬೇಕಿತ್ತು ಎನಿಸದಿರಲಾರದು.

'ಕಲ್ಲನ್ನು ಪುಡಿ ಮಾಡಿದಾಗ ಮಣ್ಣಾಗುತ್ತದೆ, ಮನಸ್ಸನ್ನು ಪುಡಿ ಮಾಡಿದಾಗ ಕಲ್ಲಾಗುತ್ತದೆ' ಎನ್ನುವ ಅರ್ಥಪೂರ್ಣ ಸಾಲನ್ನು ಯಾವುದೋ ಲೇಖನದಲ್ಲಿ ಓದಿದ ನೆನಪು. ಇದು ಭಾವನಾತ್ಮಕವಾಗಿ ನಿಜವಾದರೂ, 'ಇರ್ರಿವರ್ಸಿಬಲ್ ರಿಯಾಕ್ಷನ್'ನಂತೆ ಒಮ್ಮೆ ಪುಡಿಯಾಗುವ ಕಲ್ಲು ಮತ್ತೆ ಮೂಲರೂಪ ಅಥವಾ ಘನರೂಪಕ್ಕೆ ಬರುವುದು ಅಸಂಭವ ಎನ್ನಬಹುದು. ಮುಂದಿನ ಪೀಳಿಗೆಯನ್ನು 'ಕಲ್ಲು ಕಿಸ್ನೇ ದೇಖಾ'(ಕಲ್ಲನ್ನು ನೋಡಿದವರಾರು?) ಎಂದು ಪ್ರಶ್ನಿಸುವ ಸ್ಥಿತಿ ಬಾರದಿರಲಿ, 'ಕಲ್ಲು ಹೋ ನ ಹೋ'(ಕಲ್ಲುಗಳು ಇರಬಹುದು ಅಥವಾ ಇಲ್ಲದಿರಲೂಬಹುದು) ಎನ್ನುವ ಕಾಲಕ್ಕೆ ಮುಖಾಮುಖಿಯಾಗದಂತೆ, ಕಲ್ಲುಗಳ ಕಲ್ಯಾಣಕ್ಕೆ ಕೈಜೋಡಿಸೋಣ.

■

# ರವಷ್ಟು ಜಗಳ–ಕುಪ್ಪಿಲೇಹ ಸೌಖ್ಯ

ರಘುರಾಂ. ಎಸ್.ವಿ.

ಅಂದು ಬೆಳಿಗ್ಗೆ ಶಾಲೆಯ ಮಕ್ಕಳು ಗಣರಾಜ್ಯೋತ್ಸವದ ಪ್ರಯುಕ್ತ ಊರಿನ ಮುಖ್ಯ ಬೀದಿಗಳಲ್ಲಿ "ಪ್ರಭಾತಫೇರಿ" ಹೊರಟಿದ್ದರು. "ಸಾರೇ ಜಹಾನ್ ಸೇ ಅಛ್ಛಾ... ಹಾಡಿಗೆ ಹೆಜ್ಜೆ ಹಾಕುತ್ತಾ ಹೋಗುತ್ತಿದ್ದರು. ಅದರ ಮಧ್ಯದಲ್ಲಿ ಅಡಿಗೆಮನೆಯಿಂದ ಬೇರೆ ನಾದವೇ ಹರಿದು ಬಂದಿತು.

"ರೀ, ಪತ್ರಿಕೆ ಓದಿದ್ದು ಸಾಕು. ಸ್ವಲ್ಪ ಎದ್ದು ಈ ಗೋಧಿಯನ್ನು "ವಲ್ಲ" ಮಾಡಿ ಡಬ್ಬಿಗೆ ಹಾಕಿ!"

ಹೆಂಡತಿ ಹೇಳಿದ ಮೇಲೆ ಮಾಡದೇ ಇರಲು ಆಗುತ್ತದೆಯೇ? ಮೊರದಲ್ಲಿ ಗೋಧಿ ಹಾಕಿಕೊಂಡು ಕೇರಲು ಪ್ರಾರಂಭ ಮಾಡಿದೆ. 'ಈ ಕಾಲದಲ್ಲೂ ಮಾಲ್‌ಗೆ ಹೋಗಿ ಸ್ವಚ್ಛಗೊಳಿಸಿದ ಸಾಮಾನು ತರದೇ ಇರುವವಳು ಇವಳು ಒಬ್ಬಳೇ ಇರಬೇಕು' ಎಂದು ಮನದಲ್ಲೇ ಅಂದುಕೊಂಡು, ಒಪ್ಪ ಮಾಡಿದ ಗೋಧಿಯನ್ನು ಡಬ್ಬಿಗೆ ಹಾಕಿದೆ. ನಿಜವಾಗಲೂ ನನಗೆ ಮರದಲ್ಲಿ ಗೋಧಿ ಹಾಕಿಕೊಂಡು ಒಪ್ಪ ಮಾಡಲು ಬರುತ್ತದೆಯೇ? ನಿಮ್ಮ "ನಸೆನಸೆ" ಅಂದರೆ ಅನುಮಾನ ನನಗೆ ಅರ್ಥವಾಗುತ್ತದೆ. ಆದರೂ ನಾನು ಹೇಳಿದ ಮೇಲೆ ನಂಬಬಹುದು!

"ಏನ್ರೀ ತಿಂಡಿ ತಿಂದ ಮೇಲೆ ಲೇಹ ತಿನ್ನೋದೇ ಮರೆತರಲ್ಲ,...." ಎನ್ನುತ್ತಾ "ಕುಪ್ಪಿ" ತೆಗೆದು ಅದರಲ್ಲಿದ್ದ "ಅಮೃತ ಕಲಶ" ಲೇಹವನ್ನು ಕೊಟ್ಟಳು. ಎಲ್ಲರ ಮನೆಯಲ್ಲಿ ಉಪ್ಪು ಅಥವಾ ಉಪ್ಪಿನಕಾಯಿ ತುಂಬಿಕೊಂಡಿರುವ ಈ "ಪಿಂಗಾಣಿ ಜಾರ್" ನಮ್ಮ ಮನೆಯಲ್ಲಿ ಮಾತ್ರ "ಕುಪ್ಪಿ" ಯಾಗಿ ಉಳಿದಿದೆ.

ನಿಧಾನವಾಗಿ ಎದ್ದು, ಅವಳು ಕೊಟ್ಟಿದ್ದನ್ನು ಸೇವಿಸಿ, "ನೋಡು ಅರವತ್ತಾದರೆ ಮಕ್ಕಳಂತೆ ಎನ್ನುತ್ತಾರೆ. ಮಕ್ಕಳಾದರೆ ಮಾತ್ರೆ ಕೊಡುತ್ತೇನೆ ಎಂದರೆ ಇಲ್ಲಿಂದ ಫೇರಿಕೀಳುತ್ತಿದ್ದರು. ನಾನು ಸುಮ್ಮನೆ ತೆಗೆದುಕೊಳ್ಳುತ್ತೇನೆ" ಎಂದಾಗ, "ನೀವು ಓಡಿಹೋಗುತ್ತೀನಿ ಎಂದು "ಬೆಗಡು" ಪಡಿಸಲು ಆಗಲ್ಲ, ಬಿಡಿ. ನನಗೆ ಗೊತ್ತು, ನಿಮ್ಮ ಮಂಡಿ ನೋವಿನ ಸ್ಥಿತಿ" ಎನ್ನತ್ತಾ ಕುತ್ತಿಗೆಯ ಸುತ್ತ ಕೈಹಾಕಿ ಸಮಾಧಾನ ಮಾಡಲು ಯತ್ನಿಸಿದಳು. ಹೌದು, ನಾನು ಆಕೆಗೆ ಈ ವಿಷಯದಲ್ಲಿ ಹೆದರಿಸಲೂ ಆಗಲ್ಲ ಅಥವಾ ಆಶ್ಚರ್ಯಪಡಿಸಲೂ ಆಗಲ್ಲ. ಆಕೆ ಅದಕ್ಕೆ "ಬೆಗಡು" ಎಂದಿರುವುದು, ನಾನು ಏನಾದ್ರು ಅರ್ಥ ಮಾಡಿಕೊಳ್ಳಲಿ ಎಂದು. 'ನಿನಗೆ ಹೆದರಿಸಲು ನನಗೆಲ್ಲಿ ಧೈರ್ಯವಿದೆ' ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ಹೆದರಿಸಿದರೆ ಮನೆಯಲ್ಲಿ "ರಣರಂಪ" ಮಾಡುತ್ತಾಳೆ ಎಂದು ನನಗೆ ಗೊತ್ತಿಲ್ಲವೇ?

ಆಗಲೇ ಹೊರಗಡೆ ಬಾಗಿಲ ಬಳಿ ಕರೆಗಂಟೆ "ರಿಂಗಣಿ"ಸಿತು. ಅಂಚೆಯವನು ತಂದ ಶ್ರೀಯುತ ಜಿ.ವಿ.ಅರುಣರವರ ಹೊಸ ಪುಸ್ತಕ "ನಕ್ಸಲನ ಮನೆಯ ಹೊಸ್ತಿಲು" "ಈಸ್ಕೊಂಡು" ಅಲ್ಲೇ ಮೇಜಿನ ಮೇಲಿಟ್ಟೆ. ಅಷ್ಟರೊಳಗೆ ಮತ್ತೊಮ್ಮೆ ಒಳಗಿಂದ ನಾದ ಹೊಮ್ಮಿತು. "ಓ, ಇನ್ನೊಂದು ಪುಸ್ತಕ ಸಿಕ್ಕಿತಾ? ಆಗಾಗ ನನಗೆ "ರವಷ್ಟಾ"ದರೂ ಸಹಾಯ ಮಾಡುತ್ತಿದ್ದಿರಿ. ಇನ್ನೊಂದು ವಾರ ಎಲ್ಲಾ ಕೆಲಸಕ್ಕೂ "ಸೂಟಿ". ನನಗೆ ಗೊತ್ತು ಆಕೆ "ಸೂಟಿ" ಎಂದಿರುವುದು "ಚೂಟಿ" ಯಾಗಿ ಕೆಲಸ ಮಾಡುವೆನೆಂದು ಅಲ್ಲ! ಬದಲಾಗಿ

ಕೆಲಸಕ್ಕೆ "ಛುಟ್ಟಿ" ಕೊಡುತ್ತೇನೆ ಎಂದು! ಈ ಪುಸ್ತಕದ ವಿಷಯ ಆಕೆ ಏನೇ ಅಂದರೂ ಪರವಾಗಿಲ್ಲ, ಏಕೆಂದರೆ ಮೊದಲು ಅವಳೇ ಓದುವುದು, ನಂತರ ನಾನು.

"ಮೊನ್ನೆ ಪಕ್ಕದ ಮನೆಗೆ ಶುಕ್ರವಾರ ಕುಂಕುಮ ಇಟ್ಟು ಕೊಳ್ಳಲು ಕರೆದಿದ್ದರು ಕಣ್ರಿ, ಆಗ ನೀವು ಫೇಸ್ಬುಕಿನಲ್ಲಿ ಹಾಕಿದ ಪುಸ್ತಕದ ವಿಮರ್ಶೆ ಚೆನ್ನಾಗಿದೆ ಎಂದರು ಚಂದ್ರಕಲಾ. ನೀವು ಮಾಡುತ್ತಿರುವುದು ಅಡ್ಡಕಸುಬು ಆದರೂ ಪರವಾಗಿಲ್ಲ, ನೀವೂ ಒಬ್ಬರು "ಕರ್ತಬಗಾರಿ"ನೇ ಸರಿ" ಎಂದಳು. ನನಗೆ ಆಕೆ ಹೊಗಳಿದಳೋ ಅಥವಾ ಬೈದಳೋ ಗೊತ್ತಾಗಲಿಲ್ಲ. ನನ್ನ ಮುಖ ನೋಡಿ ಅದನ್ನು ತಿಳಿದುಕೊಂಡು ಆಕೆ "ನೀವು ಚತುರ ಎಂದು ಹೊಗಳಿದ್ದು" ಎನ್ನುತ್ತಾ ಮತ್ತೆ ನಕ್ಕಳು.

"ನನ್ನ ಬರಹಕ್ಕೆ ಎಲ್ಲಾ ನೀನೆ ಸ್ಫೂರ್ತಿಯಲ್ಲವೇ..." ಎಂದು ಹೇಳಲು ಪ್ರಾರಂಭ ಮಾಡಿದೆ. "ಮೊನ್ನೆ ಮಗಳು ಮುಂದೆ ನೀನೇ ಸ್ಫೂರ್ತಿ ಎಂದಿರಿ. ಅದಾದರೂ ಪರವಾಗಿಲ್ಲ, ಹೋದವಾರ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಹೋದಾಗ ಮಾತನಾಡಿಸಿದವರಿಗೆಲ್ಲಾ ನೀವೆ ಸ್ಫೂರ್ತಿ ಎಂದಿರಿ. ನಿಮ್ಮ ತರಹ  ನಖಶಿಖಾಂತ ಸುಳ್ಳು ಹೇಳುವವರನ್ನು ನಾನಂತೂ ಕಂಡಿಲ್ಲ" ಎಂದಳು.




ಮಧ್ಯಾಹ್ನ ಊಟ–ವಾದ ಮೇಲೆ "ಸಂಚಿ" ಯಿಂದ ಏಲಕ್ಕಿ, ಲವಂಗ ಹೊರ ತೆಗೆದು ಕೊಟ್ಟಳು. ಅರವತ್ತಾದ ಮೇಲೆ, ಏಲಕ್ಕಿ ಲವಂಗ ತಿನ್ನುವಷ್ಟು ಹಲ್ಲುಗಳು ಇದ್ದರೆ ಅದೇ ದೊಡ್ಡ ವಿಷಯ. ಹಾಗಾಗಿ ಬೇಜಾರೇನು ಇಲ್ಲ ಬಿಡಿ. ಎಲೆಯಡಿಕೆ ಅಗಿದು, ರಸ ಹೀರಿ, ಉಳಿದ ಚಟರವನ್ನು ಉಗಳಲು "ಪಡಗ"ವನ್ನು ದಾಸಿಯರು ಹಿಡಿದುಕೊಂಡಿರುವುದಕ್ಕೆ ನಾನು ಯಾವ ಊರ ರಾಜನೂ ಅಲ್ಲವಲ್ಲ. ಆದರೂ ನನ್ನಾಕೆ ಮದುವೆಯ ವಾರ್ಷಿಕೋತ್ಸವದ ದಿವಸ, "ತಮಗೇನು ಇಷ್ಟ ಹೇಳುವಂತರಾಗಿರಿ  "ಖಾವಂದರರೆ" ಎಂದು ಆಕೆ ಹಳೆಯ ಸಿನಿಮಾದಲ್ಲಿ ಹೇಳುವಂತೆ ಹೇಳುವುದಿದೆ.

ಗಡದ್ದಾಗಿ ಊಟ ಆದಮೇಲೆ ಏನೇ ಕೆಲಸ ಮಾಡಲು "ಜಪ್ಪೆ" ಯೇ ಸರಿ. "ನೀವು ಬಿಡಿ ನಿವೃತ್ತಿಯಾದ ಮೇಲೆ ಸೋಮಾರಿತನವನ್ನೆ ಮೈ ಮೇಲೆ ಆಹ್ವಾನಿಸಿಕೊಂಡು ಪ್ರತಿಷ್ಠಾಪನೆ ಮಾಡಿಕೊಂಡಿದ್ದೀರಿ" ಎನ್ನುವ ಆಕೆಯ ಮಾತಿಗೆ ನನ್ನ ಸಹಮತವಿದೆ.

ಸಣ್ಣ ನಿದ್ದೆ ಮಾಡಿ ಎದ್ದು ಉದ್ಯಾನವನದಲ್ಲಿ ಸುತ್ತಾಡಲು "ಚಲ್ಲಣ" ಧರಿಸಿ ಹೊರಟರೆ, ಆಕೆಗೆ ಇಷ್ಟವಾಗಲ್ಲ. "ಅಲ್ಲಾ ರೀ, ಇದೇನು ಅಸಹ್ಯ ಅರ್ಧ ಪ್ಯಾಂಟ್ ಹಾಕಿಕೊಂಡು ಹೋಗುತ್ತೀರಿ" ಎನ್ನುವ ಮಾತು ದಿನಾ ಬರುತ್ತದೆ. ಆದರೆ ನಾನು

ಸರಿಯಾದ ಪ್ಯಾಂಟ್ ಹಾಕಿಕೊಳ್ಳಲು "ಬಡಪೆಟ್ಟಿಗೆ"  ಒಪ್ಪುವುದಿಲ್ಲ ಎಂದು ಆಕೆಗೆ ಗೊತ್ತು. ಆಗ ಆಕೆ "ಈ ಪ್ಯಾಂಟ್ ಹಾಕಿಕೊಂಡರೆ 'ಹ್ಯಾಂಡ್ ಸಮ್' ಆಗಿ ಕಾಣುತ್ತೀರಾ, ಜೊತೆಗೆ "ಶಾರೆಗಣ್ಣಿನ" ಹುಡುಗಿರ ಕಣ್ಣಿಗೆ ಬಿದ್ದರೂ ಬೀಳಬಹುದು" ಎನ್ನುವ  "ಗಿಲೀಟ"ನ ಮಾತನಾಡುತ್ತಾಳೆ. ಈ ಮಾತಿಗೆ ಒಪ್ಪದೇ ಇರಲು ಸಾಧ್ಯವೇ? ನೀವೇ ಹೇಳಿ? ಎಷ್ಟೆಂದರೂ ನಮ್ಮ ಮನೆಯ "ಹಿರೆಮಾಣಿ"ಯೇ ಅವಳು. ಆದರೂ ಅವಳೇನು ಹೇಳಿದ ಮಾತು ಕೇಳದಿದ್ದರೆ "ಬಸ್ಕಿ" ಹೊಡಿಸುವುದಿಲ್ಲ ಎಂಬ ನಂಬಿಕೆ ನನಗೆ ಇದೆ. ಅಂತೂ ಆಕೆ ಕೊಟ್ಟ ಫುಲ್ ಪ್ಯಾಂಟ್ ಧರಿಸಿ, ಮೊದಲಿನ ತರಹ  ಎಕ್ಕಡ ಮೆಟ್ಟಿಕೊಂಡು ನಡೆಯದೆ, ಚಪ್ಪಲಿ ಧರಸಿ ನಡೆಯುತ್ತೇನೆ!

ರಾತ್ರಿ ಊಟದ ಹೊತ್ತಿಗೆ, ನಾಳೆ ಹೋಳಿಗೆ ಮಾಡಲು ತಂದ ಬಾಳೆಎಲೆಯಲ್ಲಿ ಒಂದು "ಅಗ್ರ" ನನಗೆ ಹಾಕಿ, ಆಕೆ ತನಗೊಂದು "ದಿಂಡಿ" ಹಾಕಿಕೊಳ್ಳುತ್ತಾಳೆ. ಈಗ ಅವರೇಕಾಳು "ಆವಕ" ಜಾಸ್ತಿ ಆಗಿದೆಯಂತೆ, ನೋಡಿ ನೂರು ರೂಪಾಯಿಗೆ ಎರಡು ಕೆ.ಜಿ.ಯಂತೆ" ಎನ್ನುತ್ತಾ ಹಿದುಕುಬೇಳೆ ಹಾಕಿ ಮಾಡಿದ ಆಂಬೊಡೆ ಹಾಕಿದಾಗ, ಇನ್ನೇನು ಮಾತನಾಡದೆ, ಮೆಚ್ಚುಗೆಯಿಂದ ತಿನ್ನಲು ಪ್ರಾರಂಭಮಾಡುತ್ತೇನೆ.

ಇನ್ನೇನು ಮಲಗಲು ಸಿದ್ಧತೆ ಮಾಡಿಕೊಳ್ಳಬೇಕು ಎನ್ನುವಾಗ ಇನ್ನೊಂದು ಗುಳಿಗೆ ತರುತ್ತಾಳೆ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಬೇಡದ್ದೆಲ್ಲಾ ತಿಂದಿರುವುದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಇದು ಬಂದಿರುವುದು ಎಂದು ನಾನು ನಿಮಗೆ ಹೇಳ ಬೇಕಾಗಿಲ್ಲ ಅಲ್ಲವೇ? ಏಕೆಂದರೆ ತಮಗೂ ಗೊತ್ತು ಈಸ ಬೇಕು, ಇದ್ದು ಜೈಸ ಬೇಕು ಎಂದು.

■



**ಅಪರಂಜಿ ಮುಂಗಾರು ವಿಶೇಷಾಂಕ**

ಅಪರಂಜಿ ಜುಲೈ 2026ರ ಸಂಚಿಕೆಯನ್ನು ಮುಂಗಾರು ವಿಶೇಷಾಂಕವನ್ನಾಗಿ ಹೊರತರಲು ಸಂಕಲ್ಪಿಸಿದ್ದೇವೆ. ಮುಂಗಾರು ಮಳೆಯ ಮುತ್ತಿನ ಹನಿಗಳಂತೆ ನಿಮ್ಮ ಲೇಖನ ನಮಗೆ ಬರಲಿ. ಪುಟ ಮಿತಿ ಅಪರಂಜಿಯ ಎರಡು ಪುಟಗಳು. ಕಡೇ ದಿನಾಂಕ 10.6.2026

ದಂನಆ

- ✓ ಸಗಣಿಗಿಂತ ಜೇನುತುಪ್ಪ ಒಳ್ಳೆಯದು ಎಂದು ನೊಣಕ್ಕೆ ಸಾಬೀತು ಮಾಡಲು ಜೇನು ತನ್ನ ಶಕ್ತಿಯನ್ನು ವ್ಯಯಿಸುವುದಿಲ್ಲ.
- ✓ ನಿಮ್ಮ ಕೈಲಾಗಿದ್ದನ್ನು ಮಾಡಿದ ಮೇಲೆ ಚಿಂತಿಸುತ್ತಾ ಕೂಡುವುದರಿಂದ ಅದು ಇನ್ನಷ್ಟು ಒಳ್ಳೆಯದಾಗುವುದಿಲ್ಲ.
- ✓ ಸ್ಟೆ ಅವೆ ಫ್ರಂ ಪೀಪಲ್ ಹು ಇಗ್ನೋರ್ ಯು ಅಂಟಿಲ್ ದೆ ನೀಡ್ ಯು.
- ✓ ಒಳ್ಳೆಯ ನಾಳೆಗಾಗಿ ಹಂಬಲಿಸುತ್ತೇವೆ. ಆದರೆ ಆ ನಾಳೆ ಬಂದಾಗ ಅದನ್ನು ಅನುಭವಿಸುವುದನ್ನು ಬಿಟ್ಟು ಇನ್ನೊಂದು ನಾಳೆಯತ್ತ ಗಮನ ಹರಿಸುತ್ತೇವೆ. ಇಂದಿನ ದಿನ ಒಳ್ಳೆಯದಿರಲಿ.
- ✓ ಟೂ ಮಚ್ ಅಟೆನ್ಷನ್ ಮೇಕ್ಸ್ ಡಾಂಕಿ ಥಿಂಕ್ ಹಿ ಈಸ್ ಎ ಲಯನ್.
- ✓ ತಪ್ಪು ರೈಲು ಹತ್ತಿದ್ದರೆ ಆದಷ್ಟು ಸಮೀಪದ ನಿಲ್ದಾಣದಲ್ಲಿ ಇಳಿದು ಬಿಡಿ. ದೂರ ಸಾಗಿದಷ್ಟು ವಾಪಸಾಗಲು ಹೆಚ್ಚು ಖರ್ಚು ತಗಲುತ್ತದೆ.
- ✓ ಮೂರ್ಖನೊಂದಿಗೆ ವಾದ ಮಾಡತೊಡಗಿದರೆ ಇಬ್ಬರು ಮೂರ್ಖರಿ–ದ್ದಾರೆಂದರ್ಥ.
- ✓ ಪ್ರಾಕ್ಟೀಸ್ ಮೇಕ್ಸ್ ಪರ್ಫೆಕ್ಟ್. ಬಟ್ ನೊಬಡಿ ಈಸ್ ಪರ್ಫೆಕ್ಟ್. ಸೊ ವೈ ಪ್ರಾಕ್ಟೀಸ್?
- ✓ ಎಲ್ಲರೂ ನನ್ನನ್ನು ಮೆಚ್ಚಬೇಕು ಎಂದು ಬಯಸದಿರಿ. ಏಕೆಂದರೆ ನೀವು ಎಲ್ಲರನ್ನೂ ಮೆಚ್ಚುವಿರಾ?
- ✓ ಕೆಲವು ವಿಷಯಗಳನ್ನು ಹೆಚ್ಚು ತಿಳಿದುಕೊಂಡಷ್ಟೂ ತಿಳಿದುಕೊಂಡಿಲ್ಲದಿದ್ದರೆ ಚೆನ್ನಾಗಿತ್ತು ಎಂದು ಅನಿಸತೊಡಗುತ್ತದೆ.
- ✓ ನೆವರ್ ಬಿ ಎ ಪ್ರಿಸನರ್ ಆಫ್ ದಿ ಪಾಸ್ಟ್. ಇಟ್ ವಾಸ್ ಜಸ್ಟ್ ಎ ಲೆಸನ್. ನಾಟ್ ಎ ಲೈಫ್ ಸೆಂಟೆನ್ಸ್.
- ✓ ಸೋತರಾ? ಅಭಿನಂದನೆಗಳು. ಅನೇಕರು ಪ್ರಯತ್ನವನ್ನೂ ಮಾಡರು.
- ✓ ವಾಟ್ ಕಂಸ್ ಈಸಿ ವೋಂಟ್ ಲಾಸ್ಟ್. ವಾಟ್ ಲಾಸ್ಟ್ಸ್ ವೋಂಟ್ ಕಂ ಈಸಿ.
- ✓ ಜನಗಳಿಗೆ  ಜ್ಞಾನದ ಬಗ್ಗೆ ಅಹಂಕಾರವಿದೆ. ಆದರೆ ತಮ್ಮ ಅಹಂಕಾರದ ಬಗ್ಗೆ ಜ್ಞಾನವಿಲ್ಲ.
- ✓ ಯಾರೊಬ್ಬರಿಗಾಗಿಯೂ ಅಳಬೇಡಿ. ಅವರು ನಿಮ್ಮ ಕಣ್ಣೀರಿಗೆ ಯೋಗ್ಯರಲ್ಲ. ಯಾರು ನಿಮ್ಮ ಕಣ್ಣೀರಿಗೆ ಯೋಗ್ಯರೋ ಅವರು ನಿಮ್ಮನ್ನು ಅಳಲು ಬಿಡುವುದಿಲ್ಲ.
- ✓ ಇಟ್ಸ್ ಜಸ್ಟ್ ಎ ಮ್ಯಾಟರ್ ಆಫ್ ಪರ್ಸ್ಪೆಕ್ಟಿವ್. ಇಫ್ ಯು ಆಸ್ಕ್ ದಿ ಗ್ರಾಸ್ ದಿ ಡೀರ್ ಈಸ್ ದಿ ಮಾನ್ಸ್ಟರ್ ಅಂಡ್ ದಿ ಲಯನ್ ದಿ ಪ್ರೊಟೆಕ್ಟರ್.

■

# ಹುಳಿ ದ್ರಾಕ್ಷಿ ಕತೆ

( ರಾ.ಶಿ. ಹೇಳಿದ್ದು)


ಒಂದು ಕಾಡಲ್ಲಿ ಒಂದು ನರಿ.
ಅದಕ್ಕೆ ತುಂಬ ಬಾಯಾರಿಕೆ.
ದ್ರಾಕ್ಷಿ ತಿನ್ನೋಣ ಅಂತ ದ್ರಾಕ್ಷಿ
ತೋಟಕ್ಕೆ ನುಗ್ಗತ್ತೆ.




ನರಿ ಜೋರಾಗಿ ಮರ ಅಲ್ಲಾಡಿಸುತ್ತೆ



ದ್ರಾಕ್ಷಿ ಗೊಂಚಲುಗಳೆಲ್ಲಾ
ತೊಪ ತೊಪ ಉದುರುತ್ವೆ




ಬಾಯಿಗಿಟ್ಟರೆ, ದ್ರಾಕ್ಷಿ ಹುಳಿ.ಗಂಟಲು ನೋವು
ಬಂದೀತು ಅಂದುಕೊಂಡು ನರಿ ಹಾಗೇ
ಹೋಗ್ತಾ ಇದ್ದಾಗ ಈಸೋಪ ಸಿಕ್ಕಿದ್ನಂತೆ.



"ದ್ರಾಕ್ಷಿ ನಿಂಗೆ ಎಟುಕಲಿಲ್ಲ. ಅದಕ್ಕೇ ಹುಳಿ ಅಂತೀಯ " ಅಂತ ಈಸೋಪ ನಗಾಡಿದನಂತೆ.

ಈಸೋಪ ತೋಟಕ್ಕೆ ಹೋಗಿ ಹುಳಿ ದ್ರಾಕ್ಷಿನ ಮುಕ್ಕಿ ಬಿಟ್ಟನಂತೆ ರಾತ್ರಿ ಎಲ್ಲಾ ಗಂಟಲು ನೋವು!




**ನೀತಿ :" ನೀತಿ ಹೇಳುಕ್ಕೆ ಈಸೋಪನ್ನ ಕರಸೋದನ್ನ ನೋಡಿದ್ರೆ ನಗು ಬರತ್ತೆ" ಅಂತಂತೆ ನರಿ**

# ಇಲಿಗಳು ಸಾರ್ ಇಲಿಗಳು

**ಕೆ.ಎಸ್.ಸೋಮೇಶ್ವರ**

ಇದರ ಬಗ್ಗೆ ಹೇಳುವ ಮೊದಲಿಗೆ ಅದೆರಡು ಕನ್ನಡ ಸಿನಿಮಾಗಳ ಹೆಸರು ಕೋತಿಗಳು ಸಾರ್ ಕೋತಿಗಳು ಮತ್ತು ಕತ್ತೆಗಳು ಸಾರ್ ಕತ್ತೆಗಳು. ಇವೆರಡರಲ್ಲೂ ಆ ಪ್ರಾಣಿಗಳು ಈ ರೀತಿ ಹುಚ್ಚಾಟ ಆಡುತ್ತವೆ ಎಂದು ನಮ್ಮ ಚೇಷ್ಟೆಗಳನ್ನು ಅವುಗಳ ಮೇಲೆ ದಬ್ಬಾಕಿ ತೆಗೆದವು.. ಅದಕ್ಕೆ ಮುಂಚೆಯೆಲ್ಲಾ ಸಿನಿಮಾಗಳಲ್ಲಿ ರಿಯಲ್ ಆಗಿ ಪ್ರಾಣಿಗಳೇ ಇರುತ್ತಿದ್ದವು. ಕಾಡಿನ ರಹಸ್ಯ ಎಂದರೆ ಪ್ರಾಣಿಗಳು ಇರಲೇ ಬೇಕಲ್ಲವೇ. ಆನೆ, ಹುಲಿ, ಸಿಂಹ, ಜಿಂಕೆ ಇವುಗಳ ಆಟೋಟಗಳೇ. ಇನ್ನೂ ಅನೇಕವಲ್ಲಿ ಆನೆಗಳು ಕುದುರೆಗಳು ಆಪ್ತರಕ್ಷಕಂತೆ ನಟನೆ ಮಾಡಿವೆ. ರಾಜ ಮಹಾರಾಜರುಗಳ ಕಾಲದಲ್ಲಿ ಅದು ನೈಜ ಘಟನೆಗಳೂ ಆಗಿವೆ. ಮಹಾಭಾರತದಲ್ಲಿ ದ್ರೋಣರ ಶಸ್ತ್ರ ತ್ಯಾಗಕ್ಕೆ ಬಲಿಯಾದದ್ದು ಅಶ್ವಥಾಮೋ ಹತ ಕುಂಜರಃ ಅಲ್ಲವೇ. ಹಿಂದಿಯಲ್ಲಿ ಚಲ್ ಚಲ್ ಮೇರೆ ಸಾಥಿ ಮೇರೆ ಹಾಥಿ ಅಂತ ಹಾಥಿ ಮೇರೆ ಸಾಥಿ ಬರಲಿಲ್ಲವೇ. ಇನ್ನು ಸರ್ಕಸ್ ಗಳಲ್ಲಿ ಇವುಗಳದೇ ಆದ ಶೈಲಿಯ ಕುಣಿತ, ನೆಗೆತ ನೋಡುಗರಿಗೆ ಕಣ್ಸೆಳೆಯುತ್ತಿತ್ತು. ಈಗ್ಗೆ ಕೆಲವು ವರುಷಗಳಿಂದ ಈ ಪ್ರಾಣಿಗಳ ಪ್ರದರ್ಶನಕ್ಕೆ ತಡೆ ಬಂದಿದೆ. ಕೃಪೆ :ಪ್ರಾಣಿ ದಯಾ ಸಂಘ. ಈಗಲೂ ಅವುಗಳು ಚಿತ್ರಗಳಲ್ಲಿ ಕಾಣಿಸುತ್ತವೆ. ಅವೆಲ್ಲ ಡೂಪ್ಲಿಕೇಟ್.

ಈಗಂತೂ ಶ್ವಾನಗಳಿಗೆ ಎಲ್ಲಿಲ್ಲದ ಮುಚ್ಚಟೆ. ಅನೇಕ ಮನೆಗಳಲ್ಲಿ ಅದೊಬ್ಬ ಶಾಶ್ವತ ಸಂಗಾತಿಯಂತಾದರೆ ಬೀದಿ ಬದಿಯವಕ್ಕೆ ವಿಶೇಷ ಸ್ಥಾನಮಾನ ದೊರಕಿಸುವ ಪ್ರಯತ್ನ ಸರಕಾರಗಳು ಮತ್ತು ನ್ಯಾಯಾಲಯಗಳಿಂದ ದೊರೆಯುತ್ತಿದೆ.. ಅದೊಂದು ಕಾಲದಿಂದಲೂ ಈ ರಸ್ತೆ ಶುನಕಗಳು ಒಂದೊಂದು ಏರಿಯಾದಲ್ಲಿ ತಮ್ಮದೇ ಆದ ಸಂಘಗಳ ಕಟ್ಟಿಕೊಂಡು ಬಾರ್ಡರ್ ಡಿಸ್ ಪ್ಯೂಟ್ ಬರದಂತೆ ನೋಡಿಕೊಳ್ಳುತ್ತಿವೆ. ಇನ್ನು ಮರಿ ಹುಲಿಯಂತಿರುವ ಬೆಕ್ಕುಗಳಿಗೆ ಮೈಸೂರಿನಲ್ಲಿ ಅವುಗಳದೇ ಒಂದು ಸಾಮ್ರಾಜ್ಯ ಕಟ್ಟಿದ್ದಾರೆ.

ಇವೆಲ್ಲ ಏನೇ ಇರಲಿ, ಅವುಗಳು ನಮ್ಮಗಳ ಜೊತೆಯೇ ಇರಬೇಕಾದ ಸಂಘ ಜೀವಿಗಳು. ಕಾಡು ಪ್ರಾಣಿಗಳು ನಾಡಿಗೆ ನುಗ್ಗುತ್ತವೆ ಅಂತ ದೊಡ್ಡ ಸುದ್ದಿಯಾದರೆ ಅದ ಮಾಡಿರುವುದು ನಾಡಿನವರೇ ಎಂಬುದು ಯಾರಿಗೂ ಹೊಳೆಯುವುದಿಲ್ಲ. ಇನ್ನು ಈ ನಾಯಿ, ಕೋತಿಗಳ ಪ್ರಚಂಡತೆ ಬರಿಯ ಭೂಮಿಗೆ ಮಾತ್ರ ಮೀಸಲಾಗಿಲ್ಲ. ಬಾಹ್ಯಾಕಾಶ ದಲ್ಲಿ ಅವುಗಳು ಪ್ರಯಾಣಿಸಿ ಇಂದ್ರಾಲೋಕ ಅಲ್ಲೇ ಕಂಡ್ರಿ, ಚಂದ್ರಾಲೋಕ ಕಂಡೆ ಕಂಡ್ರಿ ಅಂತ ಹಾಡುತ್ತ ಕುಣಿಯುತ್ತ ರಾಕೆಟ್ ವೇಗದಲ್ಲಿ ಅವುಗಳು ಭೂಸ್ಪರ್ಶ ವಾದ ಮೇಲೆ ಈ ಹುಲು ಮಾನವ ಆ ಗ್ರಹಗಳೆಡೆ ಕಾಲಿಟ್ಟವನು. ಮೊದಲೇ ಹೋಗಿದ್ದರೆ ಅವರುಗಳ ಗ್ರಹಚಾರವೇ ನೆಟ್ಟಗಿರುತ್ತಿರಲಿಲ್ಲವೇನೋ. ಅದಕ್ಕೊಬ್ಬ ಟಿವಿ ಮತ್ತು ರೇಡಿಯೋ ಭವಿಷ್ಯವಾದಿಯನ್ನು ಕೇಳಬೇಕಾಗುತ್ತಿತ್ತು. ಇವೆಲ್ಲಕ್ಕೂ ಮುಂಚೆಯೇ ನಮ್ಮ ಪುರಾಣ ಕಥನದಲ್ಲಿ ರೆಕಾರ್ಡ್ ಅಗಿರುವ ಸಮುದ್ರ ಲಂಘನ ಮೊದಲಿಗೇ ಮಾಡಿದವನು ಆ ಕಪಿರಾಯ ಅಂದರೆ ಅಂಜನಾ ಸುತನೇ ತಾನೇ.

ಇನ್ನು ಈ ಬರಹದ ಮುಖ್ಯ ವಿಷಯ ಇಲಿಗಳ ಕುರಿತದ್ದು ಅದರ ಬಳಿ ಹೋಗೋಣ. ಬಂದೊಡನೆ ಹಾಯ್ ಎಂದು ಅವು ಹೇಳಲ್ಲ. ಛಂಗ್ ಅಂತ ಹಾರಿ ಹೋಗ್ತವೆ.. ಅವುಗಳಿಗೆ ಪುರಾಣ ಕಾಲದಿಂದಲೂ ಬಹಳ ಮಾನ್ಯತೆ ಇದೆ. ನಮ್ಮ

ಲಾರ್ಡ್ ಗಣೇಶ ಅಂದರೆ ಬಲಮುರಿ ಗಣಪ, ಸಿದ್ಧಿ ವಿನಾಯಕ ಹೀಗೆ ನಾನಾ ರೀತಿಯ ನಾಮಧೇಯ. ಅವನಿಗೆ ಇವನೇ ಮಿಗ್ 20 ವಿಮಾನ ವಿದ್ದಂತೆ. ಇನ್ನೂ ಲಕ್ಷುರಿ ಅಂತಾದರೆ ಬೋಯಿಂಗ್ 727. ಇವನ ಸವಾರಿ ನೋಡಿ ಆ ಚಂದ್ರ ತಣ್ಣಗಿರಲಾರದೇ ನಕ್ಕೇ ಪೆಚ್ಚಾದ ಕಥೆ ಜನ ಜನಿತ.

ಇನ್ನು ಇಲಿ–ಬೆಕ್ಕಿನ ಸಲ್ಲಾಪವಂತೂ ಹೇಳ ತೀರದು. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ ಅಂತೊಂದು ಆಡು ಮಾತಿದೆ. ಆದರೆ, ಅದು ಈಗ ಉಲ್ಟಾ ಅಗಿದೆ




ಎನ್ನಬಹುದಾಗಿದೆ. ಏಕೆಂದರೆ, ಇಲಿಗಳ ಚೆಲ್ಲಾಟ, ನೆಗೆದಾಟ ಬೆಕ್ಕನ್ನೇ ಮಂಕು ಮಾಡಿದಂತಿದೆ. ಈಗೆಲ್ಲಾ ಕಿಂದರಿ ಜೋಗಿಯ ಪೈಪ್ ಡ್ರೀಮ್ ಕೆಲಸ ಮಾಡಲ್ಲ. ನಮ್ಮಗಳ ಮನೆಗಳಲ್ಲಿ ಇವುಗಳ ತಡೆಯಲು ಹತ್ತು ಹಲವು ಉಪಾಯಗಳ ಮಾಡಿರುತ್ತೇವೆ. ಮೊದಲಿಗೆ ಇಲಿ ಬೋನುಗಳು. ಅದೂ ವಿವಿಧ ರೀತಿಯಲ್ಲಿ ಮಾರುಕಟ್ಟೆಯಲ್ಲಿ. ಅದು ಹೇಗೇ ಇರಲಿ ಇವುಗಳು ಅದರೊಳಗಿರುವ ಪಕೋಡ, ಬೋಂಡಾ ಅಸೆಗೆ ಸಿಕ್ಕಿ ಬೀಳುವುದಿಲ್ಲ. ಅದನ್ನೇ ಎಗರಿಸಿ ಹೊರ ಬಂದು ಸವಿದು ತಮ್ಮಗಳ ಬಿಲ ಸೇರಿಕೊಳ್ಳುತ್ತವೆ. ಈಗ ಬಳಕೆಯಲ್ಲಿರು ವ ಅಂಟಿನ ತಟ್ಟೆ. ಇದರಲ್ಲಿ ಪಾಪ ಸುಂಡಿಲಿಗಳು ಬೀಳಬಹುದೇನೋ ದೊಡ್ಡವಕ್ಕೇ ಅದು ಯಕಶ್ಚಿತ್ ಅಂಟು ಅಷ್ಟೇ. ಇವುಗಳ ಬಿಲದ ಆಳ ಅಗಲ ಯಾರಿಗೂ ತಿಳಿಯದು. ಈ ಮೂಷಿಕಗಳು ಹೀಗೆ ಥಂಗು ಥಂಗೆಂದು ಚೆಂಗಲಾಟ ಆಡುತ್ತಿದ್ದರೆ ಬೆಕ್ಕಿಗೆ ಕಣ್ಣು ಮುಚ್ಚಿ ಸವಿಯಲು ಹಾಲು ಬೆಲ್ಲವೇ ಸಿಗಲ್ಲ. ಅದೊಬ್ಬ ಹಿರಿಯರು ಹೇಳಿದಂತೆ ಬೆಕ್ಕು ತನ್ನದೇ ಆದ ಪ್ರೈಮ್ ಜಾತಿಯ ಹುಲಿಯಾಗ ಬೇಕೆಂಬ ಹಂಬಲವಂತೆ. ಅದಕ್ಕೆ ಮಿಯಾವ್ ಬಿಟ್ಟರೆ ಘರ್ಜಿಸಲು ಆಗಲ್ಲ. ಆ ಹಿರಿಯರ ಬುದ್ಧಿ ಮಾತೇನೆಂದರೆ ನೀನು ಮೊದಲಿಗೆ ಇಲಿ ಹಿಡಿದು ತಿನ್ನುವ ಅಭ್ಯಾಸ ಬಿಟ್ಟಲ್ಲಿ ಹುಲಿಯಾಗಬಹುದೇನೋ ಅಂತ. ಇದು ಸಾಧ್ಯವೇ !!

ಇನ್ನು ಈ ಇಲಿಗಳು ನಮ್ಮಲ್ಲಿ ಹೊಲ ಗದ್ದೆಗಳಲ್ಲಿ ಮೇಯ್ದು ಬೆಳೆಯ ಖಳೆಯೆಲ್ಲ ಮಂಕಾಗಿಸುವ ಸಮಾಚಾರ ತಿಳಿದೇ ಇದೆ. ಆದರೆ, ಈ ಒಂದು ಚಿಕ್ಕ ಪ್ರಾಣಿಯ ಹಿರಿದಾದ ಚಟುವಟಿಕೆ ಗೊತ್ತಿರಬೇಕಲ್ಲವೇ. ಮನುಷ್ಯನ ಮೇಲೆ ಪ್ರಯೋಗಿಸಬೇಕಾದ ಯಾವುದೇ ಹೊಸ ಔಷಧಿ ಇರಲಿ ಸಂಶೋಧನಾ ಕೇಂದ್ರದಲ್ಲಿ ಮೊದಲ ಬಲಿ ಪಶು

ಅಂದರೆ ಆ ಹೊಸ ಔಷಧಿಯ ಪ್ರಯೋಗ ಇಲಿಗಳ ಮೇಲೆ ಆಗುತ್ತದೆ. ಅದು ಅದನ್ನು ಸವಿದು ಅರಗಿಸಿಕೊಂಡು 'ಐ ಆಮ್ ಫಿಟ್ ಆಸ್ ಫಿಡಲ್' ಅಂತ  ಹಸಿರು ನಿಶಾನೆ ತೋರಿದರೆ ಮಾತ್ರ ಅದು ನಮಗೆ ದಕ್ಕುವುದು. ಇದಕ್ಕಿಂತ ಜೀವ ರಕ್ಷಕ ಪ್ರಾಣಿ ನಮಗೆ ಸಾಲದೇ

ಇದಕ್ಕೆ ಸರಿ ಸಮಾನವಾದುದು 2023 ರ ಕೊನೆಯಲ್ಲಿ ಉತ್ತರಖಂಡ ರಾಜ್ಯದಲ್ಲಿ ನಡೆದ ಘಟನೆ. ಅಲ್ಲಿ ಸುಮಾರು 41 ಕಾರ್ಮಿಕರು ಅಲ್ಲಿನ ಗಣಿಗಾರಿಕೆ ಕೆಲಸದಲ್ಲಿದ್ದಾಗ ಸುರಂಗದಲ್ಲಿ ಸಿಲುಕಿಕೊಂಡರು. ಅವರನ್ನು ಕ್ಷೇಮವಾಗಿ ಹೊರ ತರಲು ಮಾಡಿದ ಯಾವುದೇ ವೈಜ್ಞಾನಿಕ ಉಪಾಯಗಳೂ ಫಲಿಸಲಿಲ್ಲ, ಆಗ, ಇವರಿಗೆ ನೆನಪಾದದ್ದು ರ್‍ಯಾಟ್ ಹೋಲ್ ತಂತ್ರಜ್ಞಾನ. ಇದು ಇಲಿಗಳು ಕೊರೆಯುವ ಬಿಲದ  ರೀತಿ. ಅದೇ ತಂತ್ರ ಬಳಸಿ ಆ 41 ಕಾರ್ಮಿಕರೂ ಜೀವಂತ ಹೊರಬಂದು ಉಸಿರಾಡುವಂತೆ ಮಾಡಿದ್ದು ಇದು ಈ ಇಲಿಗಳ ನೈಸರ್ಗಿಕ ಬುದ್ಧಿಮತ್ತೆ. ಇದನ್ನು ನಾವು ಸಲೀಸಾಗಿ ಬಯೋ ಮಿಮಿಕ್ರಿ ಎನ್ನುತ್ತೇವೆ. ಇಷ್ಟೆಲ್ಲ ವಿಜಯ ಯಾತ್ರೆ  ಮಾಡಿರುವ ಇವು ಈಗ ಆ ವಕ್ರತುಂಡ ವಿನಾಯಕನಿಗೇ ಕೆಲವೊಮ್ಮೆ 'ಐ ಯಾಮ್ ಬ್ಯುಸಿ' ಅಂತ ವಾಟ್ಸಾಪ್ ಮಾಡುತ್ತವಂತೆ ಈ ರೀತಿಯ ಇಂತಹ ಸಕಲ ಕಲಾ ವಲ್ಲಭ  ಮೂಷಿಕ ಸಂತತಿಯನ್ನು ಅವುಗಳ ದೈವವೆನಿಸಿರುವ ಈಶ ಪುತ್ರ ವಿನಾಯಕನಷ್ಟೇ ಶ್ರದ್ಧೆಯಿಂದ ಆರಾಧಿಸ ಬೇಕಲ್ಲವೇ. ರಾಜಾಸ್ತಾನದ ಅದೊಂದೆಡೆ ಅದಕ್ಕೂ ವಿಶೇಷ ಪೂಜೆಗಳು  ನಡೆಯುತ್ತದಂತೆ. ■



# ನಿಂಗಿಯ ಮ್ಯಾನೇಜಮೆಂಟ್ ಗಿರಿ

ಸುಮಾ ರಮೇಶ್

ಸೋಫಾಗೆ ಒರಗಿ ಕುಳಿತು ಟಿವಿಯಲ್ಲಿ ಬಿತ್ತರಗೊಳ್ಳುತ್ತಿದ್ದ ಇರಾನ್ – ಅಮೆರಿಕ ಕಿತ್ತಾಟದ ಮುಖ್ಯಾಂಶವನ್ನು ಆತಂಕದಿಂದಲೇ ನೋಡುತ್ತಿದ್ದೆ. ಆಗಷ್ಟೇ ಒಳಬಂದ ನಿಂಗಿ 'ಅಕ್ಕಾ, ನಾನು ನಾಳೆಯಿಂದ ಕೆಲ್ಸಕ್ ಬರದು ಡೌಟು' ಎಂದು ಕಾಲಾಡಿಸುತ್ತಾ ನಿಂತಳು. ನಿಂಗಿ ಹಾಕಿದ ಅನಿರೀಕ್ಷಿತ ಬಾಂಬ್‌ಗೆ ಒಮ್ಮೆಲೇ ಬೆಚ್ಚಿಬಿದ್ದೆ. ಥಟ್ಟನೆ ಸಾವರಿಸಿಕೊಂಡು

'ಎಷ್ಟ್ ದಿನ ಬರಲ್ವೇ ನಿಂಗಿ ?' ಎಂದೆ

'ಇನ್ಮೇಕೆ ಈ ಕಡೆ ಕೆಲ್ಸಕ್ ಬರದೇ ಡೌಟು ಕಣಕ್ಕ' ಎಂದಳು.

'ಯಾಕೆ ? ಮತ್ತೆಲ್ಲಿಗೆ ಹೋಗ್ತೀಯಾ? '

'ನಂಗೆ ಹೌಸ್ ಮೇನೇಜರ್ ಆಗಿ ಪ್ರಮೋಶನ್ ಆಯ್ತಾ ಅದೆ'

'ಹ್ಹಾಂ ! ಹೌದಾ...ಎಲ್ಲಿ ?'

'ಅದೇ ಆ ಕೌನ್ಸಿಲ್ರು ಮನ್ಲಿ ಕೆಲ್ಸ ಮಾಡ್ತಿದ್ನಲಾ ಅಲ್ಲೇ '

'ನಮ್ಮನ್ಲೂ ಇಷ್ಟ್ ದಿನ ನೀನು ಮ್ಯಾನೇಜರ್ರೇ ತಾನೇ ಆಗಿದ್ದು. ನಾವು ಹೇಳಿದ್ದು ಏನಾದ್ರೂ ಕೇಳ್ತಾ ಇದ್ಯಾ. ನಿನ್ಗೆ ಹ್ಯಾಗ್ ಬೇಕೋ ಹಾಗೆ ತಾನೇ ಮಾಡ್ತಾ ಇದ್ದೆ'

'ಏ...ಅದಂಗಲ್ಲ ಕಣಕ್ಕಾ ಈಗ ಭಾರೀ ಗ್ಯಾಸ್ ಟ್ರಬಲ್ಲು ಸುರುವಾಗದೆ ನೋಡಿ...'

'ಚೆನ್ನಾಗಿ ನೀರು ಕುಡಿಯೇ ಹೋಗುತ್ತೆ '

'ಥೋ..., ಆ ಗ್ಯಾಸ್ ಅಲ್ಲ ಕಣಕ್ಕಾ... ಯುದ್ದ ನಡೀತಾ ಅದಲ್ಲಾ ಸೌದಿ ಕಡೆಲೆಲ್ಲಾ..., ಅದುಕ್ಕೆ ಗ್ಯಾಸ್ ಸಿಗ್ದಲೆ ಎಲ್ರೂ ಸೌದೆ ಉಡುಕ್ತಾ ಅವ್ರೆ ಒಲಿಗೆ ಇಕ್ಕಕೆ'

'ಹ್ಹೂಂ, ಈ ಇರಾನ್ ಇರಾಕ್ ಯುದ್ಧ ಮುಗಿಯೋ ತನ್ಕ ಗ್ಯಾಸ್ ಸಿಗೋದು ಕಷ್ಟ'

'ಈಗ ಇರ ಗ್ಯಾಸ ಖಾಲಿ ಮಾಡ್ಕಂಡ್ರೆ ಮುಗೀತಂತೆ ಮುಂದುಕ್ಕೆ ಸಪ್ಲೈ ಇರಾಕಿಲ್ಲ'

'ಕರೆಂಟಲ್ಲಿ ಅಡ್ಗೆ ಮಾಡ್ಬೋದಲಾ ?'

'ಬಿಟ್ಟಿ ಕರೆಂಟು ಎಷ್ಟ್ ದಿನ ಬತ್ತದಕ್ಕಾ...? ಕೌನ್ಸಿಲ್ರು ತೋಟ್ದಾಗೆ ಮಸ್ತಾಗಿ ಸೌದೆ ಸಿಗ್ತದಂತೆ. ಅಲ್ಲಿಂದ ಒಂದ್ ಲೋಡು ಸೌದೆ ತಂದವ್ರೆ, ನಂಗೂ ಒಸಿ ಕೊಡ್ತೀನಿ ಅಂದವ್ರೆ'

'ಹ್ಹೂಂ..!'

'ಆದ್ರೆ ಅವ್ರ್ ಕುಕ್ಕಿ (ಅಡಿಗೆ) ಗೆ ಸೌದೆಲಿ ಅಡ್ಗೆ ಮಾಡಕೆ ಬರಕಿಲ್ವಂತೆ'

'ಅದುಕ್ಕೆ ನೀನು ಕಲುಸ್ಕೊಡಕೆ ಹೋಗ್ತೀಯಾ ?'

'ಹ್ಹೂಂ ಕಣಕ್ಕಾ, ಮದ್ಲಿದ್ದವ್ನು ಯಾರೋ ಗಂಡುಸ್ರು ಮೇನೇಜರ್ ಅಂತೆ. ಅವ್ನು ಏಳ್ಕೊಡ್ತೀನಿ ಅಂತ ಓಗಿ ಅವ್ಳ್ ಪಕ್ಕುಕ್ಕೇ ನಿಂತ್ಗತಿದ್ನಂತೆ. ಅವ್ಳಿಗೆ ಕರೆಂಟ್ ಒಡ್ದಂಗಾಗಿ ಅವ್ನ್ ಕೆನ್ನೆಗೆ ರಪ್ ಅಂತ ಬಾರ್ಸಿದ್ಲಂತೆ '

'ಶಾಕ್ ಟ್ರೀಟ್ಮೆಂಟ್ ಕೊಟ್ಟಿದಾಳೆ ಬಿಡು'

'ಹ್ಞೂಂ, ಅದುಕ್ಕೆ ಈಗ ಗಂಡುಸ್ರು ಮೇನೇಜರ್ರೇ ಬ್ಯಾಡ ಅಂತ ನನ್ನೇ ಮೇನೇಜರ್ ಮಾಡ್ತಾ ಅವ್ರೆ. ಅತ್ತ್ ವರ್ಸದಿಂದ ಇಲ್ಲೇ ಕೆಲ್ಸ ಮಾಡಿ ಎಲ್ಲಾ ತಿಳ್ಕಂಡಿದೀಯ, ನೀನು ಭಾರಿ ನಂಬ್ಕಸ್ಥೆ ನಿಂಗಿ. ನೀನೇ ಮೇನೇಜರ್ ಆಗು ಅಂದ್ರು'

'ಏನೇನ್ ಕೆಲ್ಸ ನಿಂದು ?'

'ಅಲ್ಲೇನು ಎಚ್ಗೆ ಕೆಲ್ಸ ಇರಕಿಲ್ಲ ಕಣಕ್ಕಾ. ಇನ್ಮೇಕೆ ನಾನು ಮದ್ಲಂಗೆ ಮನೆ ಗುಡ್ಸದು, ಪಾತ್ರೆ ತೊಳಿಯದು ಎಲ್ಲಾ ಮಾಡಂಗಿಲ್ಲ. ಅದುಕ್ಕೆ ಬೇರೆರ್ನ ಮಡಿಕ್ಕತರಂತೆ. ನಂದು ಏನಿದ್ರೂ ಸಾಮಾನು ಏನೇನು ಮುಗ್ದೋಗೈತೆ, ಎಷ್ಟೆಷ್ಟು ತರುಸ್ಬೇಕು ? ದಿನಾ ಬೆಳಿಗ್ಗೆ ಏನ್ ತಿಂಡಿ, ಏನಡ್ಗೆ...? ನೆಂಟ್ರು ಬಂದಾಗ ಏನೇನ್ ಎಚ್ಗಟ್ಲೆ ಮಾಡ್ಬೇಕು? ಜಾಸ್ತಿ ದಿನ ಉಳ್ಕಂಡ್ರೆ ಎಂಗ್ ಎತ್ತಂಗ್ಡಿ ಮಾಡ್ಬೇಕು ? ಇದುನ್ನೆಲ್ಲಾ ಮೇನೇಜ್ ಮಾಡದು ನನ್ ಕೆಲ್ಸ ಕಣಕ್ಕಾ...'



'ಹ್ಞೂಂ..., ಅದುನ್ನೆಲ್ಲಾ ನೀನು ಚೆನ್ನಾಗೇ ಮಾಡ್ತೀಯ ಬಿಡು'

'ಯುದ್ದ ಮುಗಿಯಗಂಟಾ ಸೌದೆ ಒಲೆ ಒಂದ್ ಅಚ್ಕೊಡ್ತೀನಿ... ಅಡ್ಗೆ ಎಲ್ಲಾ ಆ ಯಮ್ಮನೇ ಮಾಡ್ಕತದೇ '

'ನಮ್ ಕತೆ ಹೇಳೇ ?'

'ನಿಮ್ಮನೀಗೆ ನನ್ ಮಗ್ಳು ಕಳ್ಸನೆನಕ್ಕಾ ?'

'ಬೇಡ ತಾಯಿ... ಅವ್ಳುನ್ನ ಸುಧಾರ್ಸಕಿಂತ ನಾನೇ ಕೆಲ್ಸ ಮಾಡ್ಕಳದ್ ವಾಸಿ'

'ಹ್ಹ ಹ್ಹ ...ಅದು ಒಂದ್ಸಲ್ಪ ಐಟೆಕ್ಕು ಬುಡಿ. ನಾನೇ ಬರ್ಬೇಕು ಅಂದ್ರೆ ಸಲ್ಪ ಕಾಶ್ಟ್ಲಿ ಆಯ್ತದೆ. ಕೌನ್ಸಿಲ್ರು ಮನ್ಲಿ ನನ್ಗೆ ಐದ್ಸಾವ್ರ ಜಾಸ್ತಿ ಮಾಡವ್ರೆ. ನೀವೂ ಒಂದೆಲ್ಡ್ ಸಾವ್ರ ಜಾಸ್ತಿ ಮಾಡಿದ್ರೆ ಬಿಡ್ವಾದಾಗ ಒಂದೆಜ್ಜೆ ಬಂದೋಯ್ತಿನಿ. ನೋಡಿ ಏಚ್ನೆ ಮಾಡಿ. ಇದ್ರು ಮೇಲೆ ನಿಮಿಗ್ ಬುಟ್ಟಿದ್ದು...' ಖಡಕ್ಕಾಗಿ ನುಡಿದ ನಿಂಗಿ ಕೈ ತಿರುವುತ್ತಾ ಹೊರ ನಡೆದಾಗ 'ಇರಾನ್ – ಅಮೆರಿಕ ಯುದ್ಧ ಭಾರತಕ್ಕೆ ಎಫೆಕ್ಟ್' ಎಂಬ ಹೆಡ್ ಲೈನ್ ನೊಂದಿಗೆ ನಡೆಯುತ್ತಿದ್ದ ಚರ್ಚೆಯನ್ನೇ ನೋಡುತ್ತಾ ಬೆಪ್ಪಾಗಿ ಕುಳಿತೆ. ■

# ಕೊಶ್ಚನ್ ಕೋಮಲಮ್ಮ..

✍ ಸುಮನಾ

ಪ್ರತಿ ದಿನದ ಬೆಳಗಿನ ರೊಟೀನು, ಕೆಲ್ಸ ಮಾಡೋ ಕೋಮಲಮ್ಮ ಕಸ ಗುಡಿಸುತ್ತಾ, ಮನೆ ಕೆಲ್ಸ ಮಾಡ್ತಾ ಟಿ.ವಿ.ನ್ಯೂಸ್, ವರದಿ ಇತ್ಯಾದಿ ನೋಡ್ತಾ, ಅವಳು ಮಾಡೋ ಕೊಶ್ಚನ್ ..

1. ಸಿನಿಮಾ ನಟನ ಡೈವರ್ಸ್ ನ್ಯೂಸಿನಲ್ಲಿ..

ಆ ದಂಪತಿಗಳು 25 ವರ್ಷದ ನಂತರ ವಿಚ್ಚೇದನ..ಅವರಿಗಿಬ್ಬರು ಮಕ್ಕಳು.. "ಅಯ್ಯ, ಯಾಕ್ರವ್ವ..ಈಗ ಬೇರೆಯಾಗೋದು.. ಮಕ್ಕಳ ಮದುವೆ ಮಾಡೋರ್ಯಾರು??

2. ಲಕ್ಕುಂಡಿ ಯಲ್ಲಿ ಬಂಗಾರ ಪತ್ತೆ..

ಅಲ್ರವ್ವಾ ಅವರಿಗೆ, ಆ ಬಂಗಾರ ಸಿಕ್ಕಿರೋದು ಅವರ ಮನೇಲಿ, ಸರ್ಕಾರಕ್ಕೆ ಯಾಕೆ ಏಳ್ಬೇಕು ??

3. ಸಾಲ ಬಾಧೆ ತಾಳಲಾರದೆ ಉದ್ಯಮಿ ಆತ್ಮಹತ್ಯೆ..

"ಅಯ್ಯೋ, ಅಷ್ಟು ಆಸ್ತಿ ಇತ್ತಲ್ಲ, ಅದನ್ನೇ ಮಾರಿ ಸಾಲ ತೀರಿಸ್ಬಹುದಾಗಿತ್ತಲ್ವಾ??

ಅದ್ಯಾಕೆ ಪ್ರಾಣ ತಕ್ಕೋಳೋದು??

4. ಇರಾನ್–ಇಸ್ರೇಲ್, ಅಮೇರಿಕಾದ ಯುದ್ಧದ ಕಾರಣ ಬಂಗಾರ, ಅಡಿಗೆ ಅನಿಲ, ಅಡುಗೆ ತೈಲ, ವಾಣಿಜ್ಯ ತೈಲಗಳ ಬೆಲೆ ಏರಿಕೆ..

"ಅಮ್ಮೋರೆ, ಈಗ ಎಲ್ಲಾ ರೇಟ್ ಜಾಸ್ತಿ ಆಯ್ತಂತಲ್ಲ, ಅಂಗಾದ್ರೆ ಸರ್ಕಾರದೋವ್ರು ಕೆಲ್ಸ ದಲ್ಲಿರೋರ್ಗೆ ಸಂಬಳ ಜಾಸ್ತಿ ಮಾಡ್ತಾರಾ??

5.ಯುದ್ಧ ಕಾರಣ ದಿಂದ ಅಡಿಗೆ ಅನಿಲ ಸಮಸ್ಯೆ, ಎಲ್ ಪಿ ಜಿ ಅಭಾವ, ಹೋಟಲ್, ಪಿ.ಜಿ.ಗಳು ಬಂದ್ ಆಗಬಹುದಾದ ಅನಿವಾರ್ಯತೆ..

ಅಲ್ರಮ್ಮ, ಗ್ಯಾಸ್ ಇಲ್ಲ, ಹೋಟಲ್, ಪಿ.ಜಿ.ಇಲ್ಲ ಅಂದ್ರೆ ಅಕ್ಕಿ, ಬೇಳೆ ತಿನ್ನೋಕಾಗುತ್ತಾ?

6. ತೈಲ ರಾಷ್ಟ್ರಗಳ ಮೇಲೆ ದಾಳಿ..

ಅಂಗಾದ್ರೆ ಅಲ್ಲಿಯವರಿಗೆ ಗ್ಯಾಸ್ ಪ್ರಾಬ್ಲಂ ಇರಲ್ವಾ?? ಅವ್ರೇನು ಊಟ ಮಾಡ್ತಾರೆ??

7.ಕೋಮಲಮ್ಮ ಕನ್ಕ್ಲೂಷನ್..ಆಗೋದೆಲ್ಲಾ ಒಳ್ಳೇದಕ್ಕೆ ಅಂತಾವ್ರಲ್ಲವ್ವಾ..

ಯುದ್ಧ ಆಗಿದ್ದು ಅಷ್ಟೇ..ಕಣ್ರಮ್ಮ

ಈಗ ನಾನು ಕೆಲ್ಸ ಮಾಡೋ ಮನೆ ಮೇಡಂಗಳು

ಎಲ್ಲಾ ಸಣ್ಣಗಾಗವ್ರೆ..

ಅಡಿಗೆ ಗ್ಯಾಸ್ ಸಿಗ್ದೇ ಹೋಟಲ್‌ನಲ್ಲಿ ಎಣ್ಣೆ ತಿಂಡಿ ಬಜ್ಜಿ, ಬೋಂಡಾ, ಪೂರಿ, ಎಲ್ಲಾ ಬಂದ್ ಆಗೈತೆ.

ಅದೊಂತರಾ ಒಳ್ಳೇದೇ ಆಯ್ತು, ನೋಡಿ ಎಲ್ಲಾ ಸಿಲಿಂ ಆಗಿ ಬಳುಕ್ತವ್ರೆ ..

■

# ವಸಂತಾಯಣ

ಸಿ.ಎ. ವಿಲಾಸ ನಾ ಹುದ್ದಾರ

ಇದೇನಪಾ.. ರಾಮಾಯಣ ಕೇಳೀವೀ...ವಸಂತಾಯಣ ಏನಿದು ಅಂತ ಕನ್ಫ್ಯೂಜ್ ಮಾಡ್ಕೋಬ್ಯಾಡ್ರಿ.. ಇದು ಸುಮಾರು 50 ವರ್ಷದಿಂದ ಇರೋ ನಮ್ಮ ದೋಸ್ತ ವಸಂತ ಪದಕಿಯ ಜೋಡೀ ಆದ ಹಾಸ್ಯ ಪ್ರಸಂಗಗಳು. ನಾನು 1976 ರೊಳಗ ಸಿ.ಎ. ಮಾಡ್ಲಿಕ್ಕೆ ಹುಬ್ಬಳ್ಳಿಯೊಳಗ ಪ್ರಸಿದ್ಧ ಅಗಿದ್ದ ಚಾರ್ಟರ್ಡ ಅಕೌಂಟನ್ಸಿ ಕಂಪನಿ ಎಚ್.ಕೆ.ಅಪರಂಜಿ & ಕಂ. ಸೇರಿಕೊಂಡೆ. ಅದರೊಳಗ ಎಚ್.ಕೆ.ಅಪರಂಜಿ ಮತ್ತ ಅವರ ತಮ್ಮ ಪಿ.ಕೆ.ಅಪರಂಜಿ ಪಾಲುದಾರರು ಇದ್ರು. ಆಗ ನನ್ನ ಜೋಡಿ ದತ್ತಾ ಕುಲಕರ್ಣಿ, ಬಳ್ಳಾರಿ, ದೇಸಾಯಿ, ಖಟಾವಕರ್ ಮುಂ. ಸಿ.ಎ. ಮಾಡ್ಲಿಕ್ಕೆ ಇದ್ರು. ವಸಂತ ಮತ್ತ ಅರುಣ ಅಪರಂಜಿ 1977 ರೊಳಗ ಸೇರ್‍ಕೊಂಡ್ರು.ಇವರಿಬ್ಬರೂ ಬಂದ ಮ್ಯಾಲೆ ಆಫೀಸಿನ ವಾತಾವರಣನ ಬದ್ಲಿ ಆತು. ಯಾವಾಗಲೂ ಹಾಸ್ಯ, ನಗು ತುಂಬಿ ಹೋತು.

ಸೊಂಡೂರ ಹತ್ರ ಇರೋ ಎನ್.ಎಮ್.ಡಿ.ಸಿ ಅವರ ಡೋಣಿಮಲೈ ಕಬ್ಬಿಣ ಅದಿರಿನ ಯೋಜನೆಯ ಅಂತರಿಕ ಲೆಕ್ಕ ತಪಾಸಣೆಗಾಗಿ ನಮಗ ಹೋಗಬೇಕಾಗ್ತಿತ್ತು. ನಾವು 2–3 ಮಂದಿ ಕೂಡಿ ಹೋಗಿ ಸಾಧಾರಣಾ 3–4 ತಿಂಗಳ ಅಲ್ಲೇ ಇರಬೇಕಾಗ್ತಿತ್ತು. ಅದೊಂದು ಟೌನ್‌ಶಿಪ್ ಆಗಿತ್ತು.ನಾವು ಅಲ್ಲಿರೋ ಅತಿಥಿ ಗೃಹದೊಳಗ ಇರ್ತಿದ್ವಿ. ಪ್ರತಿ ಶನಿವಾರ/ರವಿವಾರ ಸಮೀಪ ಇರೋ ಬಳ್ಳಾರಿಗೆ ಇಲ್ಲಾಂದ್ರ ಹೊಸಪೇಟಗ ಹೋಗ್ತಿದ್ವಿ. ಒಮ್ಮೆ ನನಗ, ವಸಂತಗ ಮತ್ತ ದತ್ತಗ ಆ ಕೆಲಸಕ್ಕ ಕಳಸೀದ್ರು.

ಮೊದಲನೇ ರವಿವಾರ ಬಳ್ಳಾರಿಗೆ ಹೋದ್ವಿ. ಆ ಊರಾಗ ವಸಂತ ಸ್ವಲ್ಪ ವರ್ಷ ಇದ್ದಾ. ಹಿಂಗಾಗಿ ಬಳ್ಳಾರಿ ಬಗ್ಗೆ ಅವನಿಗೆ ಅಲ್ಪ ಸ್ವಲ್ಪ ಗೊತ್ತಿತ್ತು. ಬಳ್ಳಾರಿಯೊಳಗ ಬಸ್ ಇಳಿಯೋದಕ್ಕ ವಸಂತ, "ಬರ್ರೀಲೇ, ಇವತ್ತ ನಿಮಗ ಸ್ಪೇಷಲ್ ತಿನಸಿನ ರುಚಿ ತೋರಸ್ತೀನಿ.." ಅಂತ ಹೇಳ್ಕೋತ ಬಸ್ ಸ್ಟ್ಯಾಂಡ್ ಎದುರಿಗೆ ಇರೋ ಮಯೂರ್ ಹೋಟೆಲ್‌ಗೆ ಕರ್‍ಕೊಂಡ ಹೋದಾ. ನಮಗರೆ ಅದನ್ನ ಕೇಳಿ ನಮ್ಮ ಬಾಯಾಗ ನೀರ ಬರ್‍ಲಿಕತ್ತು. ಹೋಟೆಲ್‌ಗೆ ಹೋಗಿ ಕೂತ್ವಿ. ವೇಟರ್ ಬಂದ ಕೂಡ್ಲೆ ಅವಂಗ ಮೂರು "ಚೌ ಚೌ ಬಾತ್" ತರ್‍ಲಿಕ್ಕೆ ಹೇಳಿದ. ಅಲ್ಲೀತನಕಾ ನಾವು ಅಂಥಾ ಹೆಸರ ಕೇಳಿರ್‍ಲಿಲ್ಲಾ. ನಮಗ ಯಾವಾಗ ಚೌ ಚೌ ಬಾತ್ ನೋಡೀವೋ ಅಂತ ಕುತೂಹಲ. ಅದನ್ನ ತಿಂದ ಬಾಯಿ ಚಪ್ಪರಿಸೋ ಚಪಲ. ಕಣ್ಣ ಕಣ್ಣ ಬಿಟ್ಟ ಆ ವೇಟರ್ ಬರೋದ ಕಾಯ್ಕೋತ ಕೂತ್ವಿ. ಎಲ್ಲಾ ಲಕ್ಷ್ಯ ಅಂವಾ ಬರೋ ದಿಕ್ಕಿನ ಕಡೇ ಮತ್ತ ಅಂವಾ ತರೋ ಟ್ರೇ ಕಡೇನ. ಅಂವ 5 ಮಿನಿಟ ತೊಗೊಂಡಾ. ನಮಗ 5 ವರ್ಷ ತೊಗೊಂಡ್ಹಂಗ ಅನಿಸ್ತು. ಅವನಿಗೆ ಹೆಂಗ ಗೊತ್ತಾಗಬೇಕ ನಮ್ಮ ಗಡಬಿಡಿ. ಸಾವಕಾಶ ನಡ್ಕೋತ ಬಂದ ನಮ್ಮ ಮುಂದ ಮೂರು ಪ್ಲೇಟ್ ಇಟ್ಟಾ. ಅದೊರಳಗ ಇದ್ದ ಉಪ್ಪಿಟ್ಟು,ಸಿರಾ ನೋಡಿ ನಮ್ಮ ಚಪಲಾ ಎಲ್ಲಾ ಗಾಳಿ ಹೋಗ್ತಿರೋ ಬಲೂನಿನ್ಹಂಗ ಠುಸ್ ಅಂತ ಇಳದ ಹೋತು. ವಸಂತ ಮಾತ್ರ ಮುಸಿ ಮುಸಿ ಅಂತ ಮೀಸಿ ಒಳಗ ನಗ್ಲಿಕತ್ತಿದ್ದ. ಅದನ್ನ ನೋಡೀದ್ರು ಹೊಟ್ಟಿ ಚುರು ಚುರು ಅನ್ಲಿಕತ್ತಿತ್ತು ಅದಕ್ಕ ಮೊದ್ಲೇಕ ತಿಂದ ಅವನ ಕೈ ತೊಗೊಂಡ್ರಾತ ಅಂತ ವಿಚಾರ ಮಾಡಿ ಚೌ ಚೌ ಬಾತ್ ಖಾಲಿ ಮಾಡ್ಲಿಕ್ಕೆ ಸುರು ಮಾಡೀದ್ವಿ. ಆ ಸಿರಾ ಬಾಯಾಗ ಇಟ್ಟ ಕೂಡ್ಲೆ ಅದರ ರುಚಿಗೆ ವಸಂತ ಮ್ಯಾಲಿನ ಹುಸಿ ಸಿಟ್ಟು ಓಡಿ ಹೋತು. ಉಪ್ಪಿಟ್ಟೂ ಭಾಳ ರುಚಿ ಆಗಿತ್ತ. ಹಿಂಗಾಗಿ ಅವತ್ತ ವಸಂತ ನಮ್ಮ ಕೈಯಾಗಿಂದ ಬಚಾವ ಆದಾ.

ಮತ್ತೊಂದ ಶನಿವಾರ ಹೊಸಪೇಟಿಗೆ ಹೋಗಿದ್ವಿ. ನಮಗ ಆಗ 21–22 ವಯಸ್ಸಿನ ಹುರುಪು. ನಮಗ ಕಲಕತ್ತಾ ಪಾನ ತಿನ್ನೋ ಚಟಾ. ಯಾರೋ ನಮಗ ಹೇಳಿದ್ರು ಅದರಕ್ಕ ಖಿಮಾಮ ಹಚ್ಕೊಂಡ ತಿಂದ್ರ ಇನ್ನೂ ಮಜಾ ಬರ್ತದ ಅಂತ. ಖಿಮಾಮ ಅಂದ್ರ ಏನ ಅಂತ ಗೊತ್ತಿಲ್ಲಾ. ಹಿಂಗಾಗಿ ಅವಾಗಾವಾಗ ಪಾನ್ ತಿನ್ನೋ ಮುಂದ ಖಿಮಾಮ ಹಚ್ಚಿಸಿಕೊಂಡ ತಿಂತಿದ್ವಿ. ಹೊಸಪೇಟಿಗೆ ಹೋದಾಗ ಊಟ ಆದ ಮ್ಯಾಲೆ ಪಾನ್ ಹಾಕ್ಕೋಳಲಿಕ್ಕೆ ಪಾನ್ ಶಾಪ್‌ಗೆ ಹೋದ್ವಿ. ಪಾನ್ ಹಾಕ್ಕೊಂಡ ಅನಂತನಾಗ್ ಮತ್ತ ಅರತಿ ಇದ್ದ "ಕುದುರೆ ಮುಖ" ಪಿಕ್ಚರ್ ನೋಡ್ಲಿಕ್ಕೆ ಹೋಗೋದು ನಮ್ಮ ಪ್ಲ್ಯಾನ್. ಪಾನ್‌ವಾಲಾ ಪಾನ್ ಕಟ್ಕೋತ್ 120 ಮತ್ತ 300 ಹಾಕ್ಲೇನ್ರಿ ಅಂತ ಕೇಳಿದ. ನಮಗ 120,300 ಅಂದ್ರ ಏನೂ ಗೊತ್ತಿಲ್ಲಾ. ವಸಂತ ಮಾರಿ ನೋಡೀದ್ವಿ. ಅಂವಾ ಸ್ಟೈಲ್ ಮ್ಯಾಲೆ ಹಾಕ್ರೀ ಅಂತ ಹೇಳಿದಾ. ಏನೋ ಅದು ಅಂತ ಕೇಳಿದಾಗ ಖಿಮಾಮ ಅಂದಾ. ನಾವ ತಲೀ ಆಡಿಸಿದ್ವಿ. ಶಿಸ್ತಾಗಿ ಪಾನ್ ಮಾಡಿ ಕೊಟ್ಟಾ ಪಾನ್‌ವಾಲ. ನಾವು ಹೀರೋನ್ಹಂಗ "ಡಾನ್." ಪಿಕ್ಚರ್‌ದೊಳಗ ಅಮಿತಾಬ್ ಬಚ್ಚನ್ ಪಾನ್ ಬಾಯೊಳಗ ಹಾಕ್ಕೊಂಡ್ಹಂಗ ಹಾಕ್ಕೊಂಡು "ಕುದುರೆ ಮುಖ" ನೋಡ್ಲಿಕ್ಕೆ ಹೊಂಟ್ವಿ. ಮೊದಲೇ 1–2 ಮಿನಿಟು ಏನ ಆಗ್ಲಿಲ್ಲಾ. ಆಮ್ಯಾಲೆ ನಮಗ ಎಲ್ಲೋ ತೇಲಿದ್ಹಂಗ ಅನಿಸಿ ತಲೀ ಗಿರಿ ಗಿರಿ ತಿರಗಿದ್ಹಂಗ ಅನಸಲಿಕತ್ತು. ಮೈಯಾಲ್ಲಾ ಬೆವರ್ಲಿಕತ್ತು. ನಾವ ಎಲ್ಲಿದ್ದೇವೋ, ಏನ ಆಗ್ಲಿಕತ್ತದೋ ಅನ್ನೋದು ತಿಳೀವಾಲ್ತು. ಹಂಗೂ ಹಿಂಗೂ ತೇಲಾಡ್ಕೋತ ಟಾಕೀಜ್‌ನೊಳಗ ಹೋಗಿ ಖುರ್ಚಿ ಮ್ಯಾಲೆ ದೊಪ್ಪ ಅಂತ ಕುಸದ ಕೂತ್ವಿ. ಸುಮಾರು ಇಂಟರವಲ್ ಆದಾಗ ಸ್ವಲ್ಪ ಆರಾಮ ಅನಿಸಿ ಮೈಮ್ಯಾಲೆ ಎಚ್ಚರ ಬಂದ್ಹಂಗ ಆತು. ನಾನು ದತ್ತಾ ವಸಂತಗ ಬಯ್ದಾಗ, "ನನಗೂ ಏನೂ ಗೊತ್ತಿಲ್ರೋ, ಬಹುತೇಕ ತಂಬಾಕ ಇರ್ಬೇಕು ... " ಅಂದಾ. ನೀಯಾಕ ಹಾಕ್ಲಿಕ್ಕೆ ಹೇಳಿದ್ಯೋ ಅಂತ ಕೇಳೀದ್ರ, "ಪಾನ್‌ವಾಲಾನ ಕೇಳೀದ್ರ ಇನ್ಸಲ್ಟ್ ಆಗ್ತದ, ಅದಕ್ಕ ಹಾಕ್ಲಿಕ್ಕೆ ಹೇಳಿದೆ." ನಾವು ಹೊರಗ ಹೋಗಿ ಪಾನ್‌ವಾಲಾ ಕೇಳೀದ್ವಿ. ಆಗ ನಮಗ ಗೊತ್ತಾತು ಖಿಮಾಮನೂ ತಂಬಾಕದ ಪೇಸ್ಟ್ ಅಂತ. ಈ ಘಟನೆ ಆದಮ್ಯಾಲೆ ನಾವ ಎಲ್ಲಾರೂ ಅದನ್ನ ತಿನ್ನೋದು ಬಿಟ್ವಿ. ಆದರ ಇವತ್ತಿನವರೆಗೂ ವಸಂತಗ ಇದು ಗೊತ್ತಿತ್ತೋ ಇಲ್ಲೋ ಅಂತ ನಮಗ ತಿಳದಿಲ್ಲ.




ವಸಂತ 50 ವರ್ಷ ಹಿಂದ ಹೆಂಗ ಇದ್ದೋ ಈಗೂ ಹಂಗ ಇದ್ದಾನ. ನಮ್ಮ ಮಾತುಕತೆಯೊಳಗ ಹಾಸ್ಯ ಚಟಾಕಿ ಹಾರಿಸ್ಕೋತ ಎಲ್ಲಾರ್ನೂ ನಗಿಸ್ಕೋತ ಇರ್ತಾನ. ಅಂವಾ ಮತ್ತ ಅರುಣ ಅಪರಂಜಿ ಇದ್ದಲ್ಲೆ ನಗುವಿಗೆ ಕೊರತೆ ಇಲ್ಲಾ. ಮೊನ್ನೆ ನಾವೆಲ್ಲಾ ಗೆಳ್ಯಾರು ಅರುಣನ 70 ವರ್ಷದ ಭೀಮರಥಿ ಶಾಂತಿಗೆ ಹುಬ್ಬಳ್ಳಿಯೊಳಗ ಕೂಡಿದ್ವಿ. ಆಹೇರ ಎಲ್ಲಾ ಕೊಟ್ಟ ಮ್ಯಾಲೆ ಊಟಕ್ಕ ಹೋದ್ರ ನಮಗ ಮೊದಲ್ನೇ ಪಂಕ್ತಿಗೆ ಜಗಾ


ಸಿಗಲಿಲ್ಲಾ. ಎರಡನೇ ಪಂಕ್ತಿಗೆ ಹೋಗಿ ಊಟಕ್ಕ ಕೂತ್ವಿ. ಬಾಳಿ ಎಲಿ ಮ್ಯಾಲೆ ಎಲ್ಲಾ ಬಡಿಸಿದಮ್ಯಾಲೆ ಚಿತ್ರಾವತಿ ತಿರುವಪಾ ಅಂತ ನಾ ಹೇಳಿದ್ರ, ವಸಂತನ ತಕ್ಷಣದ ಪ್ರತಿಕ್ರಿಯೆ,"ಅಲ್ಲಲೇ, ಮೊದ್ಲೇಕ ಕೂತಾವ್ರ ಚಿತ್ರಾವತಿ ಇಟ್ಟಿರತಾರ...". ಅದನ್ನ ಕೇಳಿ ಆಜು ಬಾಜು ಕೂತಾವ್ರು ನಮ್ಮನ್ನ ವಿಚಿತ್ರ ಆಗಿ ನೋಡೀದ್ರ , ಆದ್ರ ಹಾಸ್ಯ ಪ್ರಜ್ಞೆ ಇದ್ದವರು ನಸು ನಕ್ಕರು.

ಈ ಕಾರ್ಯಕ್ರಮ ಆಗಿ ಎರಡನೇ ದಿವಸ ಎಲ್ಲಾ ಗೆಳ್ಯಾರು ದಂಪತಿ ಸಮೇತರಾಗಿ "ಲೀಲಾ ಪ್ಯಾಲೇಸ" ಹೋಟೆಲ್‌ನೊಳಗ ಸೇರಿದ್ವಿ. ತಿನ್ನೋದು ಉಣ್ಣೋದು ಮುಗದ ಮ್ಯಾಲೆನೂ ಎಲ್ಲಾರ ಹೆಂಡಂದಿರು ಗಹನವಾದ ಹರಟೆಯೊಳಗ ಮುಳುಗಿದ್ರು. ನಾವು ಕರದ್ರೂ "ಕ್ಯಾರೆ" ಅನ್ನದ ತಮ್ಮ ಹರಟಿ ಮುಂದುವರಸಿದ್ರು. ನಮ್ಮಲ್ಲೇ ಯಾರೋ ಅಂದ್ರು, "ಅಂಥಾದೇನಪ್ಪಾ ರಾಜಕಾರಣಾ ಮಾತಾಡ್ಲಿಕತ್ತಾರ....". ಥಟ್ಟನ ವಸಂತ ಹೇಳಿದಾ, "ಅವರು ಆತ್ಮ ಸ್ತುತಿ, ಪತಿ ನಿಂದಾ ಕಾರ್ಯಕ್ರಮದೊಳಗ ಮುಳಗ್ಯಾರ..."

ಇಂಥಾ ಎಷ್ಟೋ ಘಟನೆಗಳು, ಹಾಸ್ಯ ಚಟಾಕಿಗಳು ವಸಂತ ಮತ್ತ ಅರುಣ ಇದ್ದಾಗ ಆಗ್ತಿರ್ತಾವ. ನಾನು "ಅಪರಂಜಿ" ಗೆ ಬರೆದ ಮದ್ಲೇ ಹಾಸ್ಯ ಲೇಖನ, "ಗುಂಡ್ಯಾನ ಕರೋನಾ ಡೈಟ್" ಮೂಡಿ ಬರ್ಲಿಕ್ಕ ಸ್ಪೂರ್ತಿ ಮತ್ತು ಕಾರಣಕತೃ ವಸಂತ ಮತ್ತ ಅರುಣ ಅಪರಂಜಿ. ಪ್ರಸಂಗ ಬಂದಾಗ ಮತ್ತ ಅವರ ಕರಾಮತ್ತಗಳನ್ನ ನಿಮ್ಮ ಮುಂದ ತೊಗೊಂಡ ಬರ್ತೇನಿ.....

........................ ಶ್ರೀ ಕೃಷ್ಣಾರ್ಪಣಮಸ್ತು ...............................

■



# ಒಂದು ಕಪ್ ಚಹಾದ ಕತೆ

**ಗುಂಡುರಾವ್ ದೇಸಾಯಿ**

ಅದೇನೋ ಮೇ 21 ಚಹಾ ದಿನವಂತೆ ಗೊತ್ತಿರಲಿಲ್ಲ...ಬೆಳಿಗ್ಗೆ ಬೆಳಿಗ್ಗೆ ಕನಸಲ್ಲಿ ಸಕ್ಕರಿ, ಹಾಲು, ಚಹಾಪುಡಿ ಓಡಾಡ ಹತ್ತಿದವು. ನಿತ್ಯವೂ ಚಂದದ ಕನಸು ಕಾಣುತಿದ್ದ ನನಗ 'ಇವೇನು ಖೋಡಿ ಇವತ್ತು ಚಹಾಪುಡಿ ಸಕ್ಕರಿ ಬಂದು ಕಾಡಕತಾವ' ಅಂತ ಅನಕೊಂಡೆ... 'ಗುಗ್ಗು ನಾನು' ಎಂದು ಅರ್ಥೈಸಿಕೊಂಡವೊ ಏನೊ? ಕಪ್ಪು ಸಾಸರ್‌ನೂ ಬಂದವು.... 'ಹೂಂ ಹೂಂ... ಅಧಮ ಅಧಮ ಕೃತಘ್ನ' ಎಂದು ಚೀರಿದ ಆ ವಸ್ತುಗಳು ಗ್ಯಾಸ ಹಚ್ಚಿ ಪಾತ್ರೆಯನ್ನಿಟ್ಟು ಚಹಾ ಮಾಡುವ ವಿಧಾನ ತಿಳಿಸಕತಿದ್ವು... ಬರಿ ಫೈವ್ ಸ್ಟಾರ್ ಹೋಟಲ್ ನಲ್ಲಿ ಪಾರ್ಟಿ ಮಾಡುವ ಕನಸು ಬೀಳುತ್ತಿದ್ದ ನನಗೆ 'ಇವತ್ತೇನು ಅಸಹ್ಯ ಚಹಾದ್ದು ಕನಸು ಬಿದ್ದದ' ಎಂದಿದ್ದೆ ತಪ್ಪಾಯ್ತೇನೊ...? ಕನಸಿನ್ಯಾಗ ಕೊತಕೊತ ಕುದಿಯುವ ಆ ಚಹಾ ಪಾತ್ರೆನೆ ಮೇಲೆ ಹಾರತಾ ಬಂದು ಮುಖದ ಮೇಲೆ ಚೆಲ್ಲಿದಂಗಾತು. "ಅಮ್ಮಾ.....!" ಎಂದು ಒದರಿ ಎದ್ದು ನೋಡುತೀನಿ...ಪುಣ್ಯ ವಾಸ್ತವವಲ್ಲ.

ಬೆಳಿಗ್ಗೆ ಎದ್ದು..... ಬ್ರೆಶ್ ಮಾಡಿದ ಕೂಡಲೆ 'ಚಹಾ ಮಾಡೆ' ಅಂದೆ. ನನ್ನವಳಿಂದ ನೋ ಸೌಂಡ್! ಎಲ್ಲ ಕಡೆ ಹುಡುಕಾಡಿದೆ. ಮನ್ಯಾಗ ಇರಲಿಲ್ಲ. ನಾನೇ ಮಾಡಿಕೊಂಡ–ರಾಯಿತೆಂದು ಗ್ಯಾಸ ಹಚ್ಚಲಿಕ್ಕೆ ಹೋಗ್ತಿನಿ.... ಹತ್ತತಾ ಇಲ್ಲ! ಒದ್ದಾಡಿ ಒದ್ದಾಡಿ ಹಚ್ಚಿದೆ...ನೀರು ಕಾಯಿಸಲಿಟ್ಟೆ. ಚಹಾಪುಡಿ ಸಿಗುತಿಲ್ಲ... ಕೋಪ ನೆತ್ತಿಗೇರಿತ್ತು.. ಬೆಳಿಗ್ಗೆ ಎದ್ದು ಚಹಾ ಕುಡಿಯದೆ ಒಂದು ಕೆಲಸ ಮಾಡೋ ಜಾಯಮಾನದವಲ್ಲ. ಈಕಿ ಇರಲಾರದಕ್ಕ, ಸ್ಟವ್ ಗೊಳಾಡಿಸಿದದಕ, ಹ್ಯಾಂಗರ ಮಾಡಿ ಚಹಾ ಮಾಡಬೇಕಂತ ಯತ್ನಿಸಿದರೂ ಚಹಾಪುಡಿ ಸಿಗಲಾರರದದಕ. ಬ್ರಹಾಂಡ ಕೋಪನ ಬಂತು. ಮಕ್ಕಳು ಎದ್ದಿರಲಿಲ್ಲ. ಹೊರಗೆ ಹೋಗಿ ಕುಡಿಯೋಣ ಎಂದು ಸರ್ಕಲ್‌ನಲ್ಲಿ ಇರೋ ನಮ್ಮ ಶೆಟ್ರ ಹೋಟಲ್‌ಗೆ ಹೋದರೆ ಅವನು ಬಂದು ಮಾಡಿದ್ದ. ಮನೆಗೆ ಬಂದೆ ನಿರಾಶೆಯ ಭರದಲ್ಲಿ. ಈಕಿನೂ ಬಂದಿದ್ಲು... "ಎಲ್ಲಿ ಹಾಳಾಗಿ ಹೋಗಿದ್ದಿ? ಬೆಳಿಗ್ಗೆ ಚಹಾ ಇರಲ್ಲ ಅಂದ್ರ ನಡಿಯಲ್ಲ ಅಂತ ಗೊತ್ತಿಲ್ಲ ನಿನಗ......" ಎಂದೆ.

"ಏನ್ರೀ.....?ಅಷ್ಟು ಜೋರು ಮಾಡಕತೀರಿ. ನಾನು ನೀರು ತರೋಕೆ ಹೋಗಿದ್ದೆ. ಒಂದು ದಿವಸ ಮಾಡಿಕೊಂಡು ಕುಡಿದ್ರ ಕೈ ಸವಿಯುತ್ತಾ?" ಎಂದು ಮರು ಉತ್ತರಿಸಿದಳು. ಎದ್ದಿರುವ ಟೈಮೆ ಸರಿ ಇಲ್ಲ, ಮುಂದುವರೆಸೋದು ಬೇಡ ಅನಕೊಂಡು ಪ್ರೀತಿಯಿಂದ 'ಚಹಾ ಮಾಡೆ?' ಎಂದು ಬೆಳಿಗ್ಗೆ ನಡೆದದ್ದನ್ನು ಹೇಳಿದಾಗ "ಅಯ್ಯಯ್ಯೊ? ಶಾಂತಂಪಾಪಂ ಶಾಂತಂಪಾಪಂ! ಆಚಾರ್ಯರನ್ನು ಕೇಳೊಣ ನಡಿರಿ...! ಏನು ಕಾದಿದೆಯೋ? ಸುಡಸುಡಾ ಚಹಾ ಮುಖದ ಮೇಲಿ ಬಿದ್ದಿದೆ ಎಂದ್ರೆ.....ಎಲ್ಲೆರ ಆಸಿಡ್ ಗಿಸಿಡ್ ಬೀಳಬಹುದೇನೋ?" ಎಂದು ಗಾಬರಿಯಾಗುತ್ತಿದ್ದನ್ನು ನೋಡಿ "ಅಯ್ಯೊ! ಒಳ್ಳೆ ಹೇಳಿದೆನಪ ಈಕೆಗೆ?" ಎಂದು ಹಣೆ ಹಣೆ ಬಡಕೊಂಡೆ..

"ಮೊದಲು ಚಹಾ ಮಾಡು ಆಮೇಲೆ ಆಚಾರ್ಯರನ್ನು ಕೇಳೋಣ" ಎನ್ನುತ್ತಿರುವಾಗಲೇ ಮಾಡಿಕೊಂಡು ಬಂದು ಕೈಗೆ ಕೊಟ್ಟಳು. ಈಕಿ ಮಾಡುವ ಚಹಾ ಮುಂದೆ ಎಲ್ಲವೂ ಎಡ. ಚಹಾ ಕುಡದೆ, ಆದರೆ ಯಾಕೋ ನಿತ್ಯದ ಚಹಾದಂತಿರಲಿಲ್ಲ... 'ಏನೇ..ಇದು ಕಲಗಚ್ಚು ಇದ್ದ ಹಾಗಿದೆ' ಅಂತ ಬಯ್ಯಬೇಕೆನ್ನುವಷ್ಟರಲ್ಲಿ ಫೇಸಬುಕ್‌ನಲ್ಲಿ.. ವ್ಯಾಟ್ಸಪ್‌ನಲ್ಲಿ, ಇನಸ್ಟಗ್ರಾಂನಲ್ಲಿ, ಟೆಲಿಗ್ರಾಂನಲ್ಲಿ 'ಚಹಾ ದಿನದ ಶುಭಾಶಯಗಳು' ಅಂತ

ಯಾರ್‍ಯಾರೋ ವಿಶ್ ಮಾಡಿದ್ದು ಮೊಬೈಲ್ ಸ್ಕ್ರೀನ್ ಮೇಲೆ ಬರತಿದ್ವು. ಅದರಳಗಿನಿಂದ ಚಹಾ ಗ್ಲಾಸು ಹೊರಗೆ ಬಂದು "ಮುಂಡೆದೆ ಮುಂಡೆದೆ ಈಗಲಾದ್ರೂ ಅರ್ಥ ಆಯಿತಾ?" ಅಂತು..

"ಏನು?" ಎಂದೆ

"ಇವತ್ತು ಬೆಳಿಗ್ಗೆ ಬೆಳಿಗ್ಗೆ ಕನಸಲ್ಲಿ ಕಾಡಿದ್ದಕ್ಕೆ ಕಾರಣವೇನು ಅಂತ ..?"

"ಓಹೊ ಇವತ್ತು ಚಹಾ ದಿನನಾ.. ಇವತ್ತೇನು ಡೇಟು? ಮೇ21..ಹ್ಞಾಂ...!ಹೌದು ಯಾವಗಿನಿಂದ ಆರಂಭವಾಯಿತು..? ನಾನು ಹುಟ್ಟಿದಾಗಿನಿಂದ ಇಂತಹ ದಿನ ಅದ ಅಂತ ಗೊತ್ತೆ ಇಲ್ಲಲ..?"ಎಂದೆ.

"ಇಡಿಯಟ್.... ನಿತ್ಯ ಕುಡಿಯೋರಿಗಂತೂ ಬುದ್ಧಿ ಇಲ್ಲ, ಯಾರೋ ಪುಣ್ಯಾತ್ಮರು ನಮ್ಮ ಹೆಸರಲ್ಲಿ 'ಡೇ' ಸೆಲೆಬ್ರೇಶನ್ ಮಾಡುತಿದ್ದಾರೆ. ನೀವಂತೂ ಮಾಡಲಿಲ್ಲ..ಮಾಡೋರನ್ನ ಫಾಲೋ ಮಾಡಕಾಗಲ್ಲ..ನಿನ್ನ ಹಣೆ ಬರಹದಗಂತೂ ನಾನು ಬಿಟ್ರ ಗತಿಯಿಲ್ಲ. ಯಾರ್‍ಯಾರೊ ಬಗ್ಗೆ ಬರಿತಿರಿ ನಾವು ನಿಮಗ ಲೆಕ್ಕಕ್ಕ ಇಲ್ಲ" ಎಂದಾಗ ಬುದ್ಧಗ ಜ್ಞಾನೋದಯ ಆದಂಗ ನನಗಾಯ್ತು. 'ಆಯ್ಯೋ ಹೌದಲ್ಲ! ಚಹಾದ ಬಗ್ಗೆ ನನಗೆ ಬರಿಯೋಕೆ ಆಗಿಲ್ಲ' ಎನ್ನುವ ನೋವು ಕಾಡಿತು. ನಾನು ಸ್ವಾರಿ ಹೇಳಿ 'ಬರಿತಿನಪಾ' ಅಂದಾಗಲೆ ಕನಸಲ್ಲಿ ಮೇಲೆ ಬಿದ್ದಿದ್ದ ಸುಡ-ಸುಡ ಚಹಾ ಹಿಂದಕ್ಕ ಹೋದಂಗ ಆಗಿದ್ದು... ಕ್ರಿಕೇಟ್ ನಲ್ಲಿ ವಿಕೆಟ್ ಬಿದ್ದಾಗ ರಿಪ್ಲೇ ತೋರಿಸಿದಾಂಗ. ಫಿಲ್ಮನಲ್ಲಿ ಫ್ಲಾಶ್‌ಬ್ಯಾಕಿಗೆ ಹೋದಂಗ!

ಕತ್ತಲು ಕರಗಿ ಬೆಳಕು ಹರಿಯುವ ನಸು ಹೊತ್ತಿನಲ್ಲಿ ಎಲ್ಲರೂ ಬಯಸೋದು... ಹೋಟೆಲ್‌ನವ, ಅಂಗಡಿ ಆರಂಭಿಸಿದ ಕೂಡಲೆ ಮೊದಲು ಇಳಿಸೋದು ಚಹಾವನ್ನೇ...! ಪ್ರಯಾಣ ಮಧ್ಯದಲ್ಲಿ ಸ್ವಲ್ಪ ವಿರಾಮುಕ್ಕಾಗಿ ಗಾಡಿ ನಿಲ್ಲಿಸೋದು ಚಹಾ ಕುಡಿಯೋದಕ್ಕಾಗಿಯೇ. ತರಬೇತಿ, ಸಭೆ, ಮಾತುಕತೆ ಯಾವುದೇ ಇರಲಿ ನಡುವೆ ವಿರಾಮದಲ್ಲಿ ಚಹಾವೇ ರಿಲ್ಯಾಕ್ಸ ನೀಡುವ ಔಷಧಿ. ಮನೆಯಲ್ಲಿ ಬಂದ ಅತಿಥಿಗಳಿಗೆ ಸತ್ಕರಿಸೋದು ಚಹಾ ಮೂಲಕವೆ. ಮದುವೆ, ಮುಂಜುವಿ, ನಿಶ್ಚಿತಾರ್ಥ ಏನೇ ಸಮಾರಂಭವಿರಲಿ ಮೊದಲಿಗೆ ಆಪೇಕ್ಷಿಸುವುದು ಇದನ್ನೇ. ಒಂದು ಹೋಟಲ್‌ಗೆ ಹೋದ ಮೇಲೆ ಸ್ನೇಹಿತರನ್ನ ಬಂಧುಗಳನ್ನ ಅಥವಾ ಯಾರನ್ನಾದರೂ ಸಂಬೋಧಿಸೋದು 'ಚಹಾಕುಡಿಯೋಣ ಬನ್ನಿ' ಎಂದೆ. ಆಕಸ್ಮಾತ ಏನೇ ತಿಂದರೂ ಕುಡಿದರೂ ಕೊನೆಗೆ ಚಹಾ ಬೇಕು...ಅದರಲ್ಲಿ ಚೂಡಾ ಮಂಡಾಳು ಖಾರಾ ಭಜಿ ಮಿರ್ಚಿ ತಿಂದಾಗಲಂತೂ ಚಹಾ ಕುಡಿಯದಿದ್ದರೆ ಏನೊ ಕಳೆದುಕೊಂಡಂತೆ.

ಚಹಾ ಎನ್ನುವುದು ಇಂದು ನಿನ್ನೆಯದಲ್ಲ. ಹಿಂದೆ ಮನೆಗಳಲ್ಲಿ ದೊಡ್ಡ ದೊಡ್ಡ ಕಿಟ್ಲಿಗಳು ಒಲೆಯ ಮೇಲೆ ದಿನಪೂರ್ತಿ ಜೀವಂತವಾಗಿರುತ್ತಿದ್ದವು.. ನೀರು ಕುಡಿದಂತೆ ಕುಡಿಯುವ ಜನಗಳು ಇದ್ದರು, ಈಗಲೂ ಇದ್ದಾರೆ. ನಮ್ಮವ್ವ ಚಹಾದ ಹುಳ...85 ವರ್ಷದಾಟಿದ್ದರೂ.....ಇನ್ನೂ ಗಟ್ಟಿಗಿತ್ತಿ...ಸಿಟ್ಟು ಬಂದರೆ ನಾಲ್ಕು ದಿನ ಉಪವಾಸ ಬಿದ್ದುಬಿಡೋಳು..ಆದರೆ ಆ ಸಿಟ್ಟಿನಲ್ಲೂ ಬದುಕಿಸೋದು ಅವಳು ನಿತ್ಯ ಆರೇಳು ಸಾರಿ ಕುಡಿಯುವ ಚಹಾ. ಶುಗರ್ ಬಂದರೂ ಬಿಡದ ವ್ಯಾಮೋಹ ಚಹಾದ್ದು.. ಕೆಟ್ಟು ಕಹಿಯಾಗಿರುವ ಶುಗರ್ ಲೆಸ್ ಚಹಾವನ್ನು 'ವಾಹ್ ವಾಹ್' ಎಂದು ಕುಡಿಯವುದನ್ನು ನೋಡಿದಾಗ..ಎಂತಹ ಆನಂದವೆನಿಸುತ್ತದೆ.

ಚಹಾವಿಲ್ಲದ ದಿನ ಊಹಿಸಿಕೊಳ್ಳುವುದು ಕಷ್ಟ. ಕೆಲವರಿಗೆ ಅದು ಕುಡಿಯದೆ ಇದ್ರೆ

ಟಾಯಲೆಟ್‌ಗೆ ಹೋಗೋಕೆ ಕಷ್ಟ. ಇನ್ನೂ ಕೆಲವರಿಗೆ ಬೆಡ್ ಟೀ ಬೇಕು. ಅತಿ ಹೆಚ್ಚು ಕೆಲಸ ಮಾಡಿದರೆ, ದಣಿದಾಗ, ತಲೆ ನೋವು ಬಂದಾಗ, ಬ್ಯಾಸರಾದಾಗ, ಒತ್ತಡದಲ್ಲಿರುವಾಗ ರಿಫ್ರೇಶ್ ಆಗಲು ಚಹಾ ಬೇಕೇ ಬೇಕು. ನಾನಂತೂ ಕಂಪ್ಯೂಟರ್ ಮುಂದೆ ಕುಳಿತರೆ, ಓದಲು ಕುಳಿತರೆ ಇವಳಿಗೆ ಎಲ್ಲಿಲ್ಲದ ತೊಂದರೆ...ಮುಗಿಯವುದರೊಳಗಾಗಿ ಮೂರು ನಾಲ್ಕು ಸಾರಿ ಉತ್ತೇಜಕ ಪಾನೀಯ ಬೇಕು. ಒಂದು ವೇಳೆ ರಜಾ ಬಂದರಂತೂ ಇವಳು ಹೆದರಿಬಿಡುತ್ತಾಳೆ. ಖರ್ಚಾಗುವ ಹಾಲು ಚಹಾಪುಡಿ ಸಕ್ಕರೆ ಬಗ್ಗೆ ಅಲ್ಲ...! ತಿಂಗಳಾದ ಮೇಲೆ ಎರಡು ಸಾವಿರ ರೂಪಾಯಿ ಹಾಲಿನ ಬಿಲ್ಲು ಕೊಡುವಾಗ ನನ್ನ ಪ್ರತಿಕ್ರಿಯೆ ಕಂಡು.

ಹೆಣ್ಣು ನೋಡುವ ಶಾಸ್ತ್ರದಲ್ಲಿ ಒಳ್ಳೆ ಮೀಡಿಯೇಟರ್ ಈ ಚಹಾನೆ...ಚಹಾದ ರುಚಿಗೆ ಮಾರು ಹೋಗಿ ಮದುವೆ ಕುದರಿದ ಉದಾಹರಣೆಗಳಿಗೆ ಲೆಕ್ಕ ಇಲ್ಲ. ಎಲ್ಲಿ ಚಹಾ ಫೇಲಾತೊ ಚಂದದ ಹುಡುಗಿ ಇದ್ದರೂ 'ಅಡುಗೆ ಮಾಡಲು ಬರಲಿಕ್ಕಿಲ್ಲ' ಎನ್ನುವ ಅನುಮಾನದಿಂದ ಕ್ಯಾನ್ಸಲ್ ಆಗಿರುವ ಕಥೆಗಳು ಇವೆ. ಹಾಗೆ ನೋಡಿದರೆ ನೋಡುವ ಶಾಸ್ತ್ರದಲ್ಲಿ ಆ ಹೆಣ್ಣು ಮಾಡಿರುವ ಸಾಧ್ಯತೆಗಳೆ ಇರೋಲ್ಲ. ಒಂದು ಹೆಣ್ಣಿನ ಮದುವೆಯನ್ನು ನಿರ್ಧರಿಸುವ ಶಕ್ತಿ ಯಕಶ್ಚಿತ್ ಚಹಾಕ್ಕಿದೆ ಎಂದರೆ....ಅದು ಸಣ್ಣ ಮಾತೆ?

ಇಡಿ ಪ್ರಪಂಚದಲ್ಲಿ ಸರಾಸರಿ ಒಬ್ಬ ವ್ಯಕ್ತಿಗೆ ಒಂದು ಕೆ.ಜಿಯಷ್ಟು ಅತಿ ಹೆಚ್ಚು ಚಹಾಪುಡಿ ಬಳಸುವ ದೇಶ ನಮ್ಮದು.. ಇರಬಹುದು, ಚಹಾ ಇಲ್ಲದ ಯಾವುದೆ ಕಾರ್ಯಕ್ರಮಗಳು ನಮ್ಮಲ್ಲಿ ಆರಂಭವಾಗುವುದಿಲ್ಲ, ಮುಕ್ತಾಯವಾಗುವುದಿಲ್ಲ. ಸ್ನೇಹವನ್ನು ಬಂಧುತ್ವವನ್ನು ವಿಶ್ವಾಸವನ್ನು ಬೆಸೆಯುವ ಪಾನೀಯ ಚಹಾ.. ಮನೆಗೆ ಬಂದ ಹೆಣ್ಣುಮಕ್ಕಳಿಗೆ ಕೊಡುವ ಕುಂಕುಮದಂತೆ ಗಂಡಸರಿಗೆ ಚಹಾ...ಬಂದವರಿಗೆ ಬರಿ ನೀರು ಕೊಟ್ಟು ಕಳಿಸಿ 'ಮನಿಗೆ ಹೋದ್ರ ಹಣೆಬರಹಕ್ಕ ಒಂದು ಕಪ್ ಚಹಾ ಕುಡಸಲ್ಲ..ಅವನದೇನು ಹೇಳತಿರಿ?' ಎಂದು ನಿಮ್ಮ ಬಗ್ಗೆ ಬಿಟ್ಟಿಯಾಗಿ ಊರ ತುಂಬೆಲ್ಲ ಹೆಸರು ಪ್ರಚಾರ ಆಗಿರುತ್ತದೆ. ನಮ್ಮ ಮುಖ್ಯಗುರುಗಳೊಬ್ಬರು ಕೆಟ್ಟ ಜಿಪುಣಾಗ್ರೇಸರು. ಶಾಲೆಗೆ ಭೇಟಿ ಕೊಡುವ ಅಧಿಕಾರಿಗಳಿಗೆ ಯಾಕೆ ಚಹಾ ಕುಡಿಸಬೇಕು? ಎಂಬುದು ಅವರ ಭಾವ. ನಾನು 'ಅವರು ಮನೆಗೆ ಬಂದ ಅತಿಥಿಗಳು ಇದ್ದ ಹಾಗೆ... ಸೌಜನ್ಯಗೋಸ್ಕರವಾದರೂ ತರಸಬೇಕು ಸರ್' ಎಂದೆ. ಅವರು ಕ್ಯಾರೆ ಅನ್ನಲಿಲ್ಲ. ಚಹಾ ಪ್ರಿಯ ಆ ಅಧಿಕಾರಿಗಳು ಎಲ್ಲಾ ಸರಿ ಇದ್ದರೂ ತಪ್ಪು ಕೆದುಕಿ ಕೆದುಕಿ ರಿಪೋರ್ಟ ಬರೆದು ಕಛೇರಿ ಅಲೆಯುವಂಗ ಮಾಡಿದ್ರು. ನಾವು ತರಿಸಬೇಕೆಂದಿದ್ದರೂ ಮುಖ್ಯಗುರುಗಳ ಕೋಪಕ್ಕೆ ಗುರಿಯಾಗುವೆವು ಎನ್ನುವ ಭಯದಲ್ಲಿದ್ದ ನಮಗೂ ಚಹಾ ತರಿಸದ ಎಫೆಕ್ಟ್ ಕಛೇರಿಗೆ ಅಲೆಯುವಂತೆ ಮಾಡಿತ್ತು.

ಒಂದರ್ಥದಲ್ಲಿ ಚಹಾ ವೆಜಟೇರಿಯನ್ ವೈನ್ ಇದ್ದಹಾಗೆ. ನಗಬೇಡಿ, ಯೋಚಿಸಿ ಹೇಳಿ.. ಚಹಾದಲ್ಲಿ ಅಲ್ಪಪ್ರಮಾಣದಲ್ಲಿ 'ಕೆಫಿನ್ ಇದೆ' ಅದು ಅಪಾಯಕಾರಿ ಎಂದರೂ ಹೆಂಡ ಕುಡಿದು ಸತ್ತವರಿದ್ದಾರೆ ಚಹಾ ಕುಡಿದು ಸತ್ತವರುಂಟೆ....? ಎಂತಹ ರಾಷ್ಟ್ರಪತಿಗಳು, ಮುಖ್ಯಮಂತ್ರಿಗಳು ಪ್ರಶಸ್ತಿ ಸತ್ಕಾರ ನೀಡುವ ಅಥವಾ ಬೇರೆ ದೇಶಗಳ ಅತಿಥಿಗಳನ್ನು ಗೌರವಿಸುವ ಸಂದರ್ಭದಲ್ಲಿ ಟೀ ಪಾರ್ಟಿ ಹಮ್ಮಿಕೊಳ್ಳುತ್ತಾರೆ..ಅದು ಅದಕ್ಕೆ ಕೊಟ್ಟ ಗೌರವ ತಾನೆ..? ಇತ್ತೀಚಿಗೆ ಕೆಲವು ವರ್ಷಗಳಿಂದ ಮಾನ್ಯ ಪ್ರಧಾನಿಯವರು 'ಚಾಯಪೇ ಚರ್ಚಾ' ಎನ್ನುವ ರೇಡಿಯೊ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ ಅಂದರೆ......ಚಹಾವನ್ನು ಅಂಡರ್ ಎಸ್ಟಿಮೇಟ್ ಮಾಡುವುದು ತಪ್ಪಲ್ಲವೇ?

ಇಂತಹ ಚಹಾದಲ್ಲಿ ಎಷ್ಟು ಬಗೆಗಳು....? ಲಿಸ್ಟ ಕೇಳಿ ಗಾಭರಿಯಾಬೇಕು! ಗ್ರೀನ್,

ಬ್ಲಾಕ್, ವೈಟ್, ಹರ್ಬಲ್,ಮಸಾಲ, ಲೆಮನ್, ಡಾರ್ಲಿಂಗ, ಜಿಂಜರ್, ಗೋಲ್ಡನ್, ನೀಲಗಿರಿ, ಮೀಟರ್, ಇರಾನಿ, ತಂದೂರಿ ಮೊದಲಾದ ಮೂವತ್ತಕ್ಕಿಂತಲೂ ಹೆಚ್ಚು ಬಗೆಯ ಟೀಗಳು ಅರ್ಥಾರ್ಥ ಚಹಾಗಳು ಇಂದು ಜಗತ್ತನ್ನ ಆಳತಿವೆ. ಹಿಂದಕ್ಕೆಲ್ಲ ಹೋಟೆಲ್‌ನಲ್ಲಿ ಉಪಹಾರಗಳಿಗೆ ಮಹತ್ವ ಇತ್ತು. ಚಹಾಗೆ ಅಷ್ಟಕಷ್ಟೆ ಸ್ಥಾನ. ಯಾವಾಗಲೋ ಸೋಸಿದ ಚಹಾ ಅನ್ನೆ ಕೊಡುತ್ತಿದ್ದರು. ಅದೆಲ್ಲ ಔಟ್ ಡೇಟ್ ಆಗಿದೆ. ಈಗ ಚಹಾಗಳಿಗಾಗಿಯೇ ಪ್ರತ್ಯೇಕ ರೋಡ್ ಸೈಡ್ ಸ್ಟ್ಯಾಂಡ್ಗಳಾಗಿವೆ. ಅಂಗಡಿಗಳಾಗಿವೆ. ಚಹಾ ಮಾಡಲು ಕೌಶಲ್ಯ ಬೇಕೆಂದೆನೂ ಇಲ್ಲ. ಅದಕ್ಕಾಗಿ ರೆಸಿಪಿ ಸಿದ್ಧ ಮಾಡಿಕೊಡುವ ಫ್ರಾಂಚಸಿಗಳು ಬಂದಿವೆ. ಅವರು ಹೇಳಿದ ಹಾಗೆ ಮಾಡಿದ್ರ ಮುಗಿತು ಚಹಾ ರೆಡಿ. 'ಚಾಯ್ ತಲಬ್, ಪಂಡಿತ ಚಾಯ್, ಟೀ ಮಚ್ಚಾ, ಕರವೀರ ಚಹಾ, ಪಪ್ಪು ಚಾಯವಾಲಾ, ಚಾಯಾ ಥೆಲಾ, ಚಾಯ್ ಪಾಯಂಟ್' ಮೊದಲಾದ ಪ್ರಾಂಚೇಸಿಗಳು ಸಣ್ಣ ಊರುಗಳಿಗೂ ಹರಡಿಕೊಳ್ಳುತ್ತಿವೆ. ಸುಮಾರು 3500 ಚಹಾ ಫ್ರಾಂಚೈಸಿ ಕಂಪನಿಗಳು ನಮ್ಮ ದೇಶದಲ್ಲಿ ಇವೆ ಎಂದರೆ ನಾವು ಎಂತಹ ಚಹಾಗುಡುಕರು!

ಇತ್ತೀಚಿಗೆ ಸಾಹಿತ್ಯಾಸಕ್ತ ಫ್ರಾಂಚೈಸಿಯೊಂದು 'ನುಡಿ ಕೆಫೆ' ಮೂಲಕ ಚಹಾ ಚಟ ಇರುವವರಿಗೆ ಓದುವ ಚಟ ಹಚ್ಚುವ ಪ್ರಯೋಗಕ್ಕೆ ಕೈ ಹಾಕಿದೆ. ಪುಸ್ತಕ ಕೊಂಡವರಿಗೆ ಉಚಿತ ಚಹಾವನ್ನು ತಮ್ಮ ಕೆಫೆಯಲ್ಲಿ ಕೊಡುತ್ತಿದೆ. ಇದು ಒಳ್ಳೆಯ ಚಿಂತನೆ. 'ನುಡಿ ಕೆಫೆ' ಈ ಯೋಚನೆಯನ್ನು ಎಲ್ಲಾ ಫ್ರಾಂಚೈಸಿಗಳು ಅಳವಡಿಸಿಕೊಂಡರೆ ಏನೆಲ್ಲಾ ಕ್ರಾಂತಿ ಆಗಬಹುದು. ಓದುವ ಚಟ ಹಿಡಿದರೆ ಮನುಷ್ಯರ ಮಾನಸಿಕ ಆರೋಗ್ಯ ಎಷ್ಟೆಲ್ಲಾ ಸುಧಾರಿಸಬಹುದು. ಕನ್ನಡದ ಪ್ರಕಾಶನಗಳು, ಇಂದಿರಾ ಕ್ಯಾಂಟಿನ್ ಉಸ್ತುವಾರಿಗಳು ಇಂತಹ ಪ್ರಯತ್ನ ಮಾಡಬೇಕು.

ನಮ್ಮ ಕಲ್ಯಾಣ ಕರ್ನಾಟಕದ ಭಾಗದಲ್ಲಿ 'ಜ್ಯೂಸ್ ಅಂಗಡಿ', 'ಐಸಕ್ರಿಮ್ ಅಂಗಡಿ', ಹೋಟೆಲ್‌ನ್ನೂ ಮಾಡಿ ಹಾಳಾದವರಿದ್ದಾರೆ ಟೀ ಮಾರಿ ಹಾಳಾದವರು ಇಲ್ಲವೆ ಇಲ್ಲ.... ಬೀಚಿಯವರು ಹೇಳೊ ಹಾಂಗ ನಮ್ಮಲ್ಲಿ ಎರಡೆ ಕಾಲ 'ಬೇಸಿಗೆ ಕಾಲ, ಅತಿ ಬೇಸಿಗೆ ಕಾಲ' ಇಂತಹ ಬೇಸಿಗೆಯ ವೈಭವದ ಬಿಸಿಲಿನಲ್ಲಿ ತುಂಬು ತುಳುಕುವುದು ಜ್ಯೂಸ್ ಅಂಗಡಿಗಳಲ್ಲ...ಟೀ ಅಂಗಡಿಗಳೆ...! ಅಂತಹ ಹಾಟ್ ಸಮಯದಲ್ಲೂ ತಂಪು ಬೇಕು ಎಂದು ಯೋಚಿಸುವುದೆ ಇಲ್ಲ...ಸೂರ್ಯ ನಿಗಿ ನಿಗಿ ಕೆಂಡದಾಂಗ ಆಗಿ ನೆತ್ತಿಮ್ಯಾಗ ಭರತನಾಟ್ಯ ಮಾಡತಿದ್ರೂ ಈ ತಂಬೆಳಕಿನಲ್ಲೂ ಚಹಾನೆ ಬೇಕು, ಅದೂ ಸುಡುತಿರಲೇಬೇಕು. ಜೊತಿಗೆ ಸಿಗರೇಟ್ ಸೇದೊದು ಬೇರೆ..

ನನಗೂ ಚಹಾಕ್ಕೂ ಎಲ್ಲಿಲ್ಲದ ನಂಟು. ಚಹಾಬಿಟ್ಟರೆ ಬದುಕಿಲ್ಲ ಎನ್ನುವಷ್ಟು ನನಗೆ ಅದರೊಂದಿಗೆ ಬಾಂಧವ್ಯ. ಅದು ಜೀನ್ಸ್ ಮೂಲಕ ಬಂದಿದೆಯೇನೋ ಗೊತ್ತಿಲ್ಲ..? "ನಿನ್ನ ಹೆಣ್ಣು ತಾತನ ಆಸ್ತಿಯಲ್ಲ ಬರಿ ಸಕ್ಕರಿ ಚಹಾ ಪುಡಿಗಾಗಿಯೆ ಹೋಯ್ತು..ನೀನು ಅದ ರಕ್ತದವ ಅಷ್ಟು ಕುಡಿಬ್ಯಾಡವೋ?" ಎಂದು ನಮ್ಮಪ್ಪ ಬಯ್ತಿದ್ದ... ಅದನ್ನು ನೆನೆಸಿಕೊಂಡಾಗಲೆಲ್ಲ....ನಮ್ಮ ತಾಯಿಯ ತವರುಮನೆಯವರು ಕಳೆದುಕೊಂಡ ಅಪಾರ ಪ್ರಮಾಣದ ಆಸ್ತಿ ನೋಡಿ ಕನಿಕರವಾಗುತ್ತದೆ. ನಾನು ಕುಡಿಯವುದು ಬಿಡಬೇಕು ಎಂದು ನಿರ್ಧಾರ ಮಾಡುತ್ತೇನೆ..... ಅವತ್ತಿನ ಪೂರ್ತಿ! ಮರುದಿನದಿಂದ ಯಥಾಪ್ರಕಾರ.... ತೀರ್ಥ ಸೇವನೆ ಸಾಂಗೋಪಾಂಗವಾಗಿ ನಡೆದಿರುತ್ತದೆ. ಹೆಂಡಗುಡುಕರ ತರಹದ 'ಚಹಾಕುಡುಕ' ಅನ್ನಿ.

ಬಾಲ್ಯದಾಗ ಒಂದು ಮದುವೆಗೆ ಹೋಗಿದ್ದೆ. ಮನೆಯಲ್ಲಿ ಚಹಾ ನೀರಾಗಿರುತಿತ್ತು.

ಅಂದಿನ ಆರ್ಥಿಕ ಪರಸ್ಥಿತಿಗೆ ಅನಿವಾರ್ಯ ಇತ್ತು. ಅಲ್ಲಿ ಗಟ್ಟಿ ಹಾಲಿನಿಂದ ಮಾಡಿದ ಚಹಾ ಕೇಳಬೇಕೆ....? ಬರೋಬ್ಬರಿ ತಂಬಿಗೆಗಿಂತ ಹೆಚ್ಚು ಕುಡಿದು ಬಿಟ್ಟಿದ್ದೆ...! ಕುಡಿಯುವಾಗ ಏನಾಗದಿದ್ದರೂ ರಾತ್ರಿ ಹೊಟ್ಯಾಗಿಂದು ಕೇಳಬೇಕಲ್ಲ.....? ಕೆಳಭಾಗದಿಂದ ಪಂಪಸೆಟ್ ಹಚ್ಚಿ ಹೊಡೆದ ಹಾಗೆ ಹೊಟ್ಟೆ ಝಾಡಿಸಿದ್ದೆ ಝಾಡಿಸಿದ್ದು..ಮರುದಿನ ಫುಡ್ ಪಾಯಜನ್‌ನಿಂದ ಮನೆಯಲಿ ನಾಲ್ಕೈದು ಮಂದಿ ಆಸ್ಪತ್ರೆಗೆ ಅಡ್ಮಿಟ್ ಆದಾಗ ನಾನು ಆ ಲೆಕ್ಕದಲ್ಲಿ ಉಳಕೊಂಡಿದ್ದೆ...ನಿಜವಾದ ಕಾರಣ ಗೊತ್ತಾಗಿದ್ದರೆ!

ಇನ್ನೊಮ್ಮೆಯೂ ಹರ್ನಿಯಾ ಕಾರಣದಿಂದ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಅಡ್ಮಿಟ್ ಆಗಿ ಮನೆಗೆ ಬಂದಾಗ, ಮಾತಾಡಿಸಲು ಬಂದವರಿಗಾಗಿ ಮಾಡುತ್ತಿದ್ದ ಚಹಾವನ್ನು ಅವರು ಕುಡಿಯುವಾಗ 'ನೀವು ಕುಡಿಯಿರಿ ಒಬ್ಬರೆ ಹೇಗೆ ಕುಡಿಯೋದು?' ಎಂದು ಎಲ್ಲರೂ ಒತ್ತಾಯಿಸುತ್ತಿದ್ದ ಪರಿಣಾಮವಾಗಿ ಪಿತ್ತ ಜಾಸ್ತಿ ಆಗಿ....ಲೋಕವೇ ತಿರುಗುವಂತಹ ತಲೆಸುತ್ತು... ಬಂದು ಮತ್ತೊಮ್ಮೆ ಆಸ್ಪತ್ರೆಗೆ ದಾಖಲಾಗಿ...ಲೈಫನಲ್ಲಿ ಚಹಾ ಕುಡಿಯಬಾರದೆಂದು ಆ ಕ್ಷಣದಲ್ಲಿ ನಿರ್ಣಯಿಸಿದರೂ.....ಆರಾಮದ ಮೇಲೆ ಮತ್ತೆ ಮೊರೆಹೋಗುವ ಡ್ರಗ್ಸ್ ಅಡಿಟರಂತೆ ಮರಳು ಶರಣಾಗಿದ್ದು ಸುಳ್ಳಲ್ಲ.

ಇಂತಪ್ಪ ವರ್ಣಿಸಿದ ಚಹಾದ ಉಗಮ ನೋಡಕೋದ್ರೆ ಹೊಟ್ಟೆ ಉರಿಲಿಕ್ಕೆ ಸ್ಟಾರ್ಟ ಆಗುತ್ತದೆ.. ಚಹಾದ ಬರ್ಥ ಪ್ಲೇಸ್ ಈಗಾಗಲೆ ಏಳು ವರ್ಷದ ಹಿಂದೆ ಜಗತ್ತನ್ನೆ ಲಾಕ್‌ಡೌನ್ ಮಾಡಿಸಿದ ಕರೋನಾದ ಮೂಲ ಸ್ಥಳವೇ...! ಚೀನಿ ಮಂದಿ, ಏನಾ ಮಾಡಲಿ ಅಟ್ರಾಕ್ಟ ಆಗೋಂಗಾ ಮಾಡತಾರ. ಕರೋನಾ ಅದು ವೈರಸ್ಸು. ಅಲಕ್ಷ ಮಾಡಿದ್ರ ಸಾಯಸೊತನ ಬಿಡಲ್ಲ. ಆದರೆ ಚಹಾ ಒಂದು ವೈರಸ್ ತರಹನ ಅನ್ನಿ. ಚಟ ಅಂಟಿಕೊಂಡ್ರ ಸಾಯೋವರೆಗೂ ಬಿಡೊಕಾಗಲ್ಲ.

'ಶೆನ್ನಾಂಗ' ಎನ್ನುವವನು ಚೈನಾದ ಪುರಾಣ ಕಾಲದ ರಾಜ. ಅವನೊಬ್ಬ ಕೃಷಿ ಸಂಶೋಧಕ ಹಾಗೂ ವೈದ್ಯ.. ಕ್ರಿ.ಪೂ 2700ರಲ್ಲಿ ಕುಡಿಯುವ ನೀರನ್ನು ಕುದಿಸುತ್ತಿದ್ದಾಗ ಅದರಲ್ಲಿ ಎರಡು ಎಲೆಗಳು ಬಿದ್ದು ನೀರನ್ನು ಕಂದುಬಣ್ಣಕ್ಕೆ ತಿರುಗಿಸಿದವಂತೆ. ಕುತೂಹಲದಿಂದ ಕುಡಿದಾಗ ಅವನಲ್ಲಿ ಒಂದು ಬಗೆಯ ಚೈತನ್ಯ ಬಂತಂತೆ...ಅದನ್ನು ಅವನು ಮುಂದೆ ಅಭಿವೃದ್ಧಿ ಪಡಿಸಿದ ಎಂಬ ಮಾತಿದೆ... ಹದಿನೆಂಟನೆ ಶತಮಾನದಲ್ಲಿ ಚೈನಾದ ಚಹಾ ಬೆಳೆಯ ಪ್ರಾಬಲ್ಯವನ್ನು ಮುರಿಯಲೆಂದೆ ಬ್ರಿಟೀಷರು....ಚಹಾ ಬೆಳೆಯಲು ಪೂರಕವಾದ ನಮ್ಮ ನೆಲದ ಆಸ್ಸಾಂ ಕಣಿವೆಗಳಲ್ಲಿ ಚಹಾದ ಕೃಷಿಯನ್ನು ಆರಂಭಿಸಿದರು ಎನ್ನುವ ಮಾತು ಇದೆ. ಅಲ್ಲಿಂದಲೇ ಅಧಿಕೃತವಾಗಿ ಚಹಾ ಭಾರತವನ್ನು ಪ್ರವೇಶಿಸಿತು ಎನ್ನುವುದಾದರೂ ಅದನ್ನು ಪೂರ್ಣವಾಗಿ ನಂಬಲಿಕ್ಕಾಗದು. ಕಷಾಯ ಕುಡಿಯುವ ಸಂಪ್ರದಾಯ ಅನಾದಿ ಕಾಲದಿಂದಲೂ ನಮ್ಮಲ್ಲಿ ಇದೆ.... ಐತಿಹ್ಯಗಳ ಪ್ರಕಾರ ಗೌತಮ ಬುದ್ಧ ಮೊದಲ ಬಾರಿಗೆ ಚಹಾ ಸೇವಿಸಿದನೆಂಬ ಪ್ರತೀತಿ ಇದೆ. ಅದೇನೆ ಇರಲಿ 'ಕೆಮಿಲಿಯಾ ಸಿನೆನ್ಸಿಸ್' ಎನ್ನುವ ಕಾಡು ಸಸ್ಯದ ಪೇಯವನ್ನು ಔಷಧಿ ರೂಪದಲ್ಲಿ ಕೊಡುತ್ತಿದ್ದ ಬಗೆಗೆ ನಮ್ಮ ಆಯುರ್ವೇದದಲ್ಲಿ ಉಲ್ಲೇಖವಿದೆ. ಎಲೆಗಳನ್ನು ಕುದಿಸಿಕೊಂಡು ಕುಡಿಯುವ ಪದ್ದತಿ ನಿಜವಾದ ಚಹಾ ಪದ್ದತಿ...ಆದರೆ ಬ್ರಿಟೀಷರ ಅವಧಿಯಲ್ಲಿ ಅದಕ್ಕೆ ಹಾಲು ಸೇರಿಸಿ ಕುಡಿಯುವ ಪದ್ದತಿ ತಂದರು. ಈಗ ಅದು ಜನಜನಿತವಾಗಿದೆ...

ಬಾಲ್ಯದಲ್ಲಿ ಟಿವಿಯಲ್ಲಿ ಬರುತ್ತಿದ್ದ ಜಾಹಿರಾತೊಂದರಲ್ಲಿ ಮಲೆಯಾಳಿ ನಟ ಮೋಹನ್‌ಲಾಲ್ ಚಂದಾಗಿ 'ಉಯರಂ ಕೂಡುಂದೋರುಂ ಚಾಯಯುಡೆ ಸ್ವಾದಂ ಕೂಡುಂ' ಎಂದು ಹೇಳುತ್ತಿದ್ದರು. ಆ ಚಹಾ ಜಾಹಿರಾತನ್ನು ಊರು ಹೊಡೆದಿದ್ದ ನನಗೆ

ಅರ್ಥ ಗೊತ್ತಾಗಿದ್ದು ಕಳೆದ ಎರಡು ವರ್ಷಗಳ ಹಿಂದೆ ಕೊಚ್ಚಿಗೆ ಪ್ರವಾಸಕ್ಕೆ ಹೋದಾಗ ನನಗೂ ಮಲಯಾಳಿ ಬರುತ್ತದೆ ಎಂದು ಬಟ್ಲರ್ ಭಾಷೆಯಲ್ಲಿ ಕೊಚ್ಚಿಕೊಂಡಿದ್ದೆ. ಅದರ ಅರ್ಥ 'ಎತ್ತರ ಹೆಚ್ಚಾದಂತೆ ಚಹಾದ ರುಚಿಯೂ ಹೆಚ್ಚಾಗುತ್ತದೆ' ಎಂದು ಮಿತ್ರರೊಬ್ಬರು ಹೇಳಿದ್ದ ನೆನಪು. ಅದಕ್ಕೆ ಪೂರಕವಾಗಿ ಆಸ್ಸಾಂ ಕಣಿವೆಗಳಲ್ಲಿ, ಡಾರ್ಜಲಿಂಗ್, ನೀಲಗಿರಿ ಬೆಟ್ಟಗಳಲ್ಲಿ, ನಮ್ಮ ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ಚಹಾದ ಬಗೆಗೆ ಚಹಾ ಪುಡಿ ತಯಾರಿಕಾ ಕಂಪನಿಗಳು 'ನಮ್ಮದು ಹೆಚ್ಚು ಸ್ವಾದ.. ನಮ್ಮದು ಹೆಚ್ಚು ಸ್ವಾದ' ಎಂದು ಪೈಪೋಟಿ ನಡೆಸುವವೇನೊ? ಬಲ್ಲವರು ಹೇಳಬೇಕಷ್ಟೆ.....

ಚಹಾ ಜಾಹಿರಾತುಗಳಲ್ಲೂ ಎಂತಹ ವೈವಿಧ್ಯ..... ಇತ್ತಿಚೀಗೆ ನಮ್ಮನ್ನು ಅಗಲಿದ ತಬಲಾ ಮಾಂತ್ರಿಕ ಝಾಕೀರ್ ಹುಸೇನ್ ಸೊಗಸಾಗಿ ತಬಲ ಬಾರಿಸುತ್ತಾ 'ವಾಹ್ ತಾಜ್' ಎನ್ನುತ್ತಾನೆ, ಸ್ಫೂರ್ತಿ ಎನ್ನುವಂತೆ...ಇನ್ನೊಂದರಲ್ಲಿ ರೂಪದರಶಿಯೊಬ್ಬಳು 'ಬಣ್ಣ ರುಚಿ ಶಕ್ತಿ' ಎಲ್ಲವೂ ಇದರಲ್ಲಿದೆ ಎಂದು ಚಹಾವನ್ನು ಬಿಂಬಿಸುತ್ತಾಳೆ....ಮತ್ತೊಂದರಲ್ಲಿ ಟಿ.ವಿ ನೋಡುತ್ತ ಕುಳಿತಿದ್ದ ಸೊಸೆ ನೋಡಿ ಅತ್ತೆ ಬೈಯ್ಯುತ್ತಿರುವಾಗಲೆ ಚಹಾ ಕುಡಿದು ಎನರ್ಜಿ ಬಂದು ಅತ್ತೆ ಚಾಳಿಸು ಒರೆಸಿಕೊಂಡು ಹಾಕಿಕೊಳ್ಳುವುದರೊಳಗಾಗಿ ಕೆಲಸ ಮಾಡಿ ಮುಗಿಸಿ ವಿಸ್ಮಯ ಹುಟ್ಟಿಸುತ್ತಾಳೆ. ಇನ್ನೂ ಕೆಲವು ಜಾಹಿರಾತುಗಳಲ್ಲಿ 'ಚಾಹಾ ಪೀಯೆ ಅಪನಾಪನ್ ಬಡಾಯಿಯೆ' 'ತೊಡಾಸ ವಕ್ತ ಚುರಾಕೆ ರಖೊ' 'ರಿಶತೊಮೆ ಗರ್ಮಾಹಟ್ ಲಾಯೆ' ಅನ್ನುವಂತಹ ಕಾವ್ಯಾತ್ಮಕ ಸಾಲುಗಳು ಕೇಳಿಸುತ್ತವೆ. ಇತ್ತೀಚಿಗೆ ಧರ್ಮಗಳ ನಡುವೆ ಬಾಂಧವ್ಯ ಬೆಸೆಯುವ, ತೃತೀಯ ಲಿಂಗಿಗಳ ಬಗ್ಗೆ ಗೌರವ ಮೂಡಿಸುವ, ಪತಿಪತ್ನಿಯರಲ್ಲಿ ಬಾಂಧವ್ಯ ಬೆಸೆಯುವ, ಚಹಾ ಜಾಹಿರಾತುಗಳು ಗಮನ ಸೆಳೆಯುತ್ತಿವೆ. ಹಲವು ಜಾಹಿರಾತುಗಳು ಪ್ರಚಾರ ವಿಭಿನ್ನವಾಗಿ ಮಾಡಿದರೂ ಚಹಾದ ರುಚಿ ನೀರು, ಸಕ್ಕರಿ, ಚಹಾಪುಡಿ, ಹಾಲು ಹಾಕಿ ಕುದಿಸಿದರಷ್ಟೆ ಆಗೊಲ್ಲ, ಮಾಡುವ ಕೈಗಳ ಮೇಲಿರುತ್ತದೆ ಎಂಬುದಂತೂ ಅಂತಿಮ ಸತ್ಯ. ಚಹಾದ ವೆರೈಟಿ ಅವರವರ ಭಾವ ಬಕುತಿಯಂತೆ...

ಚಹಾದ ಬಗ್ಗೆ ಅನೇಕರು ಕಥೆಗಳನ್ನು ಬರೆದಿದ್ದಾರೆ ಪದ್ಯಗಳನ್ನು ಗೀಚಿದ್ದಾರೆ.. ಚಹಾ ಟೈಟಲ್ ಮ್ಯಾಲಿನ ಸಾಕಷ್ಟು ಪುಸ್ತಕಗಳು ಬಂದಿವೆ. ಬೀಚಿಯವರ ಕೃತಿ 'ಆರದ ಚಹಾ' ಸಿದ್ಧಲಿಂಗ ಪಟ್ಟಣಶೆಟ್ಟಿಯವರ 'ಚಹಾದ ಜೋಡಿ ಚುಡಾದಂಗ' ಪ್ರಸಿದ್ಧ ಅಂಕಣ.

ಚಹಾ ಕ್ಯಾಲೋರಿ ಇಳಿಸುತ್ತದೆ, ಸಂಧಿವಾತ, ಸೋರಿಯಾಸಿಸ್, ಹೃದಯ ಸಂಬಂಧಿ ಕಾಯಿಲೆ ಬರದಂತೆ ನೋಡಿಕೋಳ್ಳುತ್ತದೆ. ಹಾಗೆ ಹೀಗೆ ಲಾಭಗಳು ಇವೆ ಎಂದರೂ ಆಸಿಡಿಟಿ ಮಾಡುತ್ತೆ ಎಂದು ಚಹಾವನ್ನು ದ್ವೇಷಿಸುವವರು ಇದ್ದಾರೆ. ಏನೇ ಇರಲಿ ಚಹಾ ಹಲವರಿಗೆ ಅನಿವಾರ್ಯತೆಗಳಲ್ಲಿ ಒಂದು. ಊಟ ನಾಷ್ಟ ಇರದಿದ್ದರೂ ಚಹಾ ಇದ್ದರೆ ಅದರ ಗತ್ತೆ ಬೇರೆ..ಸ್ವಲ್ಪ ಪೆಟ್ರೋಲ್ ಇದ್ರೂ ಕಿ.ಮಿ ಓಡುವ ಬೈಕನಂಗೆ....ಎರಡು ತಾಸು ಊಟವನ್ನು ಮುಂದಕ್ಕೆ ಹಾಕುವ ಶಕ್ತಿ ಇದೆ. ಅಂದ ಹಾಗೆ ನನಗೂ ಬಹಳ ಹೊತ್ತು ಆಯ್ತು ಚಹಾ ಸೇವಿಸದೆ...ಬರಲೇ....? ■

ಕೆಲವೊಮ್ಮೆ ಚಹಾ ಚಹಾ ರುಚಿಯೇ ಇರುತ್ತದೆ. ಕೆಲವೊಮ್ಮೆ ಕಾಫೀ ಕಾಫೀ ರುಚಿಯಂತೆಯೇ ಇರುತ್ತದೆ. ಇತ್ತ ಚಹಾ ರುಚಿಯೂ ಇಲ್ಲದ ಅತ್ತ ಕಾಫೀ ರುಚಿಯೂ ಇಲ್ಲದ ಪೇಯವನ್ನು ಕಾಟಿಫೀ ಎನ್ನಬಹುದೇ ?

# ಬಾಲ್ಕಿಯ 'ಗೊಟಕ್' ಅನುಭವ !

ಚಿತ್ರಾ ರಾಮಚಂದ್ರನ್

"ವಚ್ಚು ! ಬೇಗ ಬಾ ! ಇದನ್ನ ನೋಡು !"

"ಬಂದೆ ಬಂದೆ ತಡೀರಿ ! ಕಾಫಿ ಮಾಡ್ತಿದ್ದೀನಿ !" ಬಾಲಕೃಷ್ಣ ಅವರಿಗೆ ಅಡುಗೆಮನೆಯಿಂದ ಉತ್ತರಿಸಿದಳು ಅವರ ಧರ್ಮ ಪತ್ನಿ ವಚ್ಚು ಎಂಬ ವತ್ಸಲಾ.

"ಕಾಫಿ ಹಾಗಿರ್ಲಿ ! ಒಂದು ನಿಮಿಷ ಬಂದು ಈ ಸುದ್ದಿ ನೋಡಿ ಹೋಗು !" ಕೈಯಲ್ಲಿ ಅಂದಿನ ದಿನಪತ್ರಿಕೆ ಹಿಡಿದು ಕುಳಿತಲ್ಲೇ ಚಡಪಡಿಸುತ್ತಿದ್ದರು ಬಾಲ್ಕಿ ಎಂಬ ಬಾಲಕೃಷ್ಣ.

"ಪರಿಚಯದವರು ಯಾರಾದ್ರೂ ಗೊಟಕ್ ಅಂದ್ಬಿಟ್ರೇ ?" ವೇಗ ಹೆಜ್ಜೆ ಹಾಕುತ್ತಾ ಬಳಿ ಬಂದು ಗಂಡ ಹಿಡಿದಿದ್ದ ದಿನಪತ್ರಿಕೆಯನ್ನು ಇಣುಕಿ ನೋಡಿದಳು ವತ್ಸಲಾ.

"ಇಲ್ನೋಡು ! ದೊಡ್ಡ ಫೋಟೋ ಹಾಕಿ ಶ್ರದ್ಧಾಂಜಲಿ ಪ್ರಕಟಿಸಿದ್ದಾರೆ ! ಇವರು ನಿನ್ನ ಸ್ನೇಹಿತೆ ಚಂಚಲಾ ಅಲ್ವೇ ? " ಕಣ್ಣು ಕಿರಿದು ಮಾಡಿಕೊಂಡು ಆ ಫೋಟೋವನ್ನೇ ದಿಟ್ಟಿಸುತ್ತ ಪ್ರಶ್ನಿಸಿದರು ಬಾಲ್ಕಿ.

"ಅಯ್ಯೋ ! ಅಯ್ಯೋ ! ಬಿಡ್ತು ಅನ್ನಿ ! ಚಂಚು ಗಟ್ಟಿಮುಟ್ಟಾಗಿ ಚೆನ್ನಾಗಿದ್ದಾಳೆ ಕಣ್ರೀ ! ನಿನ್ನೆಯಷ್ಟೇ ಕಾಲ್ ಮಾಡಿ ಒಂದೆರಡು ಮೂರು ಗಂಟೆ ಕಾಲ ಮಾತಾಡಿದ್ಲು! ಹೆಸರು ಸರಿಯಾಗಿ ನೋಡಿ ! ಬೇರೆ ಯಾರದ್ದೋ ಒಬಿಚುಅರಿ ನೋಡಿ ಚಂಚಲಾನ ಗೊಟಕ್ ಮಾಡ್ಬಿಟ್ರಲ್ಲ ನೀವು !"

"ಓ ! ಬಿಡ್ತು ! ಬಿಡ್ತು ! ಸಾರಿ ! ಸಾರಿ ! ನಿನ್ನ ಫ್ರೆಂಡ್ ನೂರು ವರ್ಷ ಬದುಕಿ ಬಾಳ್ತಾಳೆ ಬಿಡು !"

"ನಿಮ್ಮ ಫಿಸಿಯೋ ಥೆರಪಿಸ್ಟ್ ಬರೋ ಹೊತ್ತಾಯ್ತು ! ಕಾಫಿ ಕುಡಿದು ತಯಾರಾಗಿ. ಉಳಿದ ಒಬಿಚು ಅರಿಗಳನ್ನ ಆಮೇಲೆ ನಿಧಾನವಾಗಿ ನೋಡುವಿರಂತೆ !" ನಗು ಮುಖದೊಂದಿಗೆ ತನ್ನ ಕೆಲಸ ನೋಡಲು ಹೋದಳು ವತ್ಸಲಾ .

ಲಕ್ಷಣವಾದ ಮನೆ, ಪ್ರೀತಿಯ ಮಡದಿ, ಕಾಳಜಿ ತೋರುವ ಮಕ್ಕಳು, ರುಚಿಯಾದ ಊಟ, ಸುಖವಾದ ನಿದ್ರೆ, ಆಪ್ತ ಸ್ನೇಹಿತರು ! ಪುನರುಜ್ಜೀವನಗೊಳಿಸಲ್ಪಟ್ಟ ಕೆರೆಯ ಸುತ್ತ ವಾಕಿಂಗ್ ! ಸ್ನೇಹಿತರೊಂದಿಗೆ ಕಟ್ಟೆಯಲ್ಲಿ ಕುಳಿತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಷಯಗಳ ಬಗ್ಗೆ 'ಯು ಏನ್' ಸಮ್ಮೇಳನವನ್ನು ಮೀರಿಸುವಂತಹ ಸ್ವಾರಸ್ಯಕರವಾದ ಚರ್ಚೆ ! ಬಾಲ್ಕಿಯ ನಿವೃತ್ತ ಜೀವನ ನೆಮ್ಮದಿಯಾಗಿ ಸಂತೋಷದಿಂದ ಸಾಗುತ್ತಿತ್ತು.

ಎಷ್ಟೇ ಗಟ್ಟಿಮುಟ್ಟಾಗಿದ್ದರೂ , ಆರೋಗ್ಯವಾದ ಚಟುವಟಿಕೆಗಳನ್ನು ಅನುಸರಿಸುತ್ತಿದ್ದರೂ ಮನುಷ್ಯನಾಗಿ ಹುಟ್ಟಿದಮೇಲೆ ಆಗೊಮ್ಮೆ ಈಗೊಮ್ಮೆ ಸಣ್ಣ ಪುಟ್ಟ ಅರೋಗ್ಯ ಸಮಸ್ಯೆಗಳು ತಲೆ ಎತ್ತದೆ ಇರುತ್ತದೆಯೇ ? ವಿಧಿಯ ಈ ನಿಯಮಕ್ಕೆ ಬಾಲ್ಕಿ ಮಾತ್ರ ಹೊರತಾಗಿರಲು ಹೇಗೆ ಸಾಧ್ಯ? ವರುಷಕ್ಕೆ ಒಂದೋ ಎರಡೋ ಸರ್ತಿ ಆಸ್ಪತ್ರೆ ಪ್ರವಾಸ ಅನಿವಾರ್ಯವಾಗಿದ್ದಿತು. ಸ್ಕ್ಯಾನಿಂಗ್, ಶಸ್ತ್ರ ಚಿಕಿತ್ಸೆ, ರಕ್ತ ಪರೀಕ್ಷೆ ಮುಂತಾದ ನೂರಾರು ತಪಾಸಣೆಗಳಿಗೆ ಹೆದರುತ್ತಲೇ ಮೈ ಒಡ್ಡಬೇಕಿತ್ತು. ಅಂತಹ ಸಮಯಗಳಲ್ಲಿ 'ಓ ! ಇದು ಬಿಗಿನಿಂಗ್ ಆಫ್ ದಿ ಎಂಡ್ ಇರಬಹುದೇ ? ಈ ಬಾರಿ ತಾನು ಗೊಟಕ್ ಅಂದುಬಿಡುತ್ತೇನೋ ಏನೋ ?' ಎಂಬ ಆತಂಕ ! ಆಸ್ಪತ್ರೆಯ ವಾಸ ಮುಗಿದನಂತರ, ಮನೆಗೆ ಹಿಂದಿರುಗುವ ಸಮಯಗಳಲ್ಲಿ' ಅಯ್ಯೋ! ಇಷ್ಟೇನಾ ? ಇದಕ್ಕೆ ಯಾಕೆ ಅಷ್ಟು ಹೆದರಿದೆ ?' ಎಂದು ಅವರು ನಾಚುತ್ತಿದ್ದರೆ,

'ಹೌದು ! ಇಷ್ಟೇನೇ !' ಎಂದು ನಗುತ್ತಿದ್ದಳು ವಚ್ಚು.

ಯಾರಿಗಾಗಿಯೂ ನಿಲ್ಲದ ಕಾಲ ಸಾವಿರಾರು ಎಂ ಪಿ ಹೆಚ್ ವೇಗದಲ್ಲಿ ಉರುಳುತ್ತಲೇ ಇತ್ತು. ಅನಿವಾರ್ಯ ಕಾರಣಗಳಿಂದ ಸ್ನೇಹಿತರ ಕಟ್ಟೆ ಒಕ್ಕೂಟವನ್ನು ಮುಂದುವರಿಸಲಾಗಲಿಲ್ಲ. ಒಬ್ಬೊಬ್ಬರಿಗೆ ಒಂದೊಂದು ವಿಧವಾದ ತಾಪತ್ರಯ. ಹಾಗಾಗಿ ವಾಟ್ಸಾಪ್ಪ್ ಕಟ್ಟೆ ಮೂಲಕ ಎಲ್ಲ ಸ್ನೇಹಿತರೂ ಸಂಪರ್ಕದಲ್ಲಿ ಇದ್ದರು. ಪದ್ದು ಎಂಬ ಪದ್ಮನಾಭ ದೈವವಶನಾದ ಸುದ್ದಿಯನ್ನು ಮೆಸಂಜರಲ್ಲಿ ನೋಡಿ ಬಾಲ್ಕಿಗೆ ಆಘಾತವಾಯಿತು. 'ಅಯ್ಯೋ ! ನಮ್ಮ ಪದ್ದು ಹೋದನೇ ? ಪ್ರವಾಸದ ಬಗ್ಗೆ, ಸಿನೆಮಾ ಬಗ್ಗೆ, ಹೋಟೆಲ್ ತಿಂಡಿಗಳ ಬಗ್ಗೆ, ಓದಿದ ಪುಸ್ತಕಗಳ ಬಗ್ಗೆ, ಇನ್ನಿತರ ಅನೇಕ ವಿಷಯಗಳ ಬಗೆಗಿನ ತನ್ನ ಅನುಭವಗಳನ್ನು ಸ್ನೇಹಿತರಿಗೆ ಸವಿಸ್ತಾರವಾಗಿ ವಿವರಿಸುವುದರಲ್ಲಿ ಪದ್ದು ನಿಪುಣನಾಗಿದ್ದ! ಅವನು ಬದುಕಿದ್ದಿದ್ದರೆ ತನ್ನ 'ಗೊಟಕ್' ಅನುಭವದ ಬಗ್ಗೆ ರೋಚಕವಾದ ವಿವರಣೆ ನೀಡುತ್ತಿದ್ದನೋ ಏನೋ ?' ಎಂದು ಪರಿತಪಿಸಿತು ಬಾಲ್ಕಿಯ ಮನಸ್ಸು.




ಎಲ್ಲ ಸ್ನೇಹಿತರೂ ಸೇರಿ ಆಪ್ತ ಮಿತ್ರ ಪದ್ಮನಾಭನಿಗೆ ದಿನಪತ್ರಿಕೆಯಲ್ಲಿ ಶ್ರದ್ಧಾಂಜಲಿ ಹಾಕಿಸಿದರು. ಅಂದು ಶುರುವಾಯಿತು ಬಾಲ್ಕಿಯ ಶ್ರದ್ಧಾಂಜಲಿ ಓದುವ ಗೀಳು. ಅರಿತವರು, ಅರಿಯದವರು, ಸ್ನೇಹಿತರು, ಬಂಧುಗಳು, ರಾಜಕಾರಣಿಗಳು, ಅತಿ ಮುಖ್ಯ ವ್ಯಕ್ತಿಗಳು, ಸಾಮಾನ್ಯರು ! ಯಾರದ್ದೇ ಆಗಿರಲಿ ! ಬಾಲ್ಕಿ ಮೊದಲು ನೋಡುವುದು ಅವರುಗಳ ಶ್ರದ್ಧಾಂಜಲಿ ಪ್ರಕಟವಾಗಿದ್ದ ಪುಟವನ್ನು !

ದಿನ ಬೆಳಗಾದರೆ ಶ್ರದ್ಧಾಂಜಲಿ ಪುಟವನ್ನು ನೋಡನೋಡುತ್ತ, ಬಾಲ್ಕಿಗೆ 'ಗೊಟಕ್' ಅನುಭವ ಹೇಗಿರಬಹುದು ಎಂಬ ಭಯಂಕರ ಕುತೂಹಲ ಹೆಚ್ಚಾಗುತ್ತ ಹೋಯಿತು.

ಕಠೋಪನಿಷದ್ ಹೇಳುವ ನಚಿಕೇತನ ಕಥೆ, ಭಗವದ್ಗೀತಾ ಭಾಷ್ಯ ಮುಂತಾದ ಅನೇಕ ಪುಸ್ತಕಗಳನ್ನು ರುಬ್ಬಿ ಕುಡಿದಾಗಿತ್ತು. ಸತ್ತು ಬದುಕಿದವರ ಅನುಭವಗಳನ್ನು ಯುಟ್ಯೂಬಿನಲ್ಲಿ ನೋಡಿಯಾಯಿತು. ಆದರೆ 'ಗೊಟಕ್' ಅನುಭವ ಹೇಗಿರುತ್ತದೆ ಎಂಬ ಬಾಲ್ಕಿಯ ಪ್ರಶ್ನೆಗೆ ಇಲ್ಲಿಯವರೆಗೂ ಯಾವ ಸ್ಪಷ್ಟವಾದ ಉತ್ತರವೂ ಸಿಕ್ಕಿಲ್ಲ ! ರಕ್ತದ ಒತ್ತಡ ಹೆಚ್ಚಿದ್ದೇ ಕಂಡ ಫಲ ! ಬಾಲ್ಕಿಯ ಗಮನವನ್ನು ಬೇರೆ ಕಡೆ ತಿರುಗಿಸಲು ಪರಿವಾರದವರು ಮಾಡದ ಸಾಹಸವಿಲ್ಲ.

"ಅಪ್ಪ ! ಇವತ್ತು ಕ್ರಿಕೆಟ್ ಮ್ಯಾಚ್ ಇದೆ ! ಇಂಡಿಯಾ ವರ್ಸಸ್ ನ್ಯೂಜಿಲ್ಯಾಂಡ್! ನೋಡೋಣವೇ ?" ಎಂದ ಪಾಚು ಅಲಿಯಾಸ್ ಪಾರ್ಥಸಾರಥಿ.

"ಹೂಂ ಕಣೋ ! ಹಾಗೆ ನಿಮ್ಮಮ್ಮನ್ನ ಬಿಸಿ ಬಿಸಿ ಈರುಳ್ಳಿ ಪಕೋಡ ಮಾಡಕ್ಕೆ ಹೇಳು ! ಚಹಾ ಸಹ ಇರ್ಲಿ ! ನಿದ್ದೆಗಣ್ಣಿಲ್ದೆ ಚೆನ್ನಾಗಿ ನೋಡ್ಬೋದು !" ಉತ್ಸಾಹದಿಂದ ನುಡಿದರು ಬಾಲ್ಕಿ. "ಈಗ ಸ್ವಲ್ಪ ರೆಸ್ಟ್ ಮಾಡಿ. ತುಂಬಾ ಹೊತ್ತು ಕೂತು ನೋಡ್ಬೇಕಲ್ಲ ! ಸ್ಟ್ರೈನ್ ಆಗತ್ತೆ."

"ರೆಸ್ಟ್ ಮಾಡೋಂತಾದ್ದು ಏನಾಗಿದ್ಯೋ ನನಗೆ ? ನನ್ನ ಆಯುಸ್ಸು ತುಂಬಾ ಗಟ್ಟಿ ! ಸೆಂಚುರಿ ಹೊಡೆದೇ ಹೋಗೋದು ನಾನು ! ನೀನೇನು ಭಯಪಡ್ಬೇಡ." ಎನ್ನುತ್ತ ಪಕ ಪಕ ನಕ್ಕರು ಬಾಲ್ಕಿ.

ಘಮಘಮಿಸುವ ಪಕೋಡ ಮತ್ತು ಚಹಾ ಲೋಟಗಳು ಜೋಡಿಸಿದ್ದ ತಟ್ಟೆಯನ್ನು ಹಿಡಿದು ಬಂದಳು ಸೊಸೆ.

"ಮ್ಯಾಚ್ ನೋಡಕ್ಕೆ ಇಷ್ಟವಿಲ್ದಿದ್ರೆ ಬಿಡ್ಲಿ ! ಉದ್ಘಾಟನಾ ಸಮಾರಂಭವನ್ನಾದ್ರೂ ನೋಡು ಬಾ ಅಂದ್ರೆ , ನಿಮ್ಮತ್ತೆಗೆ ಅದ್ರಲ್ಲೂ ಆಸಕ್ತಿ ಇಲ್ವಲ್ಲಮ್ಮ !" ಎಂದು ಅಂಗಲಾಚುತ್ತ, ಒಂದು ಬಿಸಿ ಪಕೋಡ ತೆಗೆದು ಬಾಯಿಗೆ ಹಾಕಿಕೊಂಡರು ಬಾಲ್ಕಿ.

ಪಕೋಡ ತಿನ್ನುತ್ತ ಚಹಾ ಹೀರುತ್ತ ಬಲು ಉತ್ಸಾಹದೊಂದಿಗೆ ಮ್ಯಾಚ್ ನೋಡುತ್ತ ಸಂಭ್ರಮಿಸುತ್ತಿದ್ದರು ಬಾಲ್ಕಿ. ಗೆಲುವು ನಮದು ಎಂದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಮಗ ಮತ್ತು ಸೊಸೆಯೊಂದಿಗೆ ಕುಳಿತಿದ್ದ ಬಾಲ್ಕಿ ಎದ್ದು ನಿಂತು ಚಪ್ಪಾಳೆ ತಟ್ಟಿದರೆ, ಪಾಚು ಗಟ್ಟಿಯಾಗಿ ಸೀಟಿ ಹೊಡೆದಿದ್ದ ! ತಂದೆ ಮಗ ಕುಣಿಯುವುದೊಂದು ಬಾಕಿ ಇತ್ತು !

ರಾತ್ರಿ ತಡವಾಗಿ ಮಲಗಿದ್ದ ಕಾರಣ ಬಾಲ್ಕಿಗೆ ಎಂದಿನಂತೆ ಬೇಗ ಏಳಲು ಸಾಧ್ಯವಾಗಲಿಲ್ಲ. ಎಚ್ಚರವಾಗಿದ್ದರೂ, ಹಾಸಿಗೆಯಿಂದ ಏಳಲು ಮನಸ್ಸಾಗಲಿಲ್ಲ.

"ಹೊತ್ತಾಯಿತು ! ಹೋಗೋಣ ! ಎದ್ದೇಳಿ ಅಂದ್ರೆ !" ಅವರ ಹಣೆಯಮೇಲೆ ಕೈಯಾಡಿಸುತ್ತ ಮೃದುವಾಗಿ ನುಡಿದಳು ವತ್ಸಲಾ.

"ವಚ್ಚು ! ಬೆಳ್ಳಂಬೆಳಿಗ್ಗೆ ಎದ್ದು ಎಲ್ಲಿಗೆ ಹೋಗ್ಬೇಕು ?"

"ಬನ್ನಿ ನನ್ ಜೊತೆ !" ಎಂದ ವಚ್ಚು ಬಾಲ್ಕಿಯ ಕೈ ಹಿಡಿದು ಕರೆದೊಯ್ಯಲು ಪ್ರಯತ್ನಿಸಿದಳು.

"ವಚ್ಚು ! ಸ್ವಲ್ಪ ತಡಿ ! ಇದೇನು ಮನೇಲಿ ಇಷ್ಟು ಜನರ ಗಲಾಟೆ ? ಪಾಪ ! ಪಾಚು ಏನೋ ಹೇಳ್ತಿದ್ದಾನೆ ! ಅಳ್ತಿದ್ದಾನೆ ! ಏನಾಗಿದ್ಯೋ ನೋಡೋಣ ಬಾ."

"ಪಾಚು ಎಲ್ಲ ನೋಡ್ಕೋತಾನೆ ! ಬನ್ನಿ ನೀವು !"

"ನಿನ್ನೆ ಎಷ್ಟು ಹುರುಪಿನೊಂದ್ಗೆ ಮ್ಯಾಚ್ ನೋಡಿದ್ರು. ಸ್ಟ್ರೈನ್ ಮಾಡ್ಕೋಬೇಡಿ ಎಂದಿದ್ದಕ್ಕೆ ಸೆಂಚುರಿ ಹೊಡೀದೆ ಹೋಗೋದಿಲ್ಲ ಎಂದಿದ್ರು. ಕೊನೆಯತನಕ ಅಪ್ಪನ ಬುದ್ಧಿ ಬಹಳ ಚುರುಕಾಗಿತ್ತು. ಆದ್ರೆ ಯಾಕೋ ಅಮ್ಮ ತೀರ್ಕೊಂಡ ವಿಷಯ ಮಾತ್ರ ಅವರಿಗೆ ಮನದಟ್ಟಾಗ್ಲೇ ಇಲ್ಲ." ಬಂದಿದ್ದ ಎಲ್ಲರಲ್ಲೂ ಇದನ್ನೇ ಹೇಳಿ ಪ್ರಲಾಪಿಸುತ್ತಿದ್ದ ಪಾಚು !

ಅಂದ್ರೆ ! ತಾನು ಗೊಟಕ್ ಅಂದೆನಾ ? ಬಾಲ್ಕಿಗೆ ತುಸು ಗೊಂದಲ ! ನಂತರ ಆಚ್ಚರಿ !

"ಗೊಟಕ್ ಆಗೋದು ಅಂದ್ರೆ ಇಷ್ಟೇನಾ ?"

"ಇಷ್ಟೇನೇ !" ಎನ್ನುತ್ತ ಎಂದಿನಂತೆ ನಕ್ಕಳು ವತ್ಸಲಾ !

■

# ಒಳ್ಳೆ ತಮಾಷೆ ... ಆದರೆ ಸತ್ಯವೂ ಹೌದು

## ಯಾವತ್ತೂ ಒಂದ್ ಮಸ್ಸಾಲೆ, ಒಂದ್ ವಡೆ, ಒಂದ್ ಪ್ಲೇಟ್ ಪೂರಿ, ಚೌ ಚೌ ಬಾತ್ ಮತ್ತು ಕಾಫಿ ಆರ್ಡರ್ ಮಾಡುವ ರಾಂಕಿ ಬೆಳ್ಳೂರು ಅವರಿಂದ ಸಾರ್ವಜನಿಕ ಹಿತಾಸಕ್ತಿಗಾಗಿ ಹೊರಡಿಸಲಾಗಿದೆ

**ಒಬ್ಬ ವ್ಯಕ್ತಿ ಹೋಟೆಲ್‌ನಲ್ಲಿ ಕೇವಲ ಒಂದು ಇಡ್ಲಿ ಮಾತ್ರ ಆರ್ಡರ್ ಮಾಡಿದರೆ, ಅದು ದೇಶದ ಆರ್ಥಿಕತೆಗೆ ವಿಪತ್ತು**



ಅವನು ಹೆಚ್ಚಾಗಿ ವಡೆ ಆರ್ಡರ್ ಮಾಡುವುದಿಲ್ಲ...
ಮಸಾಲ ದೋಸೆಗೂ ಅಪ್‌ಗ್ರೇಡ್ ಮಾಡುವುದಿಲ್ಲ...
ಫಿಲ್ಟರ್ ಕಾಫಿ ರಿಫಿಲ್ ತೆಗೆದುಕೊಳ್ಳುವುದಿಲ್ಲ...
ಕೇಸರಿಬಾತ್ ಅಥವಾ ಜಾಮೂನ್ ಮುಂತಾದ ಡೆಸರ್ಟ್‌ಗಳನ್ನು ತಪ್ಪಿಸುತ್ತಾನೆ...
"ಒಂದು ಇಡ್ಲಿ ಮಾತ್ರ ತಿಂದೆ" ಎಂದು ಟಿಪ್ ಕೂಡ ಸರಿಯಾಗಿ ಕೊಡುವುದಿಲ್ಲ...
₹20ಕ್ಕೆ 20 ನಿಮಿಷ ಪೂರ್ಣ ಟೇಬಲ್‌ನ್ನು ಆಕ್ರಮಿಸುತ್ತಾನೆ...

**ಹೌದು... ಹಾಗೇ ನೋಡಿದರೆ, ಅಯ್ಯೋ!!**

ಕಡಿಮೆ ತಿನ್ನುವವರು ಆರ್ಥಿಕತೆಗೆ ಒಳ್ಳೆಯದಲ್ಲ.
ಅವರು ಬಲ್ಕ್ ಆರ್ಡರ್ ಮಾಡುವುದಿಲ್ಲ.
ಜಿ ಎಸ್ ಟಿ ಸಂಗ್ರಹಣೆಯನ್ನು ಹೆಚ್ಚಿಸುವುದಿಲ್ಲ.
ಸರ್ವರ್‌ಗಳಿಗೆ 'ಟಾರ್ಗೆಟ್ ಬಿಲ್ಲಿಂಗ್ ಮೊತ್ತ' ತಲುಪಲು ಸಹಾಯ ಮಾಡುವುದಿಲ್ಲ.

ಇನ್ನೊಂದೆಡೆ...

ಒಂದು ದೊಡ್ಡ ಕುಟುಂಬ 12 ದೋಸೆ, 8 ವಡೆ, 6 ಕಾಫಿ ಮತ್ತು 3 ಡೆಸರ್ಟ್‌ಗಳನ್ನು ಆರ್ಡರ್ ಮಾಡಿದರೆ, ಅದು ಉದ್ಯೋಗ, ಸಂತೋಷ ಮತ್ತು ಸ್ವಲ್ಪ ಅಜೀರ್ಣವನ್ನೂ ಸೃಷ್ಟಿಸುತ್ತದೆ!

ಹೋಟೆಲ್‌ಗಳು ಅಭಿವೃದ್ಧಿಯಾಗುತ್ತವೆ.
ರೈತರು ಸಂತೋಷಪಡುತ್ತಾರೆ.
ಡಿಲಿವರಿ ಆ್ಯಪ್‌ಗಳು ಸಂಭ್ರಮಿಸುತ್ತವೆ.
ಗಿಗ್ ವರ್ಕರ್‌ಗಳು ನಗುತಾರೆ.
ಜಿಮ್ ಸದಸ್ಯತ್ವಗಳು ಹೆಚ್ಚುತ್ತವೆ.
ಆಸ್ಪತ್ರೆಗಳು ಕೂಡ ಬೆಳೆಯುತ್ತವೆ.

ಬುದ್ಧಿವಂತಿಕೆಯಿಂದ ಆಯ್ಕೆ ಮಾಡಿ: 'ಒನ್ ಇಡ್ಲಿ ಮಿನಿಮಲಿಸ್ಟ್' ಆಗಬೇಕಾ? ಅಥವಾ 'ಫುಲ್ ಮೀಲ್ ಮ್ಯಾಕ್ಸಿಮೈಸರ್' ಆಗಬೇಕಾ?
ಒಮ್ಮೆ ಯೋಚಿಸಿ ನೋಡಿ!!

**ವಿ.ಸೂ.:** ಇಬ್ಬರು ಒಂದೇ ಪ್ಲೇಟ್ ಹಂಚಿಕೊಳ್ಳುವುದು ಇನ್ನೂ ಕೆಟ್ಟದು. ಪೂರ್ಣ ಆರ್ಥಿಕ ಕುಸಿತ!